ಅಖಿಲ

ಭಾರತ

ಪತ್ರಿಕೆ

ಫೆಬ್ರವರಿ 2017



# ದೇವರುಗಳ ಮಾತೆ

ಬೆಲೆ : 15/–



*My Lord, every day,*
*in all circumstances, let me repeat*
*with the full sincerity of my heart,*
*"May Thy Will be done and not mine."*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### “ದೇವರುಗಳ ಮಾತೆ”


**ಅನು : ಡಾ. ಕೆ.ಎಸ್. ಆಮೂರ**

ದೇವನ ಮಾತೆ (ಕವಿತೆ) 3

ಪರಮೋಚ್ಚ ಸೃಷ್ಟ್ಯಾತ್ಮಕಳಾದವಳ ದೈವೀ ಸಾಮರ್ಥ್ಯ 4

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಶ್ರೀಮಾತೆ ಹಾಗೂ ದೇವರುಗಳು 13

**ಅನು : ಡಾ. ಕೆ.ಎಸ್. ಆಮೂರ**

ದೇವರುಗಳ ರೂಪ ಹಾಗೂ ಕಾರ್ಯವಿಧಾನ 21

ದೇವರುಗಳು ಹಾಗೂ ಮನುಕುಲ 38

## (All India Magazine) ಸಂಪಾದಕೀಯ:

ಪರಿವರ್ತನೆ ಕುರಿತು ಶ್ರೀಮಾತೆಯವರ ಕಾರ್ಯ ಮನುಷ್ಯನಿಗೆ ಮಾತ್ರ ಸೀಮಿತವಾಗಿರಲಿಲ್ಲ. ಪ್ರಜ್ಞೆಯ ಭಿನ್ನ ಹಂತಗಳು ಹಾಗೂ ಸ್ತರಗಳ ಮೇಲೆ ಹಲವಾರು ಜೀವಿಗಳಿವೆ, ಮನುಷ್ಯ ಅವುಗಳಲ್ಲಿ ಒಂದು ಕೊಂಡಿಯಾಗಿದ್ದಾನೆ, ಮನುಷ್ಯ ಅತಿಮಾನಸ ಜೀವಿಯಾಗುವಂತೆ ಪರಿವರ್ತನೆ ಹೊಂದಿದಾಗ ಆ ಇತರ ಜೀವಿಗಳ ಮೇಲೆಯೂ ಕೂಡ ಅದರ ಪರಿಣಾಮವಾಗಲೇಬೇಕು. ಈ ಎಲ್ಲ ಕೊಂಡಿಗಳನ್ನು ಪರಿಗಣಿಸಬೇಕಾಗಿತ್ತು ಹಾಗೂ ಅವುಗಳ ಮೇಲೆ ಕಾರ್ಯ–ಕೈಕೊಳ್ಳಬೇಕಾಗಿತ್ತು. ಆ ಜೀವಿಗಳ ಮಧ್ಯೆ ಸೃಷ್ಟಿಯ ಆವರ್ತ (cycle) ಗಳ ಮೇಲೆ ಇಲ್ಲಿಯವರೆಗೆ ಆಳಿಕೆ ನಡೆಸಿದ ದೇವರುಗಳಿದ್ದಾರೆ. ಅತಿಮಾನಸ ಪ್ರಜ್ಞೆ ಮುಂದಿನ ಆವರ್ತವನ್ನು ಕೊಂಡೊಯ್ಯುವುದರಿಂದ ಮನುಷ್ಯರೊಡನೆ ಹಾಗೂ ಪೃಥ್ವಿ–ಯೊಡನೆ ದೇವರುಗಳ ಸಂಬಂಧ ಬದಲಾಗಲೇಬೇಕು. ಶ್ರೀಮಾತೆಯವರು ಪೃಥ್ವಿಯ ಅದರ ಜನರ, ಪಕ್ಷಿಗಳ, ಸಸ್ಯಗಳ ಹಾಗೂ ಪಶುಗಳ ಮಾತೆಯಾಗಿದ್ದಾರೆ ಅಷ್ಟೇ ಅಲ್ಲ, ದೇವರುಗಳು, ದೈತ್ಯರೂ ಕೂಡ ಅವರ ಮಕ್ಕಳಾಗಿದ್ದಾರೆ. ಅವರ ದೈವೀ ಪ್ರೇಮವನ್ನು ಅವರು ಈ ಮಕ್ಕಳ ಮೇಲೆ ಧಾರೆಯೆರೆಯಬೇಕಷ್ಟೇ ಅಲ್ಲ, ಹಾಗೆಯೇ ಅತಿಮಾನಸ ಸೃಷ್ಟಿಗೆ ಅನುಕೂಲವಾಗುವ ಹೊಸ ಮಾರ್ಗವನ್ನು ಅವುಗಳಿಗೆ ಕಲಿಸಿಕೊಡಬೇಕು. ಈ ಸಂಚಿಕೆಯಲ್ಲಿ ಅವರ ಕಾರ್ಯದ ಈ ಬದಿಯನ್ನು ಕುರಿತು ವಿಷಯಗಳನ್ನು ಕೈಗೆತ್ತಿಕೊಳ್ಳುತ್ತೇವೆ.

*



**ಪ್ರಶ್ನೆ :** *ಪರಮೋಚ್ಚ ಪ್ರಭು ಜಗತ್ತನ್ನು ತಯಾರು ಮಾಡಿರೆಂದು ನಿಮಗೆ ಹೇಳಿದಾಗ ಏನನ್ನು ಕೈಕೊಳ್ಳಬೇಕು ಎಂಬುದನ್ನು ನೀವು ತಿಳಿದುಕೊಂಡದ್ದು ಹೇಗೆ?*

**ಶ್ರೀಮಾತೆ :** ಅದಕ್ಕಾಗಿ ನಾನು ಕಲಿತುಕೊಳ್ಳಬೇಕಾದುದು ಏನೂ ಇರಲಿಲ್ಲ, ಏಕೆಂದರೆ ಪರಮೋಚ್ಚ ಪ್ರಭು ಎಲ್ಲವನ್ನೂ ತನ್ನಲ್ಲಿ ಒಳಗೊಂಡಿರುತ್ತಾನೆ: ಇಡೀ ಜಗತ್ತು, ಜಗತ್ತಿನ ಬಗೆಗಿನ ಜ್ಞಾನ ಮತ್ತು ಅದನ್ನು ತಯಾರು ಮಾಡುವ ಸಾಮರ್ಥ್ಯ ಇತ್ಯಾದಿ. ಜಗತ್ತೊಂದಿರಲಿ ಎಂದು ಅವನು ನಿರ್ಧರಿಸಿದಾಗ ಮೊದಲು ಜಗತ್ತಿನ ಬಗೆಗೆ ಜ್ಞಾನವನ್ನು ಹಾಗೂ ಅದನ್ನು ತಯಾರು ಮಾಡುವ ಸಾಮರ್ಥ್ಯವನ್ನು ಹೊರತಂದನು, ಅದೇ ನಾನು ಮತ್ತು ನಂತರ ನನಗೆ ಜಗತ್ತನ್ನು ತಯಾರಿಸಲು ಆಜ್ಞೆ ಮಾಡಿದನು.

**CWM, 13/52** **– ಶ್ರೀಮಾತೆ**

*

## ದೇವನ ಮಾತೆ

ಅಸಂತೋಷ ಮರ್ತ್ಯಜನ್ಮ ಯೋಚನೆಯಲ್ಲಿಯ ದೋಷ
ಹಾಗೂ ಕಾಲಗತಿಯ ಅವ್ಯವಸ್ಥಿತಗೊಳಿಸುವ ಆಯಾಸದ ನಡಗೆ
ಇವುಗಳ ಹಿಂದಿರುವ ಪ್ರಜ್ಞಾಪೂರ್ಣ ಹಾಗೂ ಸನಾತನ ದೈವೀ
ಸಾಮರ್ಥ್ಯ ಇಲ್ಲಿಹುದು.

ದೇವನ ಮಾತೆ ಅವನ ಸಹೋದರಿ ಹಾಗೂ ಪತ್ನಿ,
ಅವನ ವಿವೇಕದ, ಬಲದ ಹಾಗೂ ಸಂಗಾತಿಯ ಪುತ್ರಿ
ಮನಸ್ಸು ಹಾಗೂ ಪ್ರಾಣಗಳ ತನ್ನ ಕಾಮನ ಬಿಲ್ಲಿನ ಜಗತ್ತುಗಳನು
ನಿರ್ಮಿಸಲು
ಅವಳು ವಿಶ್ವಾತೀತನ ರಹಸ್ಯ ಎದೆಯಿಂದ ಜಿಗಿದು ಬಂದಿಹಳು.
ಅತಿಮಾನಸ ಪರಿಪೂರ್ಣ ಪ್ರಕಾಶ ಹಾಗೂ
ಅಚೇತನದ ಯೋಚಿಸದೆ ಇರುವ ವಿಶಾಲ ಕಷ್ಟದ ಕೆಲಸ,
ಉರುಳುತ್ತಿರುವ ಭೌತದ್ರವ್ಯದ ನಿತ್ಯಗಟ್ಟಳೆ ನಿದ್ರೆ,
ತಾರೆಗಳ ನಿದ್ರಾಟನ ಸ್ಥಿತಿಯ ಚಲನೆ ಇವುಗಳ ನಡುವೆ
ಭಾವಶೂನ್ಯ ಇಷ್ಟವಿಲ್ಲದ ಶೂನ್ಯದ ಮೇಲೆ ತನ್ನ ಜೀವನದ ಸಾಹಸವನು
ತನ್ನ ಹೃದಯದ ಭಾವೋದ್ರೇಕದ ಕನಸುಗಳನು ಒತ್ತಾಯದಿಂದ
ಹೇರುವಳು.
ಸ್ಥಳಾವಕಾಶದ ಅನಿಷ್ಟಗಳನು, ತಪ್ಪುಗಳನು ವಾಸಿಮಾಡಲು
ಅಜ್ಞಾನಿ ಜಗತ್ತಿನ ದುಃಖಾಂತವನು ಸಂತೋಷದ ದೈವೀ
ಸುಖಾಂತವನ್ನಾಗಿ
ಹಾಗೂ ದೇವನಾನಂದದ ಹರ್ಷವನ್ನಾಗಿ, ನಗುವನ್ನಾಗಿ ಮಾಡಲು
ಅಂಧಕಾರದ ದೈತ್ಯ ಸಾಮರ್ಥ್ಯಗಳ ನಡುವೆ ಅವಳಿಲ್ಲಿಹಳು.
ದೇವನ ಮಾತೆ ನಮ್ಮಾತ್ಮಗಳ ಮಾತೆಯಾಗಿಹಳು;
ನಾವು ಕಾಲಗತಿಯಲಿ ಆ ದೇವನ ಜನ್ಮದಲಿ ಪಾಲುಗಾರರಾಗಿಹೆವು,
ವಾರಸುದಾರರಾದ ನಾವು ಅವನ ಶಾಶ್ವತತೆಯನು ಹಂಚಿಕೊಳ್ಳುವೆವು.

**CWSA, 2/642–43** **– ಶ್ರೀ ಅರವಿಂದರು**

*

## ಪರಮೋಚ್ಚ ಸೃಷ್ಟ್ಯಾತ್ಮಕಳಾದವಳ ದೈವೀ ಸಾಮರ್ಥ್ಯ

### ಅನನ್ಯಳಾದ ಮೂಲ ವಿಶ್ವಾತೀತ ದೈವೀಶಕ್ತಿ

ಅನನ್ಯಳಾದ ಮೂಲ ವಿಶ್ವಾತೀತ ದೈವೀಶಕ್ತಿ ಶ್ರೀಮಾತೆ ಎಲ್ಲ ಜಗತ್ತುಗಳ

ಮೇಲಿದ್ದುಕೊಂಡಿದ್ದಾಳೆ ಮತ್ತು ತನ್ನ ಸನಾತನ ಪ್ರಜ್ಞೆಯಲ್ಲಿ ಪರಮೋಚ್ಚ ಭಗವಂತನನ್ನು ಧಾರಣ ಮಾಡಿದ್ದಾಳೆ. ಏಕಾಕಿಯಾಗಿ, ಸರ್ವತಂತ್ರ ಸ್ವತಂತ್ರ ದೈವೀ ಸಾಮರ್ಥ್ಯಕ್ಕೆ ಮತ್ತು ಅನಿರ್ವಚನೀಯ ದೈವೀ ಸಾಮರ್ಥ್ಯಕ್ಕೆ ಆಶ್ರಯ ನೀಡಿದ್ದಾಳೆ. ಪ್ರಕಟಿಸಬೇಕಾಗಿರುವ ದೈವೀ ಸತ್ಯಗಳನ್ನು ಒಳಗೊಳ್ಳುತ್ತ ಇಲ್ಲವೆ ಅವುಗಳಿಗೆ ಕರೆ ಕೊಡುತ್ತ ಅವುಗಳನ್ನು ದೈವೀ ರಹಸ್ಯದಿಂದ ಕೆಳಗಿಳಿಸಿ ತರುತ್ತಾಳೆ, ಆ ರಹಸ್ಯದಲ್ಲಿ ಆ ಸತ್ಯಗಳು ಅವಳ ಅನಂತ ಪ್ರಜ್ಞೆಯ ಪ್ರಕಾಶದಲ್ಲಿ ಅಡಗಿಕೊಂಡಿರುವಂತಹ–ವಾಗಿರುತ್ತವೆ. ಆ ಸತ್ಯಗಳಿಗೆ ಅವಳು ತನ್ನ ಸರ್ವ ಸಾಮರ್ಥ್ಯದಿಂದ ಒಂದೊಂದು ಶಕ್ತಿಯ ರೂಪವನ್ನು, ಅಪಾರ ಪ್ರಾಣಶಕ್ತಿಯಿಂದ ವಿಶ್ವದಲ್ಲಿ ಒಂದೊಂದು ದೇಹವನ್ನು ಕೊಡುತ್ತಾಳೆ. ಪರಮೋಚ್ಚನು ಅವಳಲ್ಲಿ ಎಲ್ಲ ಕಾಲದಲ್ಲಿ ಸನಾತನ ಸಚ್ಚಿದಾನಂದನೆಂದು ಪ್ರಕಟನಾಗಿದ್ದಾನೆ. ಜಗತ್ತುಗಳಲ್ಲಿ, ದೈವೀ ಸ್ತರಗಳಲ್ಲಿ, ದೇವರುಗಳಲ್ಲಿ ಹಾಗೂ ಅವರ ಚೈತನ್ಯಗಳಲ್ಲಿ ಅವಳ ಮೂಲಕ ಅವನು ಈಶ್ವರ–ಶಕ್ತಿ ಎಂಬ ಏಕ ಮತ್ತು ದ್ವಿವಿಧ ಪ್ರಜ್ಞೆಯೆಂದು ಮತ್ತು ಪುರುಷ–ಪ್ರಕೃತಿಯ ತತ್ವವೆಂದು ಪ್ರಕಟನಾಗಿದ್ದಾನೆ. ಮತ್ತು ಆಕೆಯಿಂದಾಗಿಯೇ ತಿಳಿದುಬಂದ ಹಾಗೂ ತಿಳಿದು ಬಂದಿರದ ಜಗತ್ತುಗಳಲ್ಲಿ ಆಕಾರ ತಳೆದಿದ್ದಾನೆ. ಎಲ್ಲವೂ ಅವಳು ಪರಮೋಚ್ಚನೊಡನೆ ನಡೆಸಿರುವ ಲೀಲೆ. ಎಲ್ಲವೂ ಅವಳಿಂದಾದ ಸನಾತನನ ರಹಸ್ಯಗಳ, ಅನಂತನ ಪವಾಡಗಳ ಪ್ರಕಟಣೆ. ಎಲ್ಲವೂ ಅವಳೇ ಆಗಿದ್ದಾಳೆ, ಏಕೆಂದರೆ ಎಲ್ಲರೂ ದೈವೀ ಪ್ರಜ್ಞಾ–ಶಕ್ತಿಯ ಅಂಶ ಹಾಗೂ ಭಾಗಗಳಾಗಿದ್ದಾರೆ. ಅವಳು ನಿರ್ಧರಿಸಿದುದರ ಹಾಗೂ ಅದಕ್ಕೆ ಪರಮೋಚ್ಚನು ಅನುಮತಿ ನೀಡಿದುದರ ಹೊರತಾಗಿ ಇಲ್ಲಿ ಅಥವಾ ಬೇರೆಡೆಯಲ್ಲಿ ಇನ್ನೇನೂ ಇರಲಾರದು. ಪರಮೋಚ್ಚನಿಂದ ಚಾಲನೆಗೊಳಗಾಗಿ ಅವಳು ಗ್ರಹಿಸಿದುದರ ಮತ್ತು ತನ್ನ ಸೃಷ್ಟಿಸುವ ಆನಂದದಲ್ಲಿ ಬೀಜರೂಪದಲ್ಲಿ ಎರಕ ನೀಡಿದುದರ ಹೊರತಾಗಿ ಬೇರೇನೂ ಆಕಾರ ತಳೆಯಲಾರದು.

**CWSA, 32/14–15** **– ಶ್ರೀ ಅರವಿಂದರು**

*

**ಮಹಾಶಕ್ತಿ ರೂಪದವರಾದ ಶ್ರೀಮಾತೆಯವರು**

ಅವಿದ್ಯೆಯ ಮೂರು ಲೋಕಗಳ ಮಹಾಶಕ್ತಿಯೆಂದಾಗಿ ಶ್ರೀಮಾತೆ ಪೃಥ್ವಿ ಮತ್ತು ಪೃಥ್ವಿಯ ಮೇಲೆ ಕೆಳಗಿಳಿಸಿ ತರಬೇಕಾದ ಅತಿಮಾನಸ ಪ್ರಕಾಶ, ದೈವೀ

ಸತ್ಯದ ಜೀವನ, ಸತ್ಯದ ದೈವೀ ಸೃಷ್ಟಿ ಇದೆಲ್ಲ ಇರುವ ಲೋಕ ಇವುಗಳಿಗೆ ಮಧ್ಯವರ್ತಿಯಾದ ಸ್ತರದಲ್ಲಿ ನಿಂತಿರುತ್ತಾಳೆ. ಮೇಲಕ್ಕೇರಿ ಹೋಗಲು ಮತ್ತು ಕೆಳಗಿಳಿದು ಬರಲು ಇರುವ ಪ್ರಜ್ಞೆಯ ಸ್ತರಗಳ ಶ್ರೇಣಿ ವ್ಯವಸ್ಥೆ ಎರಡು ಬಗೆಯ ಏಣಿಗಳಿದ್ದ ಹಾಗಿದೆ. ಕೆಳಗಿಳಿದು ಬಂದ ಪ್ರಜ್ಞೆ ಅಚೇತನದಲ್ಲಿ ಅಡಗಿ ಹೋಗುತ್ತದೆ. ಅದೇ ಮತ್ತೆ ಪ್ರಾಣ, ಜೀವ, ಮನಸ್ಸುಗಳ ಅರಳಿಕೊಳ್ಳುವಿಕೆಯ ಮೂಲಕ ಮೇಲಕ್ಕೇರಿ ಹೋಗಿ ಅನಂತ ದಿವ್ಯಾತ್ಮನನ್ನು ತಲುಪುತ್ತದೆ. ತಾನು ಕಂಡುಕೊಂಡುದುದರ ಹಾಗೂ ಭಾವನೆಗೆ ತಂದುಕೊಂಡುದುದರ ಮೂಲಕ ಮತ್ತು ತನ್ನಿಂದ ಸುರಿದುಹೋದುದರ ಮೂಲಕ ಆ ಮಹಾಶಕ್ತಿ ಈ ವಿಶ್ವದಲ್ಲಿ ಹಾಗೂ ಪೃಥ್ವಿಯ ಮೇಲಿನ ಉತ್ಕ್ರಾಂತಿಯಲ್ಲಿ ಇರಬೇಕಾದುದನ್ನು ನಿರ್ಧರಿಸುತ್ತ ದೇವತೆಗಳಿರುವ ಸ್ತರದ ಮೇಲ್ಗಡೆ ನಿಂತಿರುತ್ತಾಳೆ, ತನ್ನ ಎಲ್ಲ ದೈವೀ ಸಾಮರ್ಥ್ಯಗಳನ್ನು ಹಾಗೂ ದೈವೀ ವ್ಯಕ್ತಿವಿಶಿಷ್ಟತೆಗಳನ್ನು ತನ್ನ ಮುಂದೆ ಆಕೆ ಇರಿಸಿಕೊಂಡಿರುತ್ತಾಳೆ. ಇವುಗಳಿಂದ ಉದ್ಭವಿಸಿದವುಗಳನ್ನು ಈ ನಿಮ್ನತರ ಲೋಕಗಳಲ್ಲಿ ಮಧ್ಯೆ ಪ್ರವೇಶಿಸಲು, ಆಳಿಕೆ ನಡೆಸಲು, ಅವುಗಳ ಚಕ್ರಗತಿಗಳನ್ನು ಮುನ್ನಡೆಸಲು, ತಿರುಗಿಸಲು, ಆ ಶಕ್ತಿಗಳ ಇಡಿಯಾದ ಹಾಗೂ ವ್ಯಕ್ತಿವಿಶಿಷ್ಟವಾದ ಧಾರೆಗಳನ್ನು ನಿರ್ದೇಶಿಸಲು ಕೆಳಗೆ ಕಳಿಸಿಕೊಡುತ್ತಾಳೆ. ಹಾಗೆ ಉದ್ಭವವಾದವುಗಳಲ್ಲಿರುವ ಮಹಾಶಕ್ತಿಯನ್ನು ಬೇರೆ, ಬೇರೆ ಹೆಸರುಗಳಿಂದ ಜನರು ಯುಗ–ಯುಗಾಂತರಗಳಲ್ಲಿ ಪೂಜಿಸುತ್ತ ಬಂದಿದ್ದಾರೆ. ಆದರೆ ಹಾಗೆಯೇ ಈ ದೈವೀ ಸಾಮರ್ಥ್ಯಗಳು ಹಾಗೂ ಅವುಗಳಿಂದ ಉದ್ಭವವಾದವುಗಳ ಮೂಲಕ ತನ್ನ ವಿಭೂತಿಗಳನ್ನು ತಯಾರು ಮಾಡುತ್ತಾಳೆ ಮತ್ತು ಅವುಗಳಿಗೆ ಆಕಾರ ನೀಡುತ್ತಾಳೆ. ಈ ವಿಧಾನ ಅವಳು ಈಶ್ವರನ ವಿಭೂತಿಗಳ ಮನಸ್ಸುಗಳನ್ನು ಹಾಗೂ ದೇಹಗಳನ್ನು ತಯಾರು ಮಾಡುವ ರೀತಿಯದೇ ಆಗಿರುತ್ತದೆ. ಅದರಿಂದಾಗಿ ಭೌತಿಕ ಜಗತ್ತಿನಲ್ಲಿ ಮತ್ತು ಮಾನವ ಮನಸ್ಸಿನ ವೇಷಾಂತರ (disguise) ದಲ್ಲಿ ಅವಳು ತನ್ನ ಸಾಮರ್ಥ್ಯ, ಗುಣಮಟ್ಟ ಮತ್ತು ಸಾನ್ನಿಧ್ಯ ಇವುಗಳ ಸ್ವಲ್ಪ ಮಟ್ಟಿಗಿನ ಕಿರಣವನ್ನು ಪ್ರಕಟಿಸುವಂತಾಗುತ್ತದೆ. ಪೃಥ್ವಿಯ ಮೇಲಿನ ಲೀಲೆಯ ದೃಶ್ಯಗಳೆಲ್ಲ ವ್ಯವಸ್ಥೆಗೊಳಪಡಿಸಿದ, ಸಂಯೋಜಿಸಿದ ಒಂದು ನಾಟಕವನ್ನಾಗಿಸಿವೆ, ಅದರಲ್ಲಿ

ಅವಳ ಸಹಾಯಕ್ಕಾಗಿ ವಿಶ್ವವ್ಯಾಪಿ ದೇವರುಗಳಿದ್ದಾರೆ, ಅವಳೇ ಸ್ವತಃ ಪರದೆಯ ಹಿಂದಿರುವ ಅಭಿನೇತ್ರಿಯಾಗಿದ್ದಾಳೆ.

**CWSA, 32/16–17** **– ಶ್ರೀ ಅರವಿಂದರು**

*

## ಶ್ರೀಮಾತೆಯ ನಾಲ್ಕು ಶ್ರೇಷ್ಠ ಮುಖಗಳು

ಶ್ರೀಮಾತೆಯ ನಾಲ್ಕು ಶ್ರೇಷ್ಠ ಮುಖಗಳು, ನೇತೃತ್ವ ವಹಿಸುವ ಅವಳ ನಾಲ್ಕು ದೈವೀ ಸಾಮರ್ಥ್ಯಗಳು ಮತ್ತು ದೈವೀ ವ್ಯಕ್ತಿವಿಶಿಷ್ಟತೆಗಳು ವಿಶ್ವಕ್ಕೆ ಮಾರ್ಗದರ್ಶನ ನೀಡುವ ಕಾರ್ಯದಲ್ಲಿ ಹಾಗೂ ಪೃಥ್ವಿಯ ಮೇಲಿನ ಲೀಲೆಯೊಡನೆ ವ್ಯವಹರಿಸು–ವುದರಲ್ಲಿ ಮುಂಚೂಣಿಯಲ್ಲಿ ನಿಂತುಕೊಂಡಿವೆ. ಅವಳ ವ್ಯಕ್ತಿವಿಶಿಷ್ಟತೆಗಳಲ್ಲಿ ಒಂದು ಅಚಲ ವೈಶಾಲ್ಯವುಳ್ಳದ್ದು, ಎಲ್ಲವನ್ನೂ ಗ್ರಹಿಸುವ ವಿವೇಕ ಮತ್ತು ಪ್ರಶಾಂತ ಅನುಕಂಪ, ಅಕ್ಷಯ ಕರುಣೆ, ಸಾರ್ವಭೌಮ ಮತ್ತು ಅತಿಶಯಿಸುವ ಗಾಂಭೀರ್ಯ ಹಾಗೂ ಎಲ್ಲವನ್ನೂ ಆಳುವ ಶ್ರೇಷ್ಠತೆ ಇವುಗಳನ್ನೆಲ್ಲ ಹೊಂದಿರುವಂತಹದು. ಅವಳ ಇನ್ನೊಂದು ವ್ಯಕ್ತಿವಿಶಿಷ್ಟತೆ ಭವ್ಯ ಬಲದ ಸಾಮರ್ಥ್ಯವನ್ನು, ಎದುರಿಸಲಾಗದ ಭಾವೋನ್ಮತ್ತತೆಯನ್ನು, ರಭಸದ ತೀವ್ರತೆಯನ್ನು ಜಗತ್ತನ್ನೇ ಅಲುಗಾಡಿಸುವ ಶಕ್ತಿಯನ್ನು ಹೊಂದಿದೆ. ಅವಳ ಮೂರನೆಯ ವ್ಯಕ್ತಿವಿಶಿಷ್ಟತೆ ಉಲ್ಲಾಸಭರಿತ, ಮಧುರ ಹಾಗೂ ಅದ್ಭುತವಾದದ್ದು, ಇದೆಲ್ಲದರೊಂದಿಗೆ ಸೌಂದರ್ಯದ ಆಳವಾದ ರಹಸ್ಯ, ಸಾಮರಸ್ಯ ಹಾಗೂ ಲಯಬದ್ಧತೆ, ಜಟಿಲವಾದ ಹಾಗೂ ಸೂಕ್ಷ್ಮ ಶ್ರೀಮಂತಿಕೆ, ಒತ್ತಾಯ ತರುವ ಆಕರ್ಷಣೆ ಮತ್ತು ಮನಸೆಳೆಯುವ ಮೋಹಕತೆ ಇವೆಲ್ಲ ಜೊತೆಗೂಡಿರುತ್ತವೆ. ನಾಲ್ಕನೆಯ ವ್ಯಕ್ತಿವಿಶಿಷ್ಟತೆ ನಿಕಟ ಜ್ಞಾನಕ್ಕಾಗಿ ಮತ್ತು ಕಾಳಜಿಪೂರ್ವಕ ದೋಷರಹಿತ ಕಾರ್ಯಕ್ಕಾಗಿ, ಎಲ್ಲ ವಸ್ತು–ವಿಷಯಗಳಲ್ಲಿ ಅಚಂಚಲ, ನಿಖರವಾದ ಪರಿಪೂರ್ಣತೆಗಾಗಿ ತೆರಪಿಲ್ಲದ ಹಾಗೂ ಗಾಢವಾದ ಕ್ಷಮತೆಯೊಂದಿಗೆ ಸಜ್ಜಾಗಿದೆ. ವಿವೇಕ, ಬಲ, ಸಾಮರಸ್ಯ ಹಾಗೂ ಪರಿಪೂರ್ಣತೆ ಇವು ಆ ವ್ಯಕ್ತಿವಿಶಿಷ್ಟತೆಗಳ ಅನೇಕ ಗುಣಲಕ್ಷಣಗಳು ಮತ್ತು ಇವುಗಳೇ ಜಗತ್ತಿನಲ್ಲಿ ಈ ಸಾಮರ್ಥ್ಯಗಳನ್ನು ತಮ್ಮೊಡನೆ ತರುತ್ತವೆ, ಮಾನವರ ಮಾರುವೇಷದಲ್ಲಿ ತಮ್ಮ ವಿಭೂತಿಗಳನ್ನು ಪ್ರಕಟಿಸುತ್ತವೆ; ಶ್ರೀಮಾತೆಯವರ ನೇರ ಹಾಗೂ ಜೀವಂತ ಪ್ರಭಾವಕ್ಕೆ ತಮ್ಮ ಪಾರ್ಥಿವ ಸ್ವಭಾವವನ್ನು ತೆರೆದಿರಿಸಿ ಇಟ್ಟುಕೊಳ್ಳಬಲ್ಲವರಲ್ಲಿ ಆ

ಪ್ರಕಟಣೆಗಳನ್ನು ಸ್ಥಾಪಿಸುತ್ತವೆ. ಈ ನಾಲ್ಕು ವ್ಯಕ್ತಿವಿಶಿಷ್ಟತೆಗಳಿಗೆ ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ಎಂಬ ಶ್ರೇಷ್ಠ ಹೆಸರುಗಳನ್ನು ನಾವು ಕೊಡುತ್ತೇವೆ.

**CWSA, 32/17–18** **– ಶ್ರೀ ಅರವಿಂದರು**

*

**ಶ್ರೀಮಾತೆಯ ಇನ್ನಿತರ ಶ್ರೇಷ್ಠ ವ್ಯಕ್ತಿವಿಶಿಷ್ಟತೆಗಳು**

ಶ್ರೀಮಾತೆಯ ಇನ್ನಿತರ ಶ್ರೇಷ್ಠ ದೈವೀ ವ್ಯಕ್ತಿವಿಶಿಷ್ಟತೆಗಳಿವೆ. ಆದರೆ ಅವುಗಳನ್ನು ಕೆಳಗಿಳಿಸಿ ತರುವುದು ಹೆಚ್ಚು ಕಠಿಣವಾದದ್ದು ಮತ್ತು ಅವು ಪೃಥ್ವಿಯ ಮೇಲಿನ ಉತ್ಕ್ರಾಂತಿಯಲ್ಲಿ ಅಷ್ಟೊಂದು ಪ್ರಾಮುಖ್ಯತೆಯಿಂದ ಎದ್ದು ಕಾಣುವಂತೆ ಮುಂಭಾಗಕ್ಕೆ ಬಂದಿಲ್ಲ. ಅವುಗಳ ಮಧ್ಯೆ ಅತಿಮಾನಸ ಸಿದ್ಧಿಗೆ ಅತ್ಯಗತ್ಯವಾಗಿರುವ ದೈವೀ ಸಾನ್ನಿಧ್ಯಗಳಿವೆ–ಈ ಎಲ್ಲವುಗಳಲ್ಲಿ ರಹಸ್ಯಮಯ ಮತ್ತು ಸಾಮರ್ಥ್ಯಪೂರ್ಣ ಭಾವಪರವಶತೆ ಹಾಗೂ ಆನಂದಗಳಿರುವ ಅವಳ ದೈವೀ ವ್ಯಕ್ತಿವಿಶಿಷ್ಟತೆಯೊಂದು ಹೆಚ್ಚು ಶ್ರೇಷ್ಠವಾದದ್ದಾಗಿದೆ. ಪರಮೋಚ್ಚ ದೈವೀ ಪ್ರೇಮದಿಂದ ಪ್ರವಹಿಸುವ ಈ ಆನಂದ ಮಾತ್ರ ದೈವಿಕತೆಯ ಅತ್ಯುಚ್ಚ ಶಿಖರಗಳು ಮತ್ತು ಭೌತದ್ರವ್ಯದ ಅತಿ ನಿಮ್ನ ಸೃಷ್ಟಿಯ ಪೂರ್ವದಲ್ಲಿ ಎಲ್ಲವೂ ಅಸ್ತವ್ಯಸ್ತವಾಗಿದ್ದ ಕೂಪಗಳು ಇವುಗಳ ನಡುವಿನ ಕಂದರವನ್ನು ಕೊನೆಗಾಣಿಸಬಲ್ಲದು. ಅದ್ಭುತವಾದ ಅತ್ಯಂತ ದೈವಿಕ ಜೀವನದ ಬೀಗದ ಕೈಯನ್ನು ಈ ಆನಂದ ಹಿಡಿದುಕೊಂಡಿದೆ. ಮತ್ತು ಈಗಲೂ ಕೂಡ ತನ್ನ ರಹಸ್ಯಗಳಿಂದ ವಿಶ್ವದ ಎಲ್ಲ ಇತರ ದೈವೀ ಸಾಮರ್ಥ್ಯಗಳಿಗೆ ಆಧಾರ ನೀಡುತ್ತದೆ.

**CWSA, 32/23–24** **– ಶ್ರೀ ಅರವಿಂದರು**

*



ಅವಳಂತರಂಗದಲ್ಲಿ ಮುದ್ರೆಯಲಿದ್ದ ಅಭಿನ್ನತೆ ಎಚ್ಚತ್ತುಕೊಂಡಿಹುದು;
ತಾನು ಪರಮೋಚ್ಚನ ಪ್ರಿಯೆ ಎಂಬುದನು ತಿಳಿದುಕೊಂಡಿಹಳು:
ಈ ಎಲ್ಲ ದೇವರುಗಳು ಹಾಗೂ ದೇವಿಯರು ಅವನು ಹಾಗೂ
ಅವಳಾಗಿಹರು :
ಅವಳು ದೈವೀ ಸೌಂದರ್ಯ ಹಾಗೂ ದಿವ್ಯಾನಂದಗಳ ಮಾತೆಯಾಗಿಹಳು,
ಬ್ರಹ್ಮನ ವಿಶಾಲ ಸೃಷ್ಟಿಸುವ ಹಿಡಿತದಲಿ ದೈವೀ ಶಬ್ದ,
ಸರ್ವಶಕ್ತ ಶಿವನ ತೊಡೆಯ ಮೇಲೆ ಜಗತ್ತಿನ ಪ್ರಾಬಲ್ಯ
ಎಲ್ಲ ಜೀವಿಗಳ ಪ್ರಭು ಹಾಗೂ ಮಾತೆಯಾದ ಅವರಿಬ್ಬರು
ಅರ್ಥಪೂರ್ಣ ನೋಟದಿಂದ ಅವರಿಬ್ಬರು ತಯಾರಿಸಿದ ಜಗತ್ತುಗಳ
ಮೇಲೆ ಕಾವಲಿರಿಸುತ್ತ,
ದಿವ್ಯಾನಂದದಲಿ ಎಂದೆಂದಿಗೂ ಹಾಸು ಹೊಕ್ಕಾಗಿ ಹೆಣೆದುಕೊಂಡ ಶ್ರೀಕೃಷ್ಣ
ಹಾಗೂ ರಾಧಾ,
ಆರಾಧಿಸುವವರು, ಆರಾಧನೆಗೊಳಗಾದವರು ತಮ್ಮಲ್ಲಿಯೇ ತಮ್ಮನ್ನು
ಕಳೆದುಕೊಂಡು ಏಕವಾಗಿಹರು.
ಕೊನೆಯ ಕೋಣೆಯಲಿರುವ ಬಂಗಾರದ ಆಸನದಲಿ ಒಬ್ಬ ಕುಳಿತಿಹನು
ಅವನ ಆಕಾರವನು ಯಾವ ದೃಷ್ಟಿಯೂ ಸ್ಪಷ್ಟವಾಗಿ ಹೇಳಲಾರದು;
ಪಡೆಯಲಾಗದ ಕಾರಂಜಿ ಇರುವುದರ ಬಗ್ಗೆ ಮನುಷ್ಯ ಕೇವಲ ಭಾವನೆ
ತಂದುಕೊಂಡಿಹನು,
ದೈವೀ ಸಾಮರ್ಥ್ಯವೊಂದಿಹುದು, ಅದಕ್ಕವಳು ಅಲೆದಾಡುತಿಹ ದೈವೀ
ಶಕ್ತಿಯಾಗಿಹಳು,

ಒಬ್ಬ ದೈವೀ ಸೂರ್ಯ, ಎಲ್ಲ ಜ್ಞಾನ ಅವನದೊಂದು ಪ್ರಭೆಯಾಗಿಹುದು,
ಒಂದು ದೈವೀ ಶ್ರೇಷ್ಠತೆ, ಅದಿಲ್ಲದೆ ಯಾವ ಜೀವನವೂ ಸಾಧ್ಯವಾಗದು.

**ಸಾವಿತ್ರಿ, ಪು.525** **– ಶ್ರೀ ಅರವಿಂದರು**

*

## ನಾನು ಯಾವಾಗಲೂ ಅಲ್ಲಿದ್ದೆ

ನಾನು ಒಂದು ದಿನ ಹೇಳಿದ್ದೆ, ಪೃಥ್ವಿಯ ಮೇಲೆ ದೈವೀ ಪ್ರಜ್ಞೆ ಪ್ರಕಟವಾಗುವ ಸಾಧ್ಯತೆಯಿದ್ದೆಡೆಯಲ್ಲೆಲ್ಲ ನಾನಿದ್ದೆ, ಇದು ವಾಸ್ತವ ಸಂಗತಿ.* ಇದು ಸಾವಿತ್ರಿಯ ಕತೆಯ ಹಾಗೆ: ಯಾವಾಗಲೂ ಅಲ್ಲಿ, ಈ ಒಂದು ಅವಧಿಯಲ್ಲಿ, ಆ ಒಂದು ಅವಧಿಯಲ್ಲಿ ನಾಲ್ಕು ಉದ್ಭವಿಸಿದ ವ್ಯಕ್ತಿ (emanations) ಗಳಿದ್ದರು. ಅದು ಇಟಲಿ ಹಾಗೂ ಫ್ರಾನ್ಸ ದೇಶಗಳ ಪುನರುಜ್ಜೀವನ ಕಾಲದಲ್ಲಾಗಿತ್ತು. ಮತ್ತೆ ಕ್ರಿಸ್ತನ ಕಾಲದಲ್ಲಿಯೂ ಕೂಡ, ಹಾಗೂ ಕೂಡ . . . ನಾನು ಎಷ್ಟೊಂದು ವಿಷಯಗಳನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ ಎಂಬುದು ನಿಮಗೆ ತಿಳಿದಿದೆಯೆ? ಅದೆಲ್ಲವನ್ನೂ ಹೇಳಲು ಹಲವಾರು ಸಂಪುಟಗಳು ಬೇಕಾಗುತ್ತವೆ ಮತ್ತು ಬಹಳಷ್ಟು ಸಲ ಈ ಜೀವನದಲ್ಲಿ ಇಲ್ಲವೆ ಆ ಜೀವನದಲ್ಲಿ ಭಾಗವಹಿಸಿದ್ದಾಗಿದ್ದು ಪ್ರಾಣಿಕ ಸತ್ತೆಯ ಒಂದು ವಿಶಿಷ್ಟ ಯೌಗಿಕ ರೂಪು ತಾಳುವಿಕೆಯಾಗಿತ್ತು– ಬೇರೆ ಶಬ್ದಗಳಲ್ಲಿ ಹೇಳುವು–ದಾದರೆ, ಅದು ಅಮರವಾದ ಏನೋ ಒಂದು [ಈ ರೂಪಗಳಲ್ಲಿ ಪ್ರತಿಯೊಂದೂ ಸ್ವತಂತ್ರ ಹಾಗೂ ಅಮರ ಅಸ್ತಿತ್ವವಾಗಿತ್ತು]. ನಾನು ಈ ಸಲ ಜನ್ಮ ತಾಳಿ ಬಂದಾಗ, ನಾನು ಯೋಗವನ್ನು ಕೈಕೊಂಡ ಕೂಡಲೆ ಅವು ಎಲ್ಲ ಬದಿಗಳಿಂದ ಮರಳಿ ಬಂದವು, ಅವು ನಾನು ಬರುವುದನ್ನು ಕಾದುಕೊಂಡಿದ್ದವು. ಕೆಲವು ಸರಳವಾಗಿ ಕಾದುಕೊಂಡಿದ್ದವು, ಇನ್ನುಳಿದವುಗಳು ಕಾರ್ಯಕೈಕೊಳ್ಳುತ್ತಿದ್ದವು (ಅವು ತಮ್ಮದೇ ಸ್ವತಂತ್ರ ಜೀವನ ನಡೆಸುತ್ತಿದ್ದವು.) ಅವೆಲ್ಲವೂ ಮತ್ತೆ ಕೂಡಿಕೊಂಡವು. ಆ ಕಾರಣದಿಂದಾಗಿ ನನಗೆ ಈ ನೆನಪುಗಳು ಬರುತ್ತಿವೆ. ಒಂದರ ನಂತರ ಒಂದರಂತೆ ಆ ಪ್ರಾಣಿಕ ಜೀವಿಗಳು ಬರುತ್ತಿದ್ದವು, ಅದೊಂದು ಮಹಾಪ್ರಳಯದಂತಿತ್ತು. ನಾನು

---

* ಪೃಥ್ವಿಯ ಜೀವನ ಪ್ರಾರಂಭವಾದಾಗಿನಿಂದ ಎಲ್ಲೆಲ್ಲಿ ಮತ್ತು ಯಾವಾಗ ದೈವೀಪ್ರಜ್ಞೆಯ ಕಿರಣವೊಂದನ್ನು ಪ್ರಕಟಿಸುವ ಸಾಧ್ಯತೆ ಇದ್ದಿತೋ ನಾನಲ್ಲಿದ್ದೆ.

**CWM, 13/32** **– ಶ್ರೀಮಾತೆ**

ಒಂದನ್ನು ಜೀರ್ಣಿಸಿಕೊಳ್ಳುವುದಕ್ಕೆ, ಅದನ್ನು ನೋಡಿ ಅದಕ್ಕೆ ಸ್ಥಾನ ನೀಡುವುದಕ್ಕೆ, ಒಟ್ಟುಗೂಡಿಸಿಕೊಳ್ಳುವುದಕ್ಕೆ ಸಮಯ ಸಾಕಷ್ಟಿರದೇ ಇದ್ದಾಗ ಇನ್ನೊಂದು ಬರುತ್ತಿತ್ತು. ಅವು ಬಹಳ ಸ್ವತಂತ್ರವಾಗಿವೆ, ಸಹಜವಾಗಿ ಅವು ತಮ್ಮ ಕಾರ್ಯವನ್ನು ಕೈಕೊಳ್ಳುತ್ತವೆ, ಹಾಗೆಯೇ ಅವು ಕೇಂದ್ರೀಕೃತವಾಗಿವೆ. ಅಲ್ಲಿ ಎಲ್ಲ ಬಗೆಯವೂ ಇವೆ, ನೀವು ಕಲ್ಪಿಸಿಕೊಳ್ಳಬಹುದಾದಂತಹ ಎಲ್ಲವೂ ಇವೆ! ಅವುಗಳಲ್ಲಿ ಕೆಲವು ಪುರುಷರಲ್ಲಿಯೂ ಇದ್ದವು, ಅವು ಪ್ರತ್ಯೇಕವಾಗಿ ಸ್ತ್ರೀಗೆ ಸಂಬಂಧಿಸಿದವಾಗಿಲ್ಲ...

ನಾನು ಶ್ರೀ ಅರವಿಂದರನ್ನು ಭೇಟಿ ಮಾಡುವುದಕ್ಕಿಂತ ಮೊದಲು ಅವು ಪ್ರತಿದಿನ ರಾತ್ರಿ ಧಾರಳವಾಗಿ ಬಂದೇ ಬರುತ್ತಿದ್ದವು, ಕೆಲವೊಮ್ಮೆ ಹಗಲಿನ ಹೊತ್ತಿನಲ್ಲೂ ಕೂಡ ಬರುತ್ತಿದ್ದವು– ಅವುಗಳದೊಂದು ಮೊತ್ತವೇ ಇರುತ್ತಿತ್ತು. ನಂತರ ನಾನು ಅದರ ಬಗ್ಗೆ ಶ್ರೀ ಅರವಿಂದರಿಗೆ ಹೇಳಿದೆ, ಅದು ಬಹಳ ಸ್ವಾಭಾವಿಕ ಎಂದು ಅವರು ನನಗೆ ತಿಳಿಸಿ ಹೇಳಿದರು. ನಿಜವಾಗಿ ಅದು ಸ್ವಾಭಾವಿಕವಾದದ್ದೇ ಆಗಿದೆ: ಸದ್ಯದ ಮಹಾಶಕ್ತಿ ಅವತಾರದೊಂದಿಗೆ (ಶ್ರೀಮಾತೆಯವರು ತಮ್ಮನ್ನು ಮೂರನೆಯ ವ್ಯಕ್ತಿಯನ್ನಾಗಿರಿಸಿ ಹೇಳುವ ಹಾಗೆ ಹೇಳುತ್ತಾರೆ) ಹೆಚ್ಚು ಕಡಿಮೆ ಅವರೊಡನೆ ಕಟ್ಟಿ ಹಾಕಿಕೊಂಡದ್ದೆಲ್ಲ ಭಾಗವಹಿಸಲು ಬಯಸುತ್ತದೆ. ಅದು ಪ್ರಾಣಿಕವನ್ನು ಕುರಿತು ವಿಶಿಷ್ಟ ರೀತಿಯಲ್ಲಿ ಸತ್ಯವಾಗಿದೆ. ಪ್ರಾಣಿಕ ಶಕ್ತಿಗಳ ಸಂಘಟನೆ, ಕೇಂದ್ರೀಕರಣ, ಅಭಿವೃದ್ಧಿ ಹಾಗೂ ಏಕತ್ರಗೊಳಿಸುವಿಕೆ ಇವೆಲ್ಲವನ್ನು ಕುರಿತು ಹಾಗೂ ಅವುಗಳನ್ನು ನಿಯಂತ್ರಿಸುವುದನ್ನು ಕುರಿತು ಯಾವಾಗಲೂ ಪೂರ್ವಮಗ್ನತೆ ಇರುತ್ತ ಬಂದಿದೆ, ಹಾಗಾಗಿ ಪ್ರಾಣಿಕ ಸತ್ತೆಗಳ ಸಂಖ್ಯೆ ಗಣನೀಯವಾಗಿದೆ, ಪ್ರತಿಯೊಂದಕ್ಕೂ ಅದರದೇ ಕ್ಷಮತೆ ಇದೆ, ಅವು ಇತಿಹಾಸ ಕಾಲದಲ್ಲಿ ತಮ್ಮ ಪಾತ್ರ ವಹಿಸಿವೆ ಮತ್ತು ಈಗ ಮರಳಿ ಬರುತ್ತಿವೆ.

**ಅನುಯಾಯಿಯೊಂದಿಗೆ ಮಾತುಕತೆ, ಜೂನ್ 12, 1962 – ಶ್ರೀಮಾತೆ**

*

**ಹನ್ನೆರಡು ಮುತ್ತುಗಳನ್ನು ಹೊಂದಿದ ಕಿರೀಟ**

ಅದು ಮೇಲ್ಗಡೆಗಿತ್ತು, ದೇವರುಗಳ ಪ್ರಾಂತದ ಮೇಲ್ಗಡೆ ಹತ್ತಿರದಲ್ಲಿತ್ತು. ಅದನ್ನು ನೋಡಿ ಮೇಡಮ್ ಥಿಯೋನ್ ನನ್ನನ್ನು ಗುರುತಿಸಿದಳು, ಏಕೆಂದರೆ ನನ್ನ

ಶಿರದ ಮೇಲೆ ಹನ್ನೆರಡು ಮುತ್ತುಗಳಿಂದ ಕೂಡಿದ ರೂಪವೊಂದನ್ನು ಅವಳು ನೋಡಿದಳು. "ನಿನಗೆ ಇದಿರುವುದರಿಂದ ನೀನು ಆ ತತ್ (ದೈವೀ ಶಕ್ತಿ, ದೈವೀ ಮಾತೆ) ಆಗಿರುವಿ, ಆ ತತ್ ಮಾತ್ರ ಇದನ್ನು ಹೊಂದಿರುವುದು ಸಾಧ್ಯ". ಈ ವಿಷಯ ನನಗೆ ದೂರದಿಂದಲೂ ಕೂಡ ಹೊಳೆದಿರಲಿಲ್ಲ. ದೇವರೇ ನಿನಗೆ ಧನ್ಯವಾದಗಳು!

**ಅನುಯಾಯಿಯೊಂದಿಗೆ ಮಾತುಕತೆ, ಮೇ 11, 1963**

*

ಮಹೇಶ್ವರಿಯ ಪ್ರಕಾಶ ಆದರೆ ಅದು ನನ್ನಲ್ಲಿ ಯಾವಾಗಲು ಇತ್ತೆಂದು ತೋರಿಬರುತ್ತದೆ. ಏಕೆಂದರೆ ಮ್ಯಾಡಮ್ ಥಿಯೋನ್ ನನ್ನನ್ನು ನೋಡಿದಾಗ ಅವಳು ಮೊದಲು ಹೇಳಿದ್ದು ಅದೇ ವಿಷಯವಾಗಿದೆ. ಅವಳು 'ಮಹೇಶ್ವರಿ' ಕುರಿತು ಹೇಳಲಿಲ್ಲ. ಆದರೆ "ನಿನ್ನಲ್ಲಿ ಬಿಳಿ ಪ್ರಕಾಶವಿದೆ" ಎಂದು ಹೇಳಿದಳು ಅದು ಸ್ವಯಂಚಾಲಿತವಾಗಿ ಎಲ್ಲ ದುಷ್ಟ ಸಂಕಲ್ಪವನ್ನು ಕರಗಿಸುತ್ತದೆ. ನನಗೆ ಅದರ ಅನುಭವವಾಯಿತು: ಸತ್ತೆಗಳು ಚೂರು ಚೂರಾಗಿ ಹೋಗುವುದನ್ನು ನಾನು ನೋಡಿದೆ.

ಮ್ಯಾಡಮ್ ಥಿಯೋನ್‌ಳನ್ನು ಭೇಟಿ ಮಾಡುವುದಕ್ಕಿಂತ ಮೊದಲೇ ನಾನದನ್ನು ಉಪಯೋಗಿಸುತ್ತಿದ್ದೆ: ಸಹಜವಾಗಿ ನನಗೇನೂ ತಿಳಿದಿರಲಿಲ್ಲ, ಆದರೆ ನಾನದನ್ನು ನೋಡುತ್ತಿದ್ದೆ. "ಅದು ನಿನ್ನ ಪ್ರಕಾಶ" ಎಂದು ಹೇಳಿದವರು ಮ್ಯಾಡಮ್ ಥಿಯೋನ್, ಅವಳು ನಾನಾರೆಂಬುದನ್ನು, ಅವಳು ನೋಡಿದ್ದನ್ನು ಹೇಳಿದವರಲ್ಲಿ ಅವಳೇ ಮೊದಲಿನವಳಾಗಿದ್ದಳು. ನನ್ನ ಶಿರದ ಮೇಲೆ ಹನ್ನೆರಡು ಮುತ್ತುಗಳಿರು–ವುದನ್ನು ಅವಳು ನೋಡಿದಳು. ನನ್ನನ್ನು ಕುರಿತು ಹೇಳುವುದಾದರೆ ನನಗದರ ಅನುಭವವಾಗಿತ್ತು, ಅನಂತರ ನಾನು ಸಂಕಲ್ಪಿಸಿದಂತೆ ಅದನ್ನು ಉಪಯೋಗಿಸಲು ಶಕ್ತಳಾಗುವಂತಾಯಿತು: ನಾನು ಅದಕ್ಕೆ ಕರೆ ಕೊಡಬೇಕಾಗುತ್ತಿತ್ತು ಮತ್ತು ನಾನದನ್ನು ಪರಿಪೂರ್ಣವಾಗಿ, ವಸ್ತುನಿಷ್ಠವಾಗಿ ನಿನ್ನನ್ನು ನೋಡುತ್ತಿರುವಂತೆ ನೋಡುವಂ–ತಾಯಿತು.

**ಅನುಯಾಯಿಯೊಡನೆ ಮಾತುಕತೆ, ಜುಲೈ 10, 1965** **– ಶ್ರೀಮಾತೆ**

*

# ಶ್ರೀಮಾತೆ ಹಾಗೂ ದೇವರುಗಳು

**ವೇದದ ದೇವತೆಗಳು**

ನಾನು ವೇದಗಳನ್ನು ಓದುತ್ತ ಹೋಗುತ್ತಿದ್ದೇನೆ ಹಾಗೂ ಅದೆಷ್ಟು ಸುಂದರವಾಗಿದೆ ಎಂಬುದನ್ನು ನೋಡುತ್ತಿದ್ದೇನೆ, ವೇದಕಾಲದ ಜನರಿಗೆ ಅದು ಬಹಳಷ್ಟು ಪರಿಣಾಮಕಾರಿಯಾಗಿತ್ತು, ಇದರಲ್ಲಿರುವ ಸ್ತೋತ್ರಗಳು ಸಿದ್ಧಿಗಾಗಿ ಬಹಳ ಪರಿಣಾಮಕಾರಿಯಾಗಿದ್ದವು.

ಅಗ್ನಿಯನ್ನು ಕುರಿತಾಗಿರುವ ಸ್ತೋತ್ರಗಳನ್ನು ನಾನು ಶ್ರೀ ಅರವಿಂದರ ಜೊತೆಗೆ ಅನುವಾದ ಮಾಡುತ್ತಿದ್ದ ಕಾಲವನ್ನು ನೆನಪಿಗೆ ತಂದುಕೊಳ್ಳುತ್ತಿದ್ದೇನೆ. ಅಗ್ನಿ ನನಗೆ ನೈಜವಾದದ್ದು. ಸರಿ, ನಿನ್ನೆ ಅದಾಗಿರಲಿಲ್ಲ, ಅದು ಅಗ್ನಿ ದೇವನಾಗಿರಲಿಲ್ಲ, ಅದು ಸತ್ತೆಯ ಒಂದು ಸ್ಥಿತಿಯಾಗಿತ್ತು. ಅದು ಪರಮೋಚ್ಚನ ಒಂದು ಸ್ಥಿತಿ, ಹಾಗಿದ್ದರೂ ಅದು ನನಗೆ ಸುಪರಿಚಿತವಾದದ್ದು, ಸ್ಪಷ್ಟವಾದದ್ದು, ಗಾಢವಾದದ್ದು, ಕಂಪನಶೀಲ–ವಾದದ್ದು ಹಾಗೂ ಜೀವಂತವಾದದ್ದು.

**ಅನುಯಾಯಿಯೊಡನೆ ಮಾತುಕತೆ, ಎಪ್ರಿಲ್ 18, 1961 – ಶ್ರೀಮಾತೆ**

*

ನಾನು ಈ ಎಲ್ಲ ದೇವರುಗಳೊಂದಿಗೆ ಸಂಪರ್ಕದಲ್ಲಿದ್ದೇನೆ, ಅವರೆಲ್ಲರೂ ಶ್ರೇಷ್ಠ ಸತ್ತೆಗಳಾಗಿದ್ದಾರೆ, ಅವರ ಮನೋಭಾವದಲ್ಲಿ ಬಹಳಷ್ಟು ಬದಲಾವಣೆ–ಯಾಗಿದೆ; ಆದಾಗ್ಯೂ ಬದಲಾಗಲು ಇಷ್ಟಪಡದೆ ಇದ್ದವರಲ್ಲಿಯೂ ಕೂಡ ಅವರಿರುವ ರೀತಿಯ ಮೇಲೆ ಪ್ರಭಾವ ಬೀರಲಾಗಿದೆ.

ಪರಮೋಚ್ಚನ ಈ ನೇರವಾದ ಅವತಾರದೊಂದಿಗೆ ಇರುವ ಮಾನವರ ಅನುಭವ ಕಟ್ಟಕಡೆಗೆ ಒಂದು ಅನನ್ಯ ಅನುಭವವಾಗಿರುತ್ತದೆ, ಅದು ವಿಶ್ವದ ಇತಿಹಾಸಕ್ಕೆ ಹೊಸ ನೆಲೆ ನಿರ್ದೇಶನವನ್ನು ನೀಡಿದೆ. ಶ್ರೀ ಅರವಿಂದರು ಇದನ್ನು ಕುರಿತು ಹೇಳುತ್ತಾರೆ– ವೈದಿಕ ಯುಗ, ಪರಮೋಚ್ಚನೊಡನೆ ಸಂಬಂಧ ಕಂಡುಕೊಳ್ಳುವ ರೀತಿ ಮತ್ತು ವೇದಾಂತದ ಆಗಮನ: ಶ್ರದ್ಧೆ, ಆರಾಧನೆ, ಭಕ್ತಿ, ಅಂತರಂಗದಲ್ಲಿಯ ದೇವ ಇವೆಲ್ಲವುಗಳಲ್ಲಿ ಆದ ಬದಲಾವಣೆ ಕುರಿತು ಹೇಳುತ್ತಾರೆ.

ಸರಿ, ಪರಮೋಚ್ಚನೊಡನಿರುವ ಈ ಸೌಹಾರ್ದದ ಸಂಬಂಧ ಮನುಷ್ಯನಲ್ಲಿ ಮಾತ್ರ ಅಸ್ತಿತ್ವದಲ್ಲಿರುತ್ತದೆ, ಏಕೆಂದರೆ ವಿಶ್ವದ ಇತಿಹಾಸದಲ್ಲಿ ಶ್ರೇಷ್ಠ ದೇವರುಗಳಲ್ಲಿ ಹಲವರು ಅದನ್ನು ದೊರಕಿಸಲು ಮಾನವ ದೇಹ ಧಾರಣ ಮಾಡಿದ್ದಾರೆ.

**ಅನುಯಾಯಿಯೊಡನೆ ಮಾತುಕತೆ, ಜೂನ್ 30, 1962 – ಶ್ರೀಮಾತೆ**

*



ಆದರೆ ಮಹಾಶಕ್ತಿಯ ಸದ್ಯದ ಈ ಅವತಾರ . . . ಅವಳು ಪರಮೋಚ್ಚನ ಪ್ರಥಮ ಪ್ರಕಟಣೆ, ಸೃಷ್ಟಿಯ ಮೊದಲ ದಾಪುಗಾಲು, ಅವಳೇ ಮೊದಲು ಈ ಎಲ್ಲ (ದೈವೀ) ಸತ್ತೆಗಳಿಗೆ ರೂಪು ನೀಡಿದವಳು. ಈಗ ಅವಳ ಅವತಾರ ಭೌತಿಕ ಜಗತ್ತಿನಲ್ಲಾಗಿರುವುದರಿಂದ ಹಾಗೂ ಆ ನಿಲುವಿನಿಂದ, ಇಲ್ಲಿ ಅವಳು ಪರಮೋಚ್ಚನ ಸಂಬಂಧದಲ್ಲಿ ಮಾನವ ದೇಹದಲ್ಲಿ ಅವತಾರ ತಾಳುವುದರ ಮೂಲಕ ಮಾನವ ದೇಹಧಾರಣ ಮಾಡಿದ್ದಾಳೆ, ಇತರ ಎಲ್ಲ ಲೋಕಗಳು ಅದರಿಂದ ಪ್ರಭಾವಿತವಾಗಿವೆ ಮತ್ತು ಬಹಳ ಕುತೂಹಲಕಾರಿಯಾದ ರೀತಿಯಲ್ಲಿ ಪ್ರಭಾವಕ್ಕೊಳಗಾಗಿವೆ. . . .

*

**ಅಧಿಮಾನಸ ಸೃಷ್ಟಿ ಹಾಗೂ ಹೊಸ ಜಗತ್ತು**

– 1926ರಲ್ಲಿ ಶ್ರೀ ಅರವಿಂದರು ಆಶ್ರಮದ ಬಾಹ್ಯ ಕಾರ್ಯವನ್ನು ನನಗೆ ವಹಿಸಿಕೊಟ್ಟಿದ್ದರು, ಏಕೆಂದರೆ ಏಕಾಗ್ರತೆಯಲ್ಲಿರುವುದಕ್ಕೆ ತಮ್ಮನ್ನು ಒಳಗೆ ತೊಡಗಿಸಿಕೊಳ್ಳಲು ಅವರು ಬಯಸಿದ್ದರು, ಅದರಿಂದಾಗಿ ಅತಿಮಾನಸ ಪ್ರಜ್ಞೆಯ

ಪ್ರಕಟಣೆಯನ್ನು ತೀವ್ರಗೊಳಿಸಲು ಸಾಧ್ಯವಾಗುತ್ತಿತ್ತು ಮತ್ತು ಅಲ್ಲಿದ್ದ ಕೆಲವರಿಗೆ ತಾವು ಅವರಿಗೆ ಸಹಾಯ ನೀಡುವ ಹಾಗೂ ಮಾರ್ಗದರ್ಶನ ಮಾಡುವ ಕಾರ್ಯವನ್ನು ನನಗೆ ಒಪ್ಪಿಸಿಕೊಡುತ್ತಿದ್ದೇನೆಂದು ಘೋಷಿಸಿ ಹೇಳಿದ್ದರು ಮತ್ತು ನಾನು ಸ್ವಾಭಾವಿಕವಾಗಿ ಅವರ ಸಂಪರ್ಕದಲ್ಲಿ ಉಳಿದುಕೊಂಡಿರುವುದರ ಮೂಲಕ ಅವರು ಕಾರ್ಯ ಕೈಕೊಳ್ಳುವವರಿದ್ದರು. ಹಠಾತ್ತಾಗಿ ಕೂಡಲೆ ವಿಷಯಗಳು ಒಂದು ಬಗೆಯ ರೂಪ ತಾಳಿದವು; ಬಹಳ ಉಜ್ವಲ ಸೃಷ್ಟಿಯನ್ನು ಕಾರ್ಯಗತಗೊಳಿಸ–ಲಾಗಿತ್ತು, ಅದರಲ್ಲಿ ಅಸಾಧಾರಣ ವಿವರಗಳಿದ್ದವು, ಅದ್ಭುತ ಅನುಭವಗಳಿದ್ದವು, ದೈವೀ ಸತ್ತೆಗಳೊಡನೆ ಸಂಪರ್ಕಗಳಿದ್ದವು, ಪವಾಡ ಸದೃಶ ಎಂದು ಪರಿಗಣಿಸಬಹುದಾದ ಪ್ರಕಟಣೆಯ ಎಲ್ಲ ರೀತಿಗಳಿದ್ದವು. ಒಂದರ ನಂತರ ಒಂದರಂತೆ ಅನುಭವಗಳು ಅನುಸರಿಸತೊಡಗಿದವು, ಸರಿ, ವಿಷಯಗಳು ಒಟ್ಟಿನಲ್ಲಿ ಉಜ್ವಲ ರೀತಿಯಲ್ಲಿ ತೆರೆದುಕೊಳ್ಳುತ್ತಿದ್ದವು, ಅದು ಬಹಳ ಕುತೂಹಲಕಾರಕವಾಗಿ ನಡೆದಿತ್ತೆಂದು ನಾನು ಹೇಳಬೇಕು.

ಒಂದು ದಿನ ಏನು ಸಂಭವಿಸುತ್ತಿದೆ ಎಂಬುದನ್ನು ಹೇಳಲು ಶ್ರೀ ಅರವಿಂದರ ಬಳಿ, ಯಾವಾಗಲೂ ಹೋಗುವ ಹಾಗೆ ಹೋಗಿದ್ದೆ– ನಾವು ನಿಜವಾಗಿ ಬಹಳ ಕುತೂಹಲಕಾರಿಯಾಗಿದ್ದ ಏನೋ ಒಂದರ ಬಳಿ ಬಂದಿದ್ದೆವು, ಸಂಭವಿಸಿದ್ದರ ಬಗ್ಗೆ ನಾನು ಹೇಳುತ್ತಿದ್ದಾಗ ಬಹುಶಃ ಹೆಚ್ಚಿನ ಉತ್ಸಾಹ ತೋರಿಸಿದೆನೆಂದು ಕಾಣುತ್ತದೆ– ಆಗ ಶ್ರೀ ಅರವಿಂದರು ನನ್ನತ್ತ ನೋಡಿ ಹೇಳಿದರು: “ಹೌದು, ಇದು ಅಧಿಮಾನಸ ಸೃಷ್ಟಿ. ಅದು ಬಹಳ ಸ್ವಾರಸ್ಯಕರವಾಗಿದೆ, ಅತ್ಯಂತ ಒಳ್ಳೆಯ ರೀತಿಯಲ್ಲಿ ಕೈಕೊಳ್ಳಲಾಗಿದೆ. ನೀವು ಪವಾಡಗಳನ್ನು ಮಾಡುವಿರಿ, ಅದು ಜಗತ್ತಿನಾದ್ಯಂತ ನಿಮ್ಮನ್ನು ಪ್ರಸಿದ್ಧಿಯುಳ್ಳವರನ್ನಾಗಿ ಮಾಡುವುದು, ನೀವು ಪೃಥ್ವಿಯ ಮೇಲಿನ ಎಲ್ಲ ಘಟನೆಗಳು ಅತ್ಯಂತ ಗಲಿಬಿಲಿಯಲ್ಲಿರುವಂತೆ ಮಾಡುವಿರಿ.” ನಂತರ ಅವರು ಮುಗುಳ್ನಕ್ಕು ಹೇಳಿದರು. “ಅದು ದೊಡ್ಡ ಯಶಸ್ಸಾಗುವುದು, ಆದರೆ ಅದು ಅಧಿಮಾನಸ ಸೃಷ್ಟಿ. ನಮಗೆ ಯಶಸ್ಸು ಬೇಕಾಗಿಲ್ಲ, ನಾವು ಪೃಥ್ವಿಯ ಮೇಲೆ ಅತಿಮನಸ್ಸನ್ನು ಸ್ಥಾಪಿಸಲು ಬಯಸುತ್ತೇವೆ. ಆ ಹೊಸ ಜಗತ್ತನ್ನು ಸೃಷ್ಟಿಸುವುದಕ್ಕಾಗಿ ಕೂಡಲೆ ದೊರಕುವ ಯಶಸ್ಸನ್ನು ತ್ಯಾಗ ಮಾಡಬೇಕು, ಆ ಹೊಸ ಜಗತ್ತು ಅದರ ಸಮಗ್ರತೆಯಲ್ಲಿ ಅತಿಮಾನಸದ್ದಾಗಿರುತ್ತದೆ.”

ನನ್ನ ಆಂತರಿಕ ಪ್ರಜ್ಞೆಯಿಂದ ನಾನು ಕೂಡಲೆ ಅರ್ಥಮಾಡಿಕೊಂಡೆ. ಕೆಲವು ಗಂಟೆಗಳ ನಂತರ ಆ ಅಧಿಮಾನಸ ಸೃಷ್ಟಿ ಹೊರಟು ಹೋಯಿತು. ಆ ಕ್ಷಣದಿಂದ ಬೇರೆ ಆಧಾರಗಳ ಮೇಲೆ ಹೊಸದನ್ನು ಪ್ರಾರಂಭಿಸಿದೆವು.

**CWM, 9/148-49** **– ಶ್ರೀಮಾತೆ**

*



**ಸಪ್ಟಂಬರ 30, 1914ರ ದಿನ ಶ್ರೀಮಾತೆಯವರು ಕೈಕೊಂಡ ಒಂದು ಪ್ರಾರ್ಥನೆ**

ನಮ್ಮ ದೈವೀ ಮಾತೆ ನಮ್ಮೊಂದಿಗಿದ್ದಾಳೆ ಮತ್ತು ಪರಮೋಚ್ಚ ಹಾಗೂ ಇಡಿಯಾದ ಪ್ರಜ್ಞೆಯೊಂದಿಗೆ ಗುರುತಿಸಿಕೊಳ್ಳುವುದರ ಬಗ್ಗೆ ನಮಗೆ ವಚನ ನೀಡಿದ್ದಾಳೆ, ಆ ಪ್ರಜ್ಞೆ ಆಳ ತಿಳಿದು ಹೋಗಲಾಗದ ಆಳದಿಂದ ಹಿಡಿದು ಅತ್ಯಂತ ಬಾಹ್ಯ ಇಂದ್ರಿಯಗಳ ಜಗತ್ತಿನವರೆಗೆ ಇರುತ್ತದೆ. ಈ ಎಲ್ಲ ಪ್ರಾಂತಗಳಲ್ಲಿ ಅಗ್ನಿ ತನ್ನ ಸಹಾಯವನ್ನು ಪರಿಶುದ್ಧಗೊಳಿಸುವ ಜ್ವಾಲೆಯ ಮೂಲಕ ಎಲ್ಲ ಅಡೆತಡೆಗಳನ್ನು ನಾಶ ಮಾಡುವುದರ ಮೂಲಕ, ಚೈತನ್ಯಗಳನ್ನು ಜಾಗ್ರತಗೊಳಿಸುವುದರ ಮೂಲಕ, ಸಂಕಲ್ಪಕ್ಕೆ ಉತ್ತೇಜನ ನೀಡುವುದರ ಮೂಲಕ ನೀಡುತ್ತಾನೆ, ಅದರಿಂದಾಗಿ ಸಿದ್ಧಿ ತೀವ್ರಗತಿಯಿಂದ ಬರುವಂತಾಗುತ್ತದೆ. ನಮ್ಮ ಜ್ಞಾನದಲ್ಲಿ ಜ್ಞಾನೋದಯ ಪರಿಪೂರ್ಣಗೊಳ್ಳುವುದಕ್ಕಾಗಿ ಇಂದ್ರ ನಮ್ಮ ಜೊತೆಗಿದ್ದಾನೆ. ದೈವೀ ಸೋಮ ತನ್ನ ಅನಂತ, ಸಾರ್ವಭೌಮ ಅದ್ಭುತ ಪ್ರೇಮದೊಂದಿಗೆ ನಮ್ಮನ್ನು ಪರಿವರ್ತಿಸಿದ್ದಾನೆ, ಅವನು ಪರಮೋಚ್ಚ ದಿವ್ಯಾನಂದವನ್ನು ತರುವವನಾಗಿದ್ದಾನೆ. . . . ಓ, ದೈವೀ ಮಧುರ ಮಾತೆಯೆ, ತನ್ಮಯವಾಗಿ ವರ್ಣನಾತೀತ ಕೋಮಲತೆಯಿಂದ ಮತ್ತು ಅನಂತ ವಿಶ್ವಾಸದೊಂದಿಗೆ ನಾನು ನಿನಗೆ ಬಾಗಿ ನಮಸ್ಕರಿಸುತ್ತೇನೆ. ಓ ಭವ್ಯನಾದ

ಅಗ್ನಿಯೆ, ನನ್ನೊಳಗೆ ಎಷ್ಟೊಂದು ಜೀವಂತವಾಗಿರುವಿ, ನಿನಗೆ ನಾನು ಕರೆಕೊಡುತ್ತೇನೆ, ನಿನ್ನನ್ನು ಆಹ್ವಾನಿಸುತ್ತೇನೆ, ಅದರಿಂದಾಗಿ ನೀನು ನನ್ನೊಳಗೆ ಇನ್ನೂ ಹೆಚ್ಚು ಜೀವಂತವಿರುವಂತಾಗಲಿ, ನಿನ್ನ ಅಗ್ಗಿಷ್ಟಿಕೆ ಹೆಚ್ಚು ಅಪರಿಮಿತ–ವಾಗುವಂತಾಗಲಿ, ನಿನ್ನ ಜ್ವಾಲೆಗಳು ಹೆಚ್ಚು ಎತ್ತರಕ್ಕೇರಲಿ, ಹೆಚ್ಚು ಸಾಮರ್ಥ್ಯಪೂರ್ಣವಾಗಲಿ, ಅದರಿಂದ ನನ್ನ ಇಡೀ ಸತ್ತೆ ಈಗ ಅತ್ಯುತ್ಸಾಹದಿಂದ ಪ್ರಜ್ವಲಿಸುವಂತಾಗಲಿ, ಪರಿಶುದ್ಧಗೊಳಿಸುವ ಉರುವಲಿನಂತಾಗಲಿ. ಓ ಇಂದ್ರ ನಾನು ನಿನ್ನನ್ನು ಗೌರವಿಸುತ್ತೇನೆ, ಹೊಗಳುತ್ತೇನೆ, ನೀನು ನನ್ನೊಡನೆ ಏಕವಾಗೆಂದು ಮೊರೆಯಿಡುತ್ತೇನೆ ಅದರಿಂದಾಗಿ ನೀನು ನಿಶ್ಚಿತವಾಗಿ ಯೋಚನೆಯ ಅಡ್ಡಗೋಡೆಗಳನ್ನು ಮುರಿದು ಹಾಕುವಂತಾಗುವುದು, ನೀನು ನನಗೆ ದೈವೀ ಜ್ಞಾನವನ್ನು ದಯಪಾಲಿಸುವಂತಾಗುವುದು.

**CWM, 1/253-54** **– ಶ್ರೀಮಾತೆ**

*

**ಅಧಿಮಾನಸದ ದೇವರುಗಳು ಹಾಗೂ ಪರಮೋಚ್ಚನಿಗೆ ಅವರ ಶರಣಾಗತಿ**

ಅಧಿಮಾನಸದ ದೇವರುಗಳು ಹಾಗೂ ದೇವಿಯರು ಇನ್ನೂ ಪರಮೋಚ್ಚ ಪ್ರಭುವಿಗೆ ಶರಣಾಗತರಾಗಿಲ್ಲ. ಏಕೆಂದರೆ ಅವರದೇ ಶ್ರೇಷ್ಠ ಸಾಮರ್ಥ್ಯವಿದೆ ಮತ್ತು ಅವರು ಉಚ್ಚತರ ಪ್ರಜ್ಞೆಯಲ್ಲಿ ಜೀವಿಸುತ್ತಾರೆ. ಶ್ರೀ ಅರವಿಂದರು ತಮ್ಮ ದೇಹದಲ್ಲಿ ಜೀವಿಸುತ್ತಿದ್ದಾಗ ಪೂಜಾ ದಿನಗಳಲ್ಲಿ ನಾನು ಆಶೀರ್ವಾದ ನೀಡುವ ಕಾರ್ಯಕ್ರಮ ನಡೆಸುತ್ತಿದ್ದೆ. ಆಗ ಆ ದೇವರುಗಳು ದೇವಿಯರು ಬರುತ್ತಿದ್ದರು. ಹಾಗೆಯೇ ಅಂತಸ್ತಿರುವ ಭಾಗದ ಕೆಳಗಡೆ ಹೋಗಿ ಧ್ಯಾನದ ಕಾರ್ಯಕ್ರಮ ನಡೆಸಿಕೊಡುತ್ತಿದ್ದಾಗ ಆ ದೇವರುಗಳು ದೇವಿಯರು ಉಪಸ್ಥಿತರಿರುತ್ತಿದ್ದರು. ಅವರು ನಿಜವಾಗಿ ಸ್ವತಂತ್ರರಿದ್ದಾರೆ. ಉದಾಹರಣೆಗೆ ಕಾಳಿ ದೇವಿಯ ಹಲವಾರು ಮುಖಗಳಲ್ಲಿ ಒಬ್ಬಳು ಬಂದು ಮನುಷ್ಯರು ಮಾಡುತ್ತಿದ್ದ ತಪ್ಪುಗಳ ಬಗ್ಗೆ ಹೇಳುತ್ತಿದ್ದಳು, ನಾನು ಅವಳು ಶಾಂತಳಾಗಿರುವಂತೆ ಮಾಡುತ್ತೇನೆ. ಹಾಗೆಯೇ ದುರ್ಗಾದೇವಿಯ ಒಂದು ಮುಖ ಕಳೆದ ವರ್ಷ ಪೂಜಾ ದಿನಗಳಲ್ಲಿ ಬಂದಿದ್ದಿತು, ಅವಳು ಭವ್ಯವಾಗಿದ್ದಳು. ಪರಮೋಚ್ಚ ಪ್ರಭುವಿಗೆ ಶರಣಾಗುವಂತೆ ಅವಳಿಗೆ ಹೇಳಿದೆ. ಅವಳು "ನಿಖರವಾಗಿ ಇದನ್ನೇ ನಿಮ್ಮಿಂದ ಕೇಳಲು ಬಯಸುತ್ತೇನೆ, ನಾನು

ಸಿದ್ಧಳಿದ್ದೇನೆ" ಎಂದು ಹೇಳಿದಳು. ಅವಳು ನಿಜವಾಗಿ ಅದ್ಭುತಳಾಗಿದ್ದಳು. 1960ರಲ್ಲಿ, ಅತಿಮಾನಸದ ಪ್ರಕಟಣೆಯಾದ ನಂತರದ ಒಂದು ವರ್ಷಕ್ಕೆ ಒಂದು ದಿನ ಕಡಿಮೆ ಇದ್ದಾಗ ಶ್ರೀ ಕೃಷ್ಣ ನನ್ನ ಬಳಿ ಬಂದು "ಸಂದೇಶವನ್ನು ನಾನು ಬಿತ್ತರಿಸುತ್ತೇನೆ" ಎಂದು ಹೇಳಿದ. ಹಾಗಾಗಿ ಮರುದಿನ ನಾನು ಕೆಳಗಡೆ ಹೋದಾಗ ಅವನು ನನ್ನ ತೊಡೆಯ ಮೇಲೆ ಕುಳಿತುಕೊಂಡು ಜನರಿಗೆ ಆಶೀರ್ವಾದ ಮಾಡಲು ಪ್ರಾರಂಭಿಸಿದ. ಅವನು ಹಾಗೆ ಮಾಡುತ್ತಿದ್ದುದು ಬಹಳ ಮೋಜಿನ ವಿಷಯ–ವಾಗಿತ್ತು. . . . ಹೀಗೆ ಈ ದೇವರುಗಳು ಸ್ವತಂತ್ರರಾಗಿದ್ದಾರೆ, ಅವರಿಗೆ ಅವರದೇ ಸಾಮರ್ಥ್ಯಗಳಿವೆ ಮತ್ತು ಅವರು ಇಷ್ಟಪಟ್ಟದ್ದನ್ನು ಕೈಕೊಳ್ಳಬಲ್ಲರು.

ನಾನು ಈಗಿನದಲ್ಲದ ಇನ್ನೊಂದು ಮನೆಯಲ್ಲಿದ್ದಾಗ, ಶಿವನಿಗೆ ಬಹಳ ಅಂಟಿಕೊಂಡಿದ್ದೆ. ಪೃಥ್ವಿಯ ಮೇಲೆ ಪ್ರಕಟನಾಗೆಂದು ಅವನಿಗೆ ಹೇಳಿದೆ. ಅವನು: "ಇಲ್ಲ, ನಾನು ಹಾಗೆ ಮಾಡುವುದಿಲ್ಲ. ಅತಿಮಾನಸ ಕುಲ ಪೃಥ್ವಿಯ ಮೇಲೆ ಬಂದಾಗ ನಾನು ಬರುವೆ" ಎಂದು ಹೇಳಿದ.

ಹಾಗಾಗಿ ನಾನು ಹೇಳುವುದೇನಿರಲಿಲ್ಲ. ಅವನು ಮುಕ್ತನಾಗಿದ್ದಾನೆ ನಾನು ಪೃಥ್ವಿಯ ಮೇಲೆ ಜನ್ಮತಾಳಿದಾಗಿನಿಂದ ಈ ದೇವರುಗಳು ಹಾಗೂ ದೇವಿಯರು ಸತತ ನನ್ನೊಡನಿದ್ದಾರೆ. ಹಳೆಯ ದಿನಗಳಲ್ಲಿ ನಾನು ಮೊಗಶಾಲೆಯಲ್ಲಿ ವಾಯುವಿಹಾರ ಮಾಡುತ್ತಿದ್ದಾಗ ಶ್ರೀಕೃಷ್ಣ ನನ್ನೊಡನೆ ನಡೆದಾಡುತ್ತಿದ್ದ.

ಹೊಸ ಸೃಷ್ಟಿಯಲ್ಲಿ, ಹೊಸ ಅತಿಮನಸ್ಸಿನ ಜಗತ್ತಿನಲ್ಲಿ ಈ ದೇವರುಗಳು ಹಾಗೂ ದೇವಿಯರು ಮಾನವ ಸತ್ತೆಗಳಿಗೆ ಸಹಾಯ ಮಾಡುವರೆಂಬುದು ನನಗೆ ತಿಳಿದಿದೆ.

**Mother you said so: 25-2-1966** **– ಶ್ರೀಮಾತೆ**

*

**ಪರಮೋಚ್ಚನಿಗೆ ದುರ್ಗಾಳ ಶರಣಾಗತಿ**

ಶ್ರೀ ಅರವಿಂದರು ಇಲ್ಲಿದ್ದ ಎಲ್ಲ ಕಾಲದಲ್ಲಿ, ಅವರು ಹೇಳುತ್ತಿದ್ದ ನಾಲ್ಕು ಅಸ್ತಿತ್ವಗಳು, ನಾಲ್ಕು ಮುಖಗಳು ಇಲ್ಲಿ ಯಾವಾಗಲೂ ಅಸ್ತಿತ್ವದಲ್ಲಿದ್ದವು.

ನಾನೆಂದಾದರೂ ನಿಮಗೆ ಹೇಳಿರುವೆನೆ? ಅದು ನಾನು ಕಳೆದ ಪೂಜಾ ದಿನಗಳಲ್ಲಿ ಹೋಗಿದ್ದಾಗಿನ ಕತೆ. ಹೌದು ಅದು ಕಳೆದ ವರ್ಷದ ಹಿಂದಿನದರ ಕತೆ. (ಅತಿಮಾನಸದ ಅವರೋಹಣದ ಮೊದಲ ವಾರ್ಷಿಕ ದಿನ ಫೆ. 29, 1960) [ದುರ್ಗಾ ಪ್ರತಿವರ್ಷ ಬರುತ್ತಿದ್ದಳು, ಎರಡು ಮೂರು ದಿನ ದುರ್ಗಾ ಪೂಜಾದಿನದ ಮೊದಲು] ನಾನು ಎಂದಿನಂತೆ ನಡೆದಾಡುತ್ತಿದ್ದೆ, ಅವಳು ಬಂದಳು ಅದು ಆಗ ಅವಳು ಪರಮೋಚ್ಚನಿಗೆ ಶರಣಾಗತಳಾಗಿದ್ದ ಅವಧಿಯಾಗಿತ್ತು. ಆ ದೇವತೆಗಳಿಗೆ ಸ್ವ–ಅರ್ಪಣೆ ಮಾಡಿಕೊಳ್ಳಬೇಕೆಂಬ ವಿಚಾರವಿರುವುದಿಲ್ಲ. ದೇವಿ ದುರ್ಗಾ ಹಾಗೂ ಗ್ರೀಕ ದೇವರುಗಳು (ಆದಾಗ್ಯೂ ಗ್ರೀಕ ದೇವತೆಗಳು ಈಗ ಹಿಂದಿನ ಕಾಲಕ್ಕೆ ಸೇರಿದವರ ಹಾಗೆ ಕಂಡುಬರುತ್ತಾರೆ, ಆದರೆ ಭಾರತದ ದೇವರುಗಳು ಇನ್ನೂ ಜೀವಂತವಾಗಿದ್ದಾರೆ.) ಸರಿ, ಅವರು ಮೈವೆತ್ತವರು– ಸ್ಥಳಕ್ಕೆ ಕಟ್ಟುಬಿದ್ದವರೆಂದು ಎಂದು ಬಹುಮಟ್ಟಿಗೆ ಕರೆಯಬಹುದು– ಶಾಶ್ವತವಾದ ಏನೋ ಒಂದಕ್ಕೆ ಅಂಟಿಕೊಂಡವರು, ಆದರೆ ಪರಮೋಚ್ಚನಿಗೆ ಶರಣಾಗತರಾಗಬೇಕೆಂಬುದನ್ನು ಅವರು ತಿಳಿದುಕೊಂಡಿರುವುದಿಲ್ಲ ಮತ್ತು ನಾನು ನಡೆದಾಡುತ್ತಿದ್ದಾಗ ದುರ್ಗಾ ಅಲ್ಲಿದ್ದಳು– ನಿಜವಾಗಿ ಬಹಳ ಸುಂದರಳಾದ ದುರ್ಗಾ– ಭಯಭಕ್ತಿ ಹುಟ್ಟಿಸುವ, ಎಂದೆಂದಿಗೂ ವಿರೋಧೀ ಶಕ್ತಿಗಳನ್ನು ಹಿಮ್ಮೆಟ್ಟಿಸುವ ತನ್ನ ಸಾಮರ್ಥ್ಯದೊಂದಿಗೆ ಅವಳು ಪರಮೋಚ್ಚನಿಗೆ ಶರಣಾಗತಳಾದಳು, ಎಲ್ಲವೂ ಪರಮೋಚ್ಚನಾಗಿದ್ದಾನೆ. ಅದು ತನ್ನ ಪ್ರಜ್ಞೆಯನ್ನು ಅವಳು ವಿಶಾಲವಾಗಿರಿಸಿಕೊಂಡ ಹಾಗಿತ್ತು.

**ಅನುಯಾಯಿಯೊಂದಿಗೆ ಮಾತುಕತೆ, ಜೂನ್ 27, 1962 – ಶ್ರೀಮಾತೆ**

*

**ದೇವರುಗಳ ದಿವ್ಯ ಭೇಟಿ**

ಶ್ರೀ ಅರವಿಂದರು ಇಲ್ಲಿದ್ದಾಗಿನ ದಿನಗಳ ನೆನಪು ನನಗೆ ಬರುತ್ತದೆ, ನಾನು ಅಂತಸ್ತಿನ ಕೆಳಗಡೆಗಿರುವ ಜಾಗಕ್ಕೆ ಹೋಗಿ ಅಲ್ಲಿ ಕೂಡಿರುತ್ತಿದ್ದ ಜನರಿಗೆ ಧ್ಯಾನದ ಕಾರ್ಯಕ್ರಮ ನಡೆಸಿಕೊಡುತ್ತಿದ್ದೆ. ಅಲ್ಲಿದ್ದ ಕಂಬಗಳ ಮೇಲೆ ಮುಂಚಾಚಿದ ಕಿರಿಯಗಲ ಸಮತಲದ ಭಾಗ (ledge) ಗಳಿದ್ದವು, ಅವುಗಳ ಮೇಲೆ ದೇವರುಗಳು ಕುಳಿತು ಕೊಂಡಿರುತ್ತಿದ್ದರು– ಶಿವ, ಶ್ರೀಕೃಷ್ಣ, ಲಕ್ಷ್ಮಿ ಉಳಿದವರೆಲ್ಲರೂ ಚಿಕ್ಕವರು, ದೊಡ್ಡವರು ಹೀಗೆ ಎಲ್ಲರೂ ಈ ಧ್ಯಾನದ ಕಾರ್ಯಕ್ರಮದಲ್ಲಿ ನಿಯಮಿತತನದಿಂದ

ಪ್ರತಿದಿನ ಉಪಸ್ಥಿತರಿರುತ್ತಿದ್ದರು. ಅದು ಸುಂದರ ದೃಶ್ಯವಾಗಿರುತ್ತಿತ್ತು. ಆದರೆ ಅವರಲ್ಲಿ ಪರಮೋಚ್ಚನೆಗಾಗಿ ಆರಾಧನೆ ಇರಲಿಲ್ಲ. ಆ ಕಲ್ಪನೆ ಅವರಿಗೆ ಉಪಯುಕ್ತವಾಗಿರಲಿಲ್ಲ– ಪ್ರತಿಯೊಬ್ಬನೂ ತಾನಿರುವ ರೀತಿಯಲ್ಲಿ ತನ್ನ ಶಾಶ್ವತ ದೈವತ್ವದ ಬಗ್ಗೆ ಪೂರ್ತಿ ಅರಿವುಳ್ಳವನಾಗಿದ್ದನು. ಪ್ರತಿಯೊಬ್ಬನೂ ತಾನಿರುವ ರೀತಿಯಲ್ಲಿ ಇತರರನ್ನು ಪ್ರತಿನಿಧಿಸಬಲ್ಲ ಎಂಬುದನ್ನು ತಿಳಿದುಕೊಂಡಿರುತ್ತಾನೆ, (ಇಂತಹದು ಪ್ರಚಲಿತ ಪೂಜೆಯ ಆಧಾರವಾಗಿತ್ತು.) ತಾವೊಂದು ಸಮಾಜ–ದಲ್ಲಿದ್ದೇವೆ ಎಂಬ ಭಾವನೆಯನ್ನು ಅವರು ತೆಗೆದುಕೊಂಡರು, ಆದರೆ ಚೈತ್ಯ ಜೀವನ ನೀಡುವ ಯಾವ ಗುಣವನ್ನೂ ಅವರು ಹೊಂದಿರಲಿಲ್ಲ, ಅವರಲ್ಲಿ ಆಳವಾದ ಪ್ರೇಮವಿರಲಿಲ್ಲ, ಆಳವಾದ ಸಹಾನುಭೂತಿ ಇರಲಿಲ್ಲ, ಏಕತೆಯ ಭಾವವಿರಲಿಲ್ಲ. ಅವರಲ್ಲಿ ಕೇವಲ ಅವರ ದೈವತ್ವದ ಭಾವನೆಯಿರುತ್ತಿತ್ತು ಅವರಲ್ಲಿ ವಿಶಿಷ್ಟ ಚಲನೆಗಳಿದ್ದವು, ಆದರೆ ಪರಮೋಚ್ಚನಿಗಾಗಿ ಆರಾಧನೆ ಇರುತ್ತಿರಲಿಲ್ಲ, ಇಲ್ಲವೆ ಉಪಕರಣಗಳಾಗಿರುವ ಭಾವನೆ ಇರುತ್ತಿರಲಿಲ್ಲ, ಅವರು ಪರಮೋಚ್ಚನನ್ನು ಪ್ರತಿನಿಧಿಸುವ ಭಾವನೆ ತಂದುಕೊಳ್ಳುತ್ತಿದ್ದರು ಮತ್ತು ಹಾಗಾಗಿ ಪ್ರತಿಯೊಬ್ಬನೂ ತನ್ನ ವಿಶಿಷ್ಟ ಪ್ರತಿನಿಧಿತ್ವದೊಂದಿಗೆ ತೃಪ್ತಿಯಿಂದಿರುತ್ತಿದ್ದನು.

**ಅನುಯಾಯಿಯೊಂದಿಗೆ ಮಾತುಕತೆ, ಅಗಸ್ಟ 2, 1961 – ಶ್ರೀಮಾತೆ**

*

**ಶ್ರೀಮಾತೆಯವರ ಮಗು ಗಣೇಶ**

ಅದು ಸಂಭವಿಸಿದ್ದು ಹೀಗೆ: ಅಲ್ಲಿ ಗಣೇಶನಿದ್ದ. ಈಗ ಸಮೃದ್ಧಿ (prosperity) ಯ ವಸ್ತುಗಳನ್ನು ವಿತರಿಸುವ ಕೋಣೆಯಲ್ಲಿ ನಾವು ಧ್ಯಾನ ಕೈಕೊಂಡಿದ್ದೆವು. ನಾವು ಎಂಟು ಹತ್ತು ಜನರಿದ್ದೆವು ಎಂದು ನನಗನಿಸುತ್ತದೆ. ಹೂವುಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುತ್ತಿದ್ದೆವು, ನಾನು ಹೂವುಗಳನ್ನು ವ್ಯವಸ್ಥಿತಗೊಳಿಸಿ ಇಡುತ್ತಿದ್ದೆ. ಪ್ರತಿಯೊಬ್ಬರೂ ಒಂದು ವಾಕ್ಯವನ್ನು ಮಾಡುತ್ತಿದ್ದರು, ಅವುಗಳಿಗೆ ನಾನಿರಿಸಿದ ಭಿನ್ನ ಹೂವುಗಳನ್ನು ಉಪಯೋಗಿಸುತ್ತಿದ್ದರು. ಒಂದು ದಿನ ಸಂಪತ್ತಿನ ಇಲ್ಲವೆ ಧನದ ವಿಷಯ ಬಂದಾಗ "ಜನರು ಯಾವಾಗಲೂ ಗಣೇಶ ಸಂಪತ್ತಿನ, ಸುದೈವದ ದೇವ ಎಂದು ಹೇಳುತ್ತಾರೆ, ಆನೆಯ ಸೊಂಡೆ ಇರುವ ಈ ದೇವನ ಕತೆ ಬಹುಮಟ್ಟಿಗೆ ಮಾನವ ಕಲ್ಪನೆಯಾಗಿರಬಹುದಲ್ಲವೆ ಎಂದು ನಾನು ಯೋಚಿಸಿದೆ. ನಂತರ ನಾವು

ಧ್ಯಾನ ಮಾಡಿದೆವು. ಹಾಗೆ ಧ್ಯಾನದಲ್ಲಿರುವಾಗ ನನ್ನೆದುರಿಗೆ ತನ್ನನ್ನು ಇರಿಸಿ ಕೊಂಡವನು ಪರಿಪೂರ್ಣವಾಗಿ ಜೀವಂತವಿರುವ, ಪ್ರಕಾಶಮಯವಾಗಿರುವ, ಮುಗುಳ್ನಗುತ್ತಿರುವ ಉದ್ದವಾದ ಸೊಂಡೆಯಿದ್ದವನಾಗಿದ್ದ. 'ಹೀಗೆ ನೀನು ಅಸ್ತಿತ್ವ–ದಲ್ಲಿರುವುದು ನಿಜವಾಗಿದೆ' ಎಂದು ಹೇಳಿದೆ. "ಸಹಜವಾಗಿ ನಾನು ಅಸ್ತಿತ್ವ–ದಲ್ಲಿದ್ದೇನೆ. ನಿಮಗೆ ಬೇಕಾದುದನ್ನು ತಾತ್ಕಾಲಿಕ ದೃಷ್ಟಿಕೋನದಿಂದ ನನ್ನಿಂದ ಪಡೆಯಬಹುದು, ನಾನು ನಿಮಗೆ ಕೊಡುತ್ತೇನೆ" ಎಂದು ಹೇಳಿದ.

ಹಾಗಾಗಿ ನಾನು ಕೇಳಿದೆ. ಹತ್ತು ವರ್ಷಗಳ ಕಾಲ ಅದು ಧಾರಾಕಾರವಾಗಿ ಸುರಿದು ಬಂದಿತು (ಧಾರೆಯಾಗಿ ಬರುವುದರ ಸಂಕೇತ) ಅದು ನಂಬಲ–ಸಾಧ್ಯವಾಗಿತ್ತು.

**ಅನುಯಾಯಿಯೊಡನೆ ಮಾತುಕತೆ, ಜೂನ್ 22, 1958 – ಶ್ರೀಮಾತೆ**

*

## ದೇವರುಗಳ ರೂಪ ಹಾಗೂ ಕಾರ್ಯವಿಧಾನ

### ಅತಿಮನಸ್ಸು ಮತ್ತು ದೇವರುಗಳ ಕಾರ್ಯವಿಧಾನ

ಪೃಥ್ವಿಯ ಪರಿವರ್ತನೆಯನ್ನು ಕುರಿತು ಶ್ರೀ ಅರವಿಂದರ ಕಾರ್ಯ ಅನನ್ಯವಾಗಿದೆ.

ಮನಸ್ಸಿನ ಮೇಲ್ಗಡೆ ಪ್ರಜ್ಞಾಪೂರ್ಣ ಸತ್ತೆಯ ಹಲವಾರು ಸ್ತರಗಳಿವೆ; ಅವುಗಳ ಮಧ್ಯೆ ಶ್ರೀ ಅರವಿಂದರು ಅತಿಮನಸ್ಸು ಎಂದು ಕರೆದದ್ದು ನಿಜವಾದ ದೈವೀ ಜಗತ್ತಾಗಿದೆ, ಅದು ದೈವೀ ಸತ್ಯದ ಜಗತ್ತು. ಆದರೆ ಆ ಸ್ತರಗಳ ನಡುವೆ ಪ್ರತ್ಯೇಕವಾಗಿಸಿದ ಅಧಿಮನಸ್ಸೆಂಬುದಿದೆ, ಅದರ ಜಗತ್ತು ವಿಶ್ವವ್ಯಾಪಿ ದೇವರುಗಳ–ದಾಗಿದೆ. ಈ ಅಧಿಮನಸ್ಸೇ ಇಲ್ಲಿಯವರೆಗೆ ನಮ್ಮ ಜಗತ್ತಿನ ಮೇಲೆ ಆಳಿಕೆ ನಡೆಸಿದೆ. ಮನುಷ್ಯ ತನ್ನ ಜ್ಞಾನೋದಯ ಪಡೆದ ಪ್ರಜ್ಞೆಯಲ್ಲಿ ಸಿದ್ಧಿಸಿಕೊಳ್ಳ–ಬಹುದಾದವುಗಳಲ್ಲಿ ಅದು ಅತ್ಯುಚ್ಚವಾಗಿದೆ. ಅದನ್ನು ಪರಮೋಚ್ಚ ಭಗವಂತನದೆಂದು ಗ್ರಹಿಸಲಾಗಿದೆ ಮತ್ತು ಅದನ್ನು ತಲುಪಿದವರೆಲ್ಲರೂ ಒಂದು ಕ್ಷಣ ಮಾತ್ರಕ್ಕಾದರೂ ತಾವು ನಿಜವಾದ ಅತ್ಯುಚ್ಚ ಭಗವಂತನನ್ನು ತಲುಪಿದ್ದೇವೆ ಎಂಬುದರಲ್ಲಿ ಸಂಶಯ ಪಟ್ಟಿರಲಿಲ್ಲ.

ಏಕೆಂದರೆ ಅದರ ಭವ್ಯತೆಗಳು ಸಾಮಾನ್ಯ ಮನುಷ್ಯನ ಪ್ರಜ್ಞೆಗೆ ಎಷ್ಟೊಂದು ಶ್ರೇಷ್ಠವಾಗಿವೆಯೆಂದರೆ, ಅದು ವಿಸ್ಮಯಕ್ಕೊಳಗಾಗಿ ಇಲ್ಲಿ ಕಟ್ಟಕಡೆಗೆ ಕಿರೀಟಪ್ರಾಯ ನೈಜತೆ ಇದೆ ಎಂದು ಭಾವಿಸುತ್ತದೆ. ಆದಾಗ್ಯೂ ವಾಸ್ತವ ಸಂಗತಿ ಎಂದರೆ ಅಧಿಮಾನಸ ನಿಜವಾದ ಭಗವಂತನ ಸ್ತರದಿಂದ ಬಹಳ ಕೆಳಗಿದೆ. ಅದು ದೈವೀ ಸತ್ಯದ ಅಧಿಕೃತ ನಿವಾಸವಲ್ಲ, ಅದು ಕೇವಲ ರಚನೆಯ ವ್ಯೂಹದವರ ಪ್ರಾಂತವಾಗಿರುತ್ತದೆ. ಇತಿಹಾಸದ ಪ್ರಾರಂಭಕಾಲದಿಂದ ಆ ಎಲ್ಲ ಸೃಷ್ಟ್ಯಾತ್ಮಕ ಸಾಮರ್ಥ್ಯಗಳಿಗೆ ಹಾಗೂ ದೇವರುಗಳಿಗೆ ಜನರು ಬಾಗಿ ನಮಸ್ಕರಿಸುತ್ತ ಬಂದಿದ್ದಾರೆ. ನಿಜವಾದ ಭಗವಂತ ಪ್ರಕಟವಾಗದೆ ಇರುವುದಕ್ಕೆ, ಪೃಥ್ವಿಯನ್ನು ಪರಿವರ್ತನೆಗೆ ಒಳಪಡಿಸದೆ ಇರುವುದಕ್ಕೆ ಕಾರಣವೆಂದರೆ, ಅಧಿಮನಸ್ಸನ್ನು ಅತಿಮನಸ್ಸೆಂದು ತಪ್ಪಾಗಿ ತಿಳಿಯಲಾಗಿದೆ. ವಿಶ್ವವ್ಯಾಪಿ ದೇವರುಗಳು ಇಡಿಯಾಗಿ ಸತ್ಯ–ಪ್ರಜ್ಞೆ (ಋತ್ ಚಿತ್)ಯಲ್ಲಿ ಜೀವಿಸುವುದಿಲ್ಲ. ಅವರು ಕೇವಲ ಅದರ ಸ್ಪರ್ಶದೊಂದಿಗಿದ್ದಾರೆ ಮತ್ತು ಅವರಲ್ಲಿ ಪ್ರತಿಯೊಬ್ಬನು ಅದರ ವೈಭವಗಳ ಒಂದು ಮುಖವನ್ನು ಪ್ರತಿನಿಧಿಸುತ್ತಾನೆ.

**CWM, 3/173** **– ಶ್ರೀಮಾತೆ**

*

**ದೇವರುಗಳ ನೈಜತೆ**

ಯುರೋಪಿನಲ್ಲಿ ಹಾಗೂ ಪಾಶ್ಚಿಮಾತ್ಯ ಜಗತ್ತಿನಲ್ಲಿ ಈ ಎಲ್ಲ ದೇವರುಗಳು– ಗ್ರೀಕ ದೇವರುಗಳು, ಪ್ರಕೃತಿಯ ಶಕ್ತಿಯೆಂದು ಪೂಜಿಸುವ ದೇವರುಗಳು– ಇವರೆಲ್ಲ ಮಾನವರು ಭಾವಿಸಿಕೊಂಡವುಗಳು, ಅವರು ನಿಜವಾದ ಸತ್ತೆಗಳಲ್ಲ ಎಂದು ಯೋಚಿಸಲಾಗುತ್ತದೆ. ಮನುಷ್ಯ ಅರ್ಥಮಾಡಿಕೊಳ್ಳಬೇಕಾದರೆ ಅವರು ನಿಜವಾದ ಸತ್ತೆಗಳೆಂಬುದನ್ನು ತಿಳಿದುಕೊಳ್ಳಬೇಕು. ವ್ಯತ್ಯಾಸ ಅದೇ ಆಗಿದೆ. ಪಾಶ್ಚಿಮಾತ್ಯರಿಗೆ ಅವರುಗಳು ಕೇವಲ ಕಲ್ಪನೆಯಿಂದ ಉಂಟಾದ ಭ್ರಮೆ ಮತ್ತು ವಿಶ್ವದಲ್ಲಿ ಯಾವುದೇ ಸತ್ಯ ಸಂಗತಿಗೆ ಅನುಗುಣವಾಗಿರುವುದಿಲ್ಲ. ಆದರೆ ಅದು ಒಟ್ಟಿನಲ್ಲಿ ಕಣ್ಣು ಕುಕ್ಕಿಸುವಂತಹ ತಪ್ಪಾಗಿರುತ್ತದೆ.

ವಿಶ್ವಂಭರ ಜೀವನ ಹಾಗೆಯೇ ಪೃಥ್ವಿಯ ಜೀವನ ಇವುಗಳ

ಕಾರ್ಯಗತಿಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅವುಗಳ ಪ್ರಾಂತದಲ್ಲಿ ಅವೆಲ್ಲ ಜೀವಂತ ಸತ್ತೆಗಳಾಗಿರುತ್ತವೆ, ಪ್ರತಿಯೊಂದೂ ಅದರದೇ ಸ್ವತಂತ್ರ ನೈಜತೆಯನ್ನು ಹೊಂದಿರುತ್ತದೆ ಎಂಬುದನ್ನು ತಿಳಿದಿರಬೇಕು. 'ಮನುಷ್ಯ ಅಸ್ತಿತ್ವದಲ್ಲಿರದಿದ್ದರೂ ಅವು ಅಸ್ತಿತ್ವದಲ್ಲಿರುತ್ತಿದ್ದವು. ದೇವರುಗಳಲ್ಲಿ ಹೆಚ್ಚಿನವು ಮನುಷ್ಯ ಅಸ್ತಿತ್ವದಲ್ಲಿ ಬರುವುದಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದವು.

ಆ ಸತ್ತೆಗಳು ವಿಶ್ವದ ಪ್ರಗತಿಪರ ಸೃಷ್ಟಿಗೆ ಸೇರಿದವುಗಳಾಗಿವೆ ಮತ್ತು ಅವುಗಳೇ ಸ್ವತಃ ವಿಶ್ವದ ರೂಪತಾಳುವಿಕೆಯ ಮೇಲೆ ಅಧ್ಯಕ್ಷತೆ ವಹಿಸಿವೆ, ಆ ರೂಪತಾಳುವಿಕೆ ಅತ್ಯಂತ ಆಕಾಶ ದ್ರವ್ಯವೆನಿಸುವುದರಿಂದ (etheric) ಇಲ್ಲವೆ ಸೂಕ್ಷ್ಮ ಪ್ರಾಂತಗಳಿಂದ ಹಿಡಿದು ಅತ್ಯಂತ ಭೌತಿಕ ಪ್ರಾಂತಗಳವರೆಗೆ ಆಗಿತ್ತು. ಆ ಸತ್ತೆಗಳು ಸೃಷ್ಟ್ಯಾತ್ಮಕ ದಿವ್ಯಾತ್ಮನಿಂದ ಅವರೋಹಣ ಮಾಡಿ ತುಂಟತನದಿಂದ ಉಂಟಾಗಿದ್ದನ್ನು ಸರಿಪಡಿಸಲು ಬಂದರು, ಆ ತುಂಟತನ ಅಸುರರಿಂದಾಗಿತ್ತು. ಮೊದಲ ತಯಾರಕರು ಅವ್ಯವಸ್ಥೆ, ಅಂಧಕಾರ ಹಾಗೂ ಅಪ್ರಜ್ಞೆ ಇವುಗಳನ್ನು ಸೃಷ್ಟಿಸಿದ್ದರು. ನಂತರ ತಯಾರಕರ ಇನ್ನೊಂದು ಪೀಳಿಗೆ ಬಂದಿತೆಂದು ಹೇಳಲಾಗಿದೆ. ಆ ಪೀಳಿಗೆಯವರು ಅನಿಷ್ಟವನ್ನು ನಿವಾರಿಸಲು ಬಂದಿದ್ದರು ಮತ್ತು ನಂತರ ದೇವರುಗಳು ನೈಜತೆಗಳ ಮೂಲಕ ಅವರೋಹಣ ಮಾಡಿದರು, ಅವರ ಸಂಖ್ಯೆ ದಟ್ಟವಾಗಿತ್ತೆಂದು ಹೇಳಲಾಗದು, ಏಕೆಂದರೆ ಅದು ನಿಜವಾಗಿ ದಟ್ಟವಾಗಿಲ್ಲ, ಅದು ಭೌತಿಕವಾಗಿತ್ತು ಎಂದೂ ಕೂಡ ಹೇಳಲಾಗದು, ಏಕೆಂದರೆ ನಾವು ತಿಳಿದಿರುವ ಹಾಗೆ ಭೌತದ್ರವ್ಯ ಅವರ ಸ್ತರಗಳಲ್ಲಿ ಹೆಚ್ಚು ಹೆಚ್ಚಾಗಿ ಮೂರ್ತರೂಪದ ದ್ರವ್ಯಗಳಲ್ಲಿ ಇದ್ದಿರಲಿಲ್ಲ.

**CWM, 7/156** **– ಶ್ರೀಮಾತೆ**

*

**ಪ್ರಧಾನ ದೇವದೂತರು ಮತ್ತು ರಾಯಭಾರಿಗಳು**

ಜಿಯನ್ನೆ ದ ಆರ್ಕ (Jeanne d' Arc) ಸ್ಪಷ್ಟವಾಗಿ ನಾವು ದೇವರುಗಳ ಜಗತ್ತೆಂದು ಕರೆಯುವುದಕ್ಕೆ ಸೇರಿದವಳಾಗಿದ್ದಳು. (ಇಲ್ಲವೆ ಕ್ಯಾಥೋಲಿಕ್‌ರು ಕರೆಯುವ ಸಂತರ ಲೋಕಕ್ಕೆ ಸೇರಿದವಳಾಗಿದ್ದಳು, ದೇವರುಗಳ ಜಗತ್ತು ಹಾಗೂ

ಸಂತರ ಜಗತ್ತು ಇವು ಒಂದೇ ಅಲ್ಲ.) ಅವಳು ನೋಡಿದ ಸತ್ತೆಗಳನ್ನು ಪ್ರಧಾನ ದೇವದೂತರೆಂದು ಕರೆದಳು. ಈ ಸತ್ತೆಗಳು ಉಚ್ಚತರ ಮನಸ್ಸಿನ ಲೋಕ ಮತ್ತು ಅತಿಮಾನಸ ಲೋಕ ಇವುಗಳ ಮಧ್ಯದಲ್ಲಿರುವ ಲೋಕಕ್ಕೆ ಸೇರಿದವರಾಗಿರುತ್ತಾರೆ. ಆ ಲೋಕವನ್ನು ಶ್ರೀ ಅರವಿಂದರು ಅಧಿಮಾನಸ ಎಂದು ಕರೆದಿದ್ದಾರೆ, ಅದು ರಾಯಭಾರಿಗಳ (Formateurs) ಲೋಕ. ಜಿಯೆನ್ನಳಿಗೆ ಯಾವಾಗಲೂ ಕಾಣಿಸಿ–ಕೊಳ್ಳುತ್ತಿದ್ದ ಹಾಗೂ ಮಾತನಾಡುತ್ತಿದ್ದ ಎರಡು ಸತ್ತೆಗಳನ್ನು ಭಾರತೀಯನು ನೋಡಿದ್ದರೆ ಅವನು ಕಾಣಿಸಿಕೊಳ್ಳುವುದರಲ್ಲಿ ಬಹಳ ವ್ಯತ್ಯಾಸವಿರುತ್ತಿತ್ತು, ಏಕೆಂದರೆ ಮನುಷ್ಯ ನೋಡಿದಾಗ ತನ್ನ ಮನಸ್ಸಿನಿಂದ ಪ್ರಕ್ಷೇಪಿಸಿದ ರೂಪ ನೋಡುತ್ತಾನೆ. ನೀವು ನೋಡುವುದಕ್ಕೆ ನೀವು ನಿರೀಕ್ಷಿಸುತ್ತಿದ್ದ ರೂಪ ಕೊಡುತ್ತೀರಿ. ಕ್ರಿಶ್ಚಿಯನ್‌ರು, ಬೌದ್ಧರು, ಹಿಂದುಗಳು, ಷಿಂಟೋ ಧರ್ಮಾವಲಂಬಿಗಳು ಇರುವ ಗುಂಪಿನಲ್ಲಿ ಒಂದೇ ಸತ್ತೆ ಏಕಕಾಲಕ್ಕೆ ಕಾಣಿಸಿಕೊಂಡರೆ ಅದಕ್ಕೆ ಸಂಪೂರ್ಣವಾಗಿ ಭಿನ್ನವಾಗಿರುವ ಹೆಸರನ್ನು ಕೊಡಲಾಗುತ್ತದೆ. ಆ ಸತ್ತೆ ಕಾಣಿಸಿಕೊಂಡದ್ದಕ್ಕೆ ಸಂಬಂಧಿಸಿದ ಹಾಗೆ ಪ್ರತಿಯೊಬ್ಬನೂ ಅವನು ಹೀಗಿದ್ದ, ಹಾಗಿದ್ದ ಎಂದೆಲ್ಲ ಹೇಳುತ್ತಾನೆ, ಎಲ್ಲ ಹೇಳಿಕೆಗಳಲ್ಲಿ ವ್ಯತ್ಯಾಸವಿರುತ್ತದೆ, ಆದಾಗ್ಯೂ ಅದು ಒಂದೇ ಒಂದು ಪ್ರಕಟಣೆಯಾಗಿರುತ್ತದೆ. ಭಾರತದಲ್ಲಿ ಒಬ್ಬರ ದರ್ಶನವಾಗಿರುತ್ತದೆ, ಅವರನ್ನು ನೀವು ದೈವೀ ಮಾತೆ ಎಂದು ಕರೆಯುತ್ತೀರಿ, ಕ್ಯಾಥೋಲಿಕ್ ಜನರು ಅವರನ್ನು ಮೇರಿ ಕನ್ಯೆ ಎಂದು ಕರೆಯುತ್ತಾರೆ, ಜಪಾನೀಯರು ಕರುಣೆಯ ದೇವತೆ ಕ್ವಾನ್ನೋನ (Kwannon) ಎಂದು ಕರೆಯುತ್ತಾರೆ. ಇತರರು ಇತರ ಹೆಸರು ಕೊಡುತ್ತಾರೆ. ಅದು ಅದೇ ದೈವೀ ಶಕ್ತಿ, ದೈವೀ ಸಾಮರ್ಥ್ಯ ಆಗಿರುತ್ತದೆ, ಆದರೆ ಮಾಡಲಾದ ಅದರ ಪ್ರತೀಕಗಳು ಭಿನ್ನ ಧರ್ಮಗಳಲ್ಲಿ ಭಿನ್ನವಾಗಿರುತ್ತವೆ.

**CWM, 3/17-18** **– ಶ್ರೀಮಾತೆ**

*

**ದೇವ ಮತ್ತು ಅಸುರ**

ದೇವ ಮತ್ತು ದೈತ್ಯ, ದೇವ ಮತ್ತು ಅಸುರ ಇವರು ತಮ್ಮ ವ್ಯತ್ಯಾಸದಲ್ಲಿ ಹತ್ತಿರದ ಬಂಧುವರ್ಗಕ್ಕೆ ಸೇರಿರುತ್ತಾರೆ, ಇವರಲ್ಲಿ ಯಾರನ್ನೂ ಉತ್ಕ್ರಾಂತಿಯಲ್ಲಿ ಬಳಸದೆ ಇರಲಾಗುವುದಿಲ್ಲ, ಆದಾಗ್ಯೂ ಅವರು ಸರ್ವರ ಅಸ್ತಿತ್ವದ ಹಾಗೂ

ಸರ್ವರ ಸ್ವಭಾವದ ವಿರುದ್ಧ ಧ್ರುವಗಳಲ್ಲಿ ವಾಸಿಸುತ್ತಾರೆ. ಒಬ್ಬ ಲೀಲೆಯಲ್ಲಿ ಭಾಗವಹಿಸುವುದಕ್ಕೆ ಪ್ರಕಾಶಿತ, ಅನಂತ ಹಾಗೂ ಸಂತೃಪ್ತವಾದುದರಿಂದ ಅವರೋಹಣ ಮಾಡುತ್ತಾನೆ, ಇನ್ನೊಬ್ಬ ಮಬ್ಬಿನಿಂದ, ಅಸ್ಪಷ್ಟತೆಯಿಂದ ಕೋಪದಿಂದ ಹೋರಾಡಲು ಆರೋಹಣ ಮಾಡಿ ಬರುತ್ತಾನೆ. ದೇವನ ಎಲ್ಲ ಕ್ರಿಯೆಗಳು ವಿಶ್ವಂಭರ ಮೂಲದಿಂದ ಬಂದಿರುತ್ತವೆ ಮತ್ತು ವಿಶ್ವಂಭರದತ್ತ ಹೊರಳುವ ಪ್ರವೃತ್ತಿ ಹೊಂದಿರುತ್ತವೆ. ಅವನು ವಿಜಯಿಯಾದ ಸಾಮರಸ್ಯದಿಂದ ಹೊರಹೊಮ್ಮಿ ಜನ್ಮ ತಾಳಿದ್ದಾನೆ. ಅವನ ಗುಣಲಕ್ಷಣಗಳು ಪರಿಶುದ್ಧ ಹಾಗೂ ದಯೆಯಿಂದ ಕೂಡಿದ ಹಸ್ತಗಳನ್ನು ಜೋಡಿಸುತ್ತವೆ ಮತ್ತು ಸ್ವಾಭಾವಿಕವಾಗಿ ದಿವ್ಯಾನಂದದೊಂದಿಗೆ ಒಟ್ಟಿನಲ್ಲಿ ಸಂಯೋಜನೆಗೆ ಒಳಗಾಗುವಂತೆ ಮಾಡುತ್ತವೆ, ಅದು ಹಳ್ಳಿಗಾಡಿನ ಬೃಂದಾವನದಲ್ಲಿ ಶ್ರೀಕೃಷ್ಣ ಪ್ರಮುಖನಾಗಿ ಪರಿಪೂರ್ಣ ವೃತ್ತಗಳಲ್ಲಿ ಸುತ್ತುವರಿಯುವಂತಿರುತ್ತದೆ. ದೇವನ ಅರ್ಥದಲ್ಲಿ ಉತ್ಕ್ರಾಂತಿ ಹೊಂದುವುದಕ್ಕೆ, ಅಂತರ್ಬೋಧೆಯಲ್ಲಿ, ಪ್ರಕಾಶ, ಸಂತೋಷ ಹಾಗೂ ಪ್ರೇಮ ಇವುಗಳಲ್ಲಿ ಅಭಿವೃದ್ಧಿ ಹೊಂದಬೇಕು, ನಿಯಮದ ಪ್ರಕಾರ ಆಳಬೇಕು ಮತ್ತು ಸೇವೆಯ ಮೂಲಕ ಆಳಬೇಕು; ದಿಟ್ಟ ಹಾಗೂ ತೀವ್ರಗತಿಯುಳ್ಳವನಾಗುವುದಕ್ಕೆ ನೋವುಂಟು ಮಾಡದೆ, ದುಷ್ಟತನ ತೋರಿಸದೆ ಹಿಂಸಾತ್ಮಕನಾಗುವುದಕ್ಕೂ ಕ್ಷಮತೆ ಹೊಂದಿರಬೇಕು; ಭೋಗಾಸಕ್ತನಾಗಿದ್ದರೂ ಮೃದುವಾಗಿರುವವನು, ದಯಾಪರ–ನಾಗಿರಬೇಕು; ಶಿಥಿಲತೆ, ದುರ್ಗುಣ ಹಾಗೂ ದೌರ್ಬಲ್ಯಗಳಿರಬಾರದು. ಮನುಕುಲ ಹಾಗೂ ಎಲ್ಲ ಜೀವಿಗಳೊಂದಿಗೆ ಸಹಾನುಭೂತಿಯ ಮೂಲಕ ತನ್ನನ್ನು ಉಜ್ವಲ ಹಾಗೂ ಸಂತೋಷಕರ ರೀತಿಯಲ್ಲಿ ತನ್ನಲ್ಲಿಯೇ ಇಡಿಯಾಗಿರುವಂತೆ ಮಾಡಬೇಕು ಮತ್ತು ಕೊನೆಯಲ್ಲಿ ಒಂದು ಭವ್ಯ ಅವೈಯಕ್ತಿಕ ವ್ಯಕ್ತಿವಿಶಿಷ್ಟತೆಯ ಉತ್ಕ್ರಾಂತಿ ಮಾಡುವುದಿರುತ್ತದೆ ಮತ್ತು ಜಗತ್ತಿನ ಏಕತೆಯ ಸತತ ಅನುಭವದಿಂದ ಸಹಾನುಭೂತಿಯನ್ನು ಔನ್ನತ್ಯಕ್ಕೇರಿಸುವುದಿರುತ್ತದೆ.

ಬಹಳಷ್ಟು ಸಲ ದೇವರುಗಳು ಪ್ರಕಾಶದ ಪರದೆಯೊಳಗಿಂದ ಇಲ್ಲವೆ ಬಿರುಗಾಳಿಯ ಪ್ರವಾಹದ ಮೂಲಕ ಕಾರ್ಯ ಕೈಕೊಳ್ಳುತ್ತಾರೆ. ಜನರ ಮಧ್ಯದಲ್ಲಿ ಜೀವಿಸುವುದನ್ನು ಅವರು ತಿರಸ್ಕರಿಸುವುದಿಲ್ಲ, ದನಗಾಹಿ ಇಲ್ಲವೆ ಕುಶಲಕರ್ಮಿಯ ಹಾಗೆ ಅವರ ಮಧ್ಯೆ ಇರಬಲ್ಲರು. ಅವರು ತಮ್ಮ ಆಂತರಿಕ ಉತ್ಕ್ರಾಂತಿಯಲ್ಲಿ ಇಲ್ಲವೆ ಬಾಹ್ಯ ಸುಯೋಗಗಳಲ್ಲಿ ಶಿಲುಬೆಯಿಂದ ಇಲ್ಲವೆ ಮುಳ್ಳಿನ ಕಿರೀಟದಿಂದ

ಕುಗ್ಗಿಕೊಳ್ಳುವುದಿಲ್ಲ. ಏಕೆಂದರೆ ಅಹಂಕಾರವನ್ನು ಸಿಲುಬೆಗೇರಿಸಬೇಕು ಎಂಬುದನ್ನು ಅವರು ತಿಳಿದುಕೊಂಡಿರುತ್ತಾರೆ, ಇಂತಹದನ್ನು ಭಗವಂತ ಹಾಗೂ ದೇವರುಗಳು ಹೇಗೆ ಮಾಡಬೇಕು ಎಂಬುದರ ರೀತಿಯನ್ನು ತೋರಿಸಿಕೊಡದಿದ್ದರೆ ಮನುಷ್ಯರು ಅದನ್ನು ಹೇಗೆ ಒಪ್ಪಿಕೊಳ್ಳಬಲ್ಲರು? ಮಾನವ ಸತ್ತೆಯಲ್ಲಿ ಸಾರಭೂತವಾಗಿ ಇರುವುದೆಲ್ಲವನ್ನು ಕೈಗೆತ್ತಿಕೊಂಡು ಅದನ್ನು ಅದರ ಅತ್ಯಂತ ಪರಿಪೂರ್ಣ ಮಿತಿಗೆ ಏರಿಸಬೇಕು, ಅದರಿಂದಾಗಿ ಅದು ಅವನ ಹಾಗೂ ಇತರರ ಪ್ರಕಾಶ, ಸಂತೋಷ ಹಾಗೂ ಸಾಮರ್ಥ್ಯ ಇವುಗಳ ಅಂಶವಾಗುವುದು, ಇದೇ ದೈವಿಕತೆ. ಇದು ಕೂಡ ಅತಿಮಾನವತ್ವದ ಪ್ರವಾಹವಾಗಬೇಕು.

ಆದರೆ ಇದೆಲ್ಲದರ ಯಾವುದನ್ನೂ ದೈತ್ಯ ಹೊಂದಿರುವುದಿಲ್ಲ, ಅದು ಅವನ ಗ್ರಹಿಕೆಗೆ ಅತ್ಯಂತ ಶ್ರೇಷ್ಠವಾದದ್ದು ಹಾಗೂ ಸೂಕ್ಷ್ಮವಾದದ್ದಾಗಿರುತ್ತದೆ. ಅವನ ಹುಟ್ಟುಗುಣಗಳು ಗೋಚರವಾಗುವ, ಸ್ಪರ್ಶವೇದ್ಯವಾಗುವ ಪ್ರಭುತ್ವಕ್ಕೆ ಹಾಗೂ ಸಂವೇದನಾಪೂರ್ವಕವಾದ ಪ್ರಾಬಲ್ಯಕ್ಕೆ ಕರೆಕೊಡುತ್ತವೆ. ತನ್ನ ಕಾಲಡಿಯಲ್ಲಿ ಏನೋ ಒಂದು ಸಂಕಟದಿಂದ ವಿಲಿವಿಲಿ ಒದ್ದಾಡದೆ ಇದ್ದರೆ ಅವನು ತನ್ನ ಸಾಮ್ರಾಜ್ಯದ ಬಗ್ಗೆ ನಿಶ್ಚಿತತೆ ಹೊಂದುವುದು ಹೇಗೆ? ಶೋಷಿತರಾದವರು ಕುಗ್ಗದೇ ಹೋದರೆ ಶೋಷಣೆಯಿಂದ ಪ್ರಯೋಜನವೇನು? ಒತ್ತಾಯಪಡಿಸಲು, ಬಲವಂತವಾಗಿ ಬಾಹ್ಯದಲ್ಲಿ ಹಾಗೂ ಅವಿರೋಧವಾಗಿ ಸೆಳೆದುಕೊಳ್ಳಲು, ಕೊಂದು ಹಾಕಲು ಕ್ಷಮತೆ ಹೊಂದಿರುವುದು– ಅದು ಅವನನ್ನು ಕೀರ್ತಿ ಪಡೆದ, ಪ್ರಾಬಲ್ಯ ಗಳಿಸಿದ ಅರ್ಥದಿಂದ ತುಂಬಿಬಿಡುತ್ತದೆ. ಏಕೆಂದರೆ ಅವನು ವಿಭಜನೆಯ ಪುತ್ರ ಮತ್ತು ಬಲವತ್ತರವಾಗಿ ಅರಳಿಕೊಳ್ಳುತ್ತಿರುವ ಅಹಂಕಾರ. ಹೋಲಿಕೆಗೆ ಬರುವ ಇತರರ ಸೀಮಿತತೆಯನ್ನು ಭಾವನೆಗೆ ತಂದುಕೊಳ್ಳುವುದು ಅವನಿಗೆ ಅವಶ್ಯವಾಗಿರುತ್ತದೆ, ಅದರಿಂದಾಗಿ ತಾನು ಆಳತೆಗೆ ಸಿಗದವನೆಂದು ಕಲ್ಪಿಸಿಕೊಳ್ಳು–ವಂತಾಗುತ್ತದೆ. ಏಕೆಂದರೆ ಯಾವುದೇ ಬಾಹ್ಯ ಪರಿಸ್ಥಿತಿ ತಳ್ಳಿ ಹಾಕದಂತಹ ನಿಜವಾದ, ಸ್ವ–ಅಸ್ತಿತ್ವದಲ್ಲಿರುವ ಅರ್ಥ ಅವನಲ್ಲಿರುವುದಿಲ್ಲ. ವ್ಯತ್ಯಾಸ, ವಿಭಜನೆ, ಇತರರ ಸಂಕಲ್ಪಗಳ ಹಾಗೂ ಜೀವನಗಳ ನಿರಾಕರಣೆ ಇವೆಲ್ಲ ಅವನ ಸ್ವ–ಅಭಿವೃದ್ಧಿಗೆ ಹಾಗೂ ಸ್ವ–ದೃಢೀಕರಣಕ್ಕೆ ಅವಶ್ಯವಾಗಿರುತ್ತವೆ. ದೈತ್ಯ ನುಂಗಿ ಹಾಕುವುದರೊಂದಿಗೆ ಏಕತೆ ತರುತ್ತಾನೆ, ಸಾಮರಸ್ಯಗೊಳಿಸುವುದರ ಮೂಲಕವಲ್ಲ, ತಾನೇ ಅಲ್ಲದ್ದನ್ನು ಅಸ್ತಿತ್ವದಲ್ಲಿರದಂತೆ ಇಲ್ಲವೆ ತನಗೆ ಅಧೀನವಾಗುವಂತೆ ಅವನು

ಜಯಿಸಬೇಕು, ತುಳಿದುಹಾಕಬೇಕು, ಅದರಿಂದಾಗಿ ಅವನದೇ ಪ್ರತೀಕ ಎಲ್ಲ ವಸ್ತು–ವಿಷಯಗಳ ಮೇಲೆ ಎದ್ದು ಕಾಣಬೇಕು, ತನ್ನ ಆವರಣದ ಮೇಲೆ ಪ್ರಾಬಲ್ಯ ಮೆರೆಸಬೇಕು.

**CWSA, 13/152–54** **– ಶ್ರೀ ಅರವಿಂದರು**

*

**ದೈವಿಕ ಹಾಗೂ ಆಸುರಿಕ ಸ್ವಭಾವ**

ದೈವಿಕ ಸ್ವಭಾವವನ್ನು ಸಾತ್ವಿಕ ರೂಢಿಗಳು ಹಾಗೂ ಗುಣಗಳ ಪರಾಕಾಷ್ಠೆಯ ಮೂಲಕ ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ; ಸ್ವ–ನಿಯಂತ್ರಣ, ತ್ಯಾಗ, ಧಾರ್ಮಿಕ ರೂಢಿ, ಸ್ವಚ್ಛತೆ ಹಾಗೂ ಪರಿಶುದ್ಧತೆ, ಸಾಚಾತನ, ನೇರವಾಗಿರುವಿಕೆ, ಸತ್ಯ, ಸ್ಥಿರತೆ ಹಾಗೂ ಸ್ವಾರ್ಥತ್ಯಾಗ, ಎಲ್ಲ ಜೀವಿಗಳಿಗೆ ಕರುಣೆ, ವಿನಮ್ರತೆ, ಮೃದುವಾಗಿರುವಿಕೆ, ಕ್ಷಮಾಗುಣ, ತಾಳ್ಮೆ, ಸ್ಥೈರ್ಯ, ಎಲ್ಲ ತಳಮಳದಿಂದ, ವಿಚಾರಶೂನ್ಯತೆಯಿಂದ ಹಾಗೂ ಚಪಲಚಿತ್ತತೆಯಿಂದ ಆಳವಾದ, ಮಧುರವಾದ ಹಾಗೂ ಗಂಭೀರ ಸ್ವಾತಂತ್ರ್ಯ ಇವೆಲ್ಲ ಅದರ ಹುಟ್ಟುಗುಣದ ವಿಶೇಷ ಲಕ್ಷಣಗಳಾಗಿರುತ್ತವೆ. ಆಸುರಿಕ ಗುಣಗಳಾದ ಕ್ರೋಧ, ದುರಾಶೆ, ಕುತಂತ್ರ, ನಂಬಿಕೆದ್ರೋಹ, ಸಂಕಲ್ಪಪೂರ್ವಕ ಇತರರಿಗೆ ಗಾಯವನ್ನುಂಟು ಮಾಡುವುದು, ಗರ್ವ, ದುರಹಂಕಾರ ಮತ್ತು ಅತಿಯಾದ ಸ್ವ–ಪ್ರತಿಷ್ಠೆ ಇಂತಹವುಗಳೆಲ್ಲ ದೈವಿಕ ಸ್ವಭಾವದ ರಚನೆಯಲ್ಲಿರುವುದಿಲ್ಲ. ಆದರೆ ಅದರ ಮೃದು ಸ್ವಭಾವ, ಸ್ವಾರ್ಥತ್ಯಾಗ ಹಾಗೂ ಸ್ವ–ನಿಯಂತ್ರಣ ಇವೆಲ್ಲ ದೌರ್ಬಲ್ಯದಿಂದ ಮುಕ್ತವಾಗಿರುತ್ತವೆ: ಅದಕ್ಕೆ ಚೈತನ್ಯ ಹಾಗೂ ಆತ್ಮಶಕ್ತಿಗಳು, ದೃಢವಾದ ನಿರ್ಧಾರ, ಆತ್ಮದ ನಿರ್ಭಯತೆಗಳಿರುತ್ತವೆ, ಆ ಆತ್ಮ ಸರಿಯಾದುದರಲ್ಲಿ, ಸತ್ಯಕ್ಕನುಗುಣವಾಗಿ, ನಿರುಪದ್ರವತೆಯಿಂದ ಜೀವಿಸುತ್ತದೆ, ತೇಜಃ, ಅಭಯಮ್, ಧೃತಿ, ಅಹಿಂಸಾ, ಸತ್ಯಮ್. ಇಡೀ ಸತ್ತೆ, ಇಡೀ ಮನೋಭಾವ ಸಮಗ್ರವಾಗಿ ಪರಿಶುದ್ಧವಾಗಿರುತ್ತವೆ, ಅಲ್ಲಿ ಜ್ಞಾನಕ್ಕಾಗಿ ಅರಸುವಿಕೆ ಇರುತ್ತದೆ ಮತ್ತು ಸ್ಥಿರ ಹಾಗೂ ಶಾಂತ ರೀತಿಯಲ್ಲಿ ಜ್ಞಾನದಲ್ಲಿ ನೆಲೆಸುವಿಕೆ ಇರುತ್ತದೆ. ದೈವಿಕ ಸ್ವಭಾವದಲ್ಲಿ ಜನಿಸಿದ ಮನುಷ್ಯನಿಗೆ ಇದು ಸಂಪತ್ತು ಹಾಗೂ ವಿಸ್ತಾರವಾಗಿರುತ್ತದೆ.

ಅಸುರ ಸ್ವಭಾವಕ್ಕೂ ಅದರ ಸಂಪತ್ತಿದೆ, ಶಕ್ತಿಯ ವಿಸ್ತಾರವಿದೆ, ಆದರೆ ಅದು

ಬಹಳ ಭಿನ್ನವಾದ, ಸಾಮರ್ಥ್ಯಪೂರ್ಣ ಮತ್ತು ಅನಿಷ್ಟ ಬಗೆಯದಾಗಿರುತ್ತದೆ. ಅಸುರ ಸ್ವಭಾವದ ಜನರಲ್ಲಿ ಕ್ರಿಯೆಯ ಇಲ್ಲವೆ ವರ್ಜನೆಯ ಹಾಗೂ ನೆರವೇರಿಕೆ ಕಂಡುಕೊಳ್ಳುವ ಇಲ್ಲವೆ ನಿರ್ಬಂಧಕ್ಕೊಳಪಡಿಸುವ ನಿಜವಾದ ಜ್ಞಾನವಿರುವುದಿಲ್ಲ. ಅವರಲ್ಲಿ ಸತ್ಯವಿರುವುದಿಲ್ಲ, ಸ್ವಚ್ಛ ಕಾರ್ಯವಿರುವುದಿಲ್ಲ, ವಿಶ್ವಾಸಾರ್ಹ ಆಚರಣೆಯಿರುವುದಿಲ್ಲ. ಅವರು ಸ್ವಾಭಾವಿಕವಾಗಿ ಜಗತ್ತಿನಲ್ಲಿ ಆತ್ಮದ ತೃಪ್ತಿಯ ಭವ್ಯ ಲೀಲೆಯ ಹೊರತಾಗಿ ಬೇರೆ ಏನನ್ನೂ ನೋಡುವುದಿಲ್ಲ; ಅವರ ಜಗತ್ತಿಗೆ ಆಸೆ ಕಾರಣ ಹಾಗೂ ಬೀಜ, ಆಳಿಕೆ ನಡೆಸುವ ಶಕ್ತಿ ಹಾಗೂ ನಿಯಮ, ಅವಕಾಶಗಳ ಜಗತ್ತು, ನ್ಯಾಯಯುತ ಸಂಬಂಧರಹಿತವಾದದ್ದು, ಕರ್ಮದ ಜೊತೆಗೂಡಿದ್ದು, ದೇವನಿಲ್ಲದ ಜಗತ್ತು, ನಿಜವಾದದ್ದಲ್ಲ, ದೈವೀ ಸತ್ಯದಿಂದ ಸ್ಥಾಪಿತವಾದದ್ದಲ್ಲ. ಅವರಲ್ಲಿ ಯಾವುದೇ ಒಳ್ಳೆಯ ಬೌದ್ಧಿಕ ಇಲ್ಲವೆ ಉಚ್ಚತರ ಧಾರ್ಮಿಕ ಮತ ತತ್ವ ಇದ್ದರೂ ಇದು ಮಾತ್ರ ಅವರ ಮನಸ್ಸಿನ ನಿಜವಾದ ಸೂತ್ರ ಸಂಗ್ರಹ ಮತ್ತು ಕ್ರಿಯೆಯಲ್ಲಿರುವ ಸಂಕಲ್ಪ, ಅವರು ಯಾವಾಗಲೂ ಆಸೆ ಮತ್ತು ಅಹಂಕಾರ ಇವುಗಳ ಪಂಥವನ್ನು ಅನುಸರಿಸುತ್ತಾರೆ. ಜೀವನವನ್ನು ಆ ರೀತಿ ನೋಡುವು–ದರಿಂದ ಅವರು ನೈಜತೆಯತ್ತ ವಾಲಿಕೊಂಡಿರುತ್ತಾರೆ ಮತ್ತು ಅದರ ಮಿಥ್ಯೆಯಿಂದ ತಮ್ಮ ಆತ್ಮ ಹಾಗೂ ತರ್ಕಗಳನ್ನು ಹಾಳುಮಾಡುತ್ತಾರೆ. ಅಸುರನಾದ ಮನುಷ್ಯ ಭೀಕರ, ದೈತ್ಯಾಕಾರದ, ಹಿಂಸಾತ್ಮಕ ಕ್ರಿಯೆಯ, ಜಗತ್ತಿನಲ್ಲಿ ವಿನಾಶದ ಸಾಮರ್ಥ್ಯವಿರುವ ಕೇಂದ್ರ ಇಲ್ಲವೆ ಉಪಕರಣವಾಗುತ್ತಾನೆ, ಅನ್ಯಾಯ ಹಾಗೂ ಅನಿಷ್ಟಗಳ ಕಾರಂಜಿಯಾಗುತ್ತಾನೆ. ದುರಹಂಕಾರ, ಸ್ವ–ಪ್ರತಿಷ್ಠೆಯೊಂದಿಗೆ ತುಂಬಿ–ಕೊಂಡಿರುವಿಕೆ ಮತ್ತು ಗರ್ವದಿಂದ ಅಮಲೇರಿರುವಿಕೆ ಇವೆಲ್ಲ ಇರುವ ಈ ಜನರನ್ನು ತಪ್ಪುದಾರಿಗೆ ಎಳೆಯಲಾಗಿರುತ್ತದೆ. ಭ್ರಮೆಗೊಳಗಾಗುವಂತೆ ಮಾಡಲಾ–ಗಿರುತ್ತದೆ, ಅವರು ಮಿಥ್ಯೆ ಮತ್ತು ಹಠಮಾರಿತನ ಇರುವ ಗುರಿಗಳಲ್ಲಿ ಪಟ್ಟುಹಿಡಿದುಕೊಂಡಿರುತ್ತಾರೆ, ತಮ್ಮ ಹಂಬಲಗಳ ಅಶುದ್ಧ ತೀರ್ಮಾನಗಳನ್ನು ಬೆಂಬತ್ತಿರುತ್ತಾರೆ. ಆಸೆ ಮತ್ತು ಸಂತೋಷಪಡುವಿಕೆ ಇವುಗಳಷ್ಟೇ ಜೀವನದ ಗುರಿ ಎಂದು ಅವರು ಕಲ್ಪನೆ ಮಾಡಿಕೊಳ್ಳುತ್ತಾರೆ ಮತ್ತು ಆ ಗುರಿಯನ್ನು ಬೆಂಬತ್ತಲು ಅವರು ತಮ್ಮ ಮಿತಿಮೀರಿದ ಹಾಗೂ ತೃಪ್ತಿಪಡಿಸಲಾಗದ ಬೆಂಬತ್ತುವಿಕೆಯಲ್ಲಿ ಮೃತ್ಯುವಿನ ಕ್ಷಣ ಬರುವವರೆಗೆ ಅಳತೆಗೆ ಸಿಗಲಾರದ, ನಿಂತುಹೋಗದ ಚಿಂತೆ ಹಾಗೂ ಯೋಚನೆಗಳು ನುಂಗಿ ಹಾಕುವುದಕ್ಕೆ ಬಲಿಯಾಗುತ್ತಾರೆ. ನೂರಾರು

ಬಂಧನಗಳಿಗೆ ಒಳಗಾಗಿ, ಕ್ರೋಧ ಹಾಗೂ ಕಾಮಾಸಕ್ತಿಗಳಿಂದ ನುಂಗಿದವರಾಗಿ, ತಮ್ಮ ಕಡುಬಯಕೆಯ ಹಾಗೂ ಸಂತೋಷದ ತೃಪ್ತಿಗಾಗಿ ಅನ್ಯಾಯದಿಂದ ಬರುವ ಲಾಭಗಳನ್ನು ಗಳಿಸುವುದರಲ್ಲಿ ಮಗ್ನರಾಗಿ ಅವರು "ಇಂದು ಆಸೆಯ ಈ ವಸ್ತುವನ್ನು ಗಳಿಸಿದೆ, ನಾಳೆ ಆ ಇನ್ನೊಂದನ್ನು ಗಳಿಸುತ್ತೇನೆ, ಇಂದು ನನ್ನಲ್ಲಿ ಇಷ್ಟೊಂದು ಸಂಪತ್ತಿದೆ, ನಾಳೆ ಇನ್ನೂ ಹೆಚ್ಚಿನದು ನನಗೆ ದೊರಕುವುದು, ನಾನು ನನ್ನ ಈ ಶತ್ರುವನ್ನು ಕೊಂಡು ಹಾಕಿದೆ, ಉಳಿದ ಶತ್ರುಗಳನ್ನೂ ಕೂಡ ಕೊಂದು ಹಾಕುವೆ. . . ." ಎಂದು ಯೋಚಿಸುತ್ತಾರೆ.

**CWSA, 19/471–73** **– ಶ್ರೀ ಅರವಿಂದರು**

*

**ಪ್ರಾಣಿಕ ಲೋಕದ ಕಣ್ಣು ಕೋರೈಸುವಂತಹ ಸತ್ತೆಗಳು**

ಮೊದಲಿನ ಯೋಗಗಳು ಕೊನೆಗೊಂಡಲ್ಲಿಂದ ತಮ್ಮ ಯೋಗ ಪ್ರಾರಂಭವಾಗುತ್ತದೆಂದು ಶ್ರೀ ಅರವಿಂದರು ಯಾವಾಗಲೂ ಹೇಳುತ್ತಿದ್ದರು. ಅವರ ಯೋಗವನ್ನು ಸಿದ್ಧಿಸಿಕೊಳ್ಳುವುದಕ್ಕೆ ಮೊಟ್ಟ ಮೊದಲು ಅವಶ್ಯವಾದದ್ದೆಂದರೆ ಹಳೆಯ ಯೋಗಗಳು ತಲುಪಿದ್ದ ಕಟ್ಟಕಡೆಯ ಮಿತಿಯನ್ನು ತಲುಪಬೇಕು, ಎಂದರೆ, ಭಗವಂತನ ಬಗ್ಗೆ ಗ್ರಹಿಕೆ, ಅವನೊಡನೆ ಏಕತೆ, ಭಗವಂತನೊಡನೆ ಗುರುತಿಸಿಕೊಳ್ಳುವುದು. ಆದರೆ ಆ ಭಗವಂತ ಅಧಿಮಾನಸದ ಭಗವಂತ, ಅದಾಗಲೇ ಮನುಷ್ಯನ ಪ್ರಜ್ಞೆಗೆ ಹೋಲಿಸಿದರೆ ಯೋಚಿಸಲಸಾಧ್ಯವಾದ ಏನೋ ಒಂದು, ಏಕೆಂದರೆ ಅಲ್ಲಿಗೆ ತಲುಪಲು ಕೂಡ ಮನುಷ್ಯ ಹಲವಾರು ಸ್ತರಗಳ ಮೂಲಕ ಸಾಗಿ ಹೋಗಬೇಕಾಗುತ್ತದೆ ಮತ್ತು ಈ ಸ್ತರಗಳಲ್ಲಿ ಅವನ ಕಣ್ಣು ಕೋರೈಸುವಂತಹದಿರುತ್ತದೆ.

ಪ್ರಾಣಿಕ ಲೋಕದ ಸತ್ತೆಗಳಿದ್ದಾರೆ. ಅವರು ಮನುಷ್ಯರಿಗೆ ತಮ್ಮನ್ನು ತೋರಿಸಿಕೊಂಡರೆ, ಇಲ್ಲವೆ ವಿಷಯಗಳನ್ನು ನಿಖರವಾಗಿ ಹೇಳುವುದಾದರೆ ಅವರು ಜನರಿಗೆ ತೋರಿಬಂದಾಗಲೆಲ್ಲ ಅವರನ್ನು ಮನುಷ್ಯರು ಪರಮೋಚ್ಚ ದೇವರೆಂದು ಭಾವಿಸಿದ್ದಾರೆ.– ಇವರು ಪ್ರಾಣಿಕ ಸತ್ತೆಗಳು, ನಿಮಗೆ ಇಷ್ಟವಾದರೆ ನಾವು ಮುಖವಾಡ ಎಂದು ಕರೆಯಬಹುದು, ಆದರೆ ಅದು ಬಹಳ

ಯಶಸ್ವಿಯಾದ ಮುಖವಾಡ, ಏಕೆಂದರೆ ಪ್ರಾಣಿಕ ಸತ್ತೆಯನ್ನು ನೋಡಿದವರು ತಾವು ಪರಮೋಚ್ಚ ದೇವಪ್ರಮುಖನನ್ನು ನೋಡಿದೆವೆಂದು ಮನವರಿಕೆ ಮಾಡಿಕೊಂಡಿದ್ದರು ಮತ್ತು ಆದಾಗ್ಯೂ ಆ ಸತ್ತೆಗಳು ಪ್ರಾಣಿಕ ಲೋಕಕ್ಕೆ ಸೇರಿದವುಗಳಾಗಿದ್ದವು. ನಮ್ಮ ಮನುಕುಲಕ್ಕೆ ಹೋಲಿಸಿದರೆ ಅಧಿಮಾನಸದ ಅಸ್ತಿತ್ವಗಳು, ಮನಸ್ಸಿಗೆ ಅತೀತವಾದ ದೇವರುಗಳು, ಅಧಿಕ ಬಲವಿರುವ ಅಸ್ತಿತ್ವ-ಗಳಾಗಿರುತ್ತವೆ, ಮನುಷ್ಯರು ಅವರ ಸಂಪರ್ಕಕ್ಕೆ ಬಂದಾಗ ಅವರು ನಿಜವಾಗಿಯೂ ದಿಗ್ಭ್ರಾಂತರಾಗುತ್ತಾರೆ.

**CWM, 5/283-84** **– ಶ್ರೀಮಾತೆ**

*

**ಪ್ರಾಣಿಕ ಜಗತ್ತಿನ ಸತ್ತೆಗಳು ಹಾಗೂ ಧರ್ಮಗಳು**

ಪ್ರಾರಂಭದಲ್ಲಿ ನಾನು ಹೇಳಿದ್ದೇನೆಂದರೆ ಪ್ರಾಣಿಕ ಲೋಕ ಚಿಕ್ಕ ಸತ್ತೆಗಳಿಂದ, ಚಿಕ್ಕ ರೂಪ ತಾಳುವಿಕೆಗಳಿಂದ, ಮೃತರಾದ ಮಾನವರ ದೇಹಗಳಿಂದ ಅಳಿದುಳಿದ ಭಾಗಗಳಿಂದ ಜನನಿಬಿಡವಾಗಿರುತ್ತದೆ. ಈ ಪ್ರಾಣಿಕ ಲೋಕಕ್ಕೆ ಯಾವ ಸಂಬಂಧ ಇರದ ಇಡೀ ಪ್ರಾಣಿಕ ಲೋಕವಿದೆ, ಅದರಲ್ಲಿರುವ ಸತ್ತೆಗಳು ಪ್ರಾಣಿಕ ಸಾಮರ್ಥ್ಯ ಹಾಗೂ ಶ್ರೇಷ್ಠ ಸೌಂದರ್ಯಗಳಿಂದ ಕೂಡಿಕೊಂಡಿರುತ್ತವೆ. ರಹಸ್ಯ ವಿದ್ಯೆ (occultism) ಯಲ್ಲಿ ವಿಶೇಷ ಆಸಕ್ತಿಯಿಲ್ಲದೆ ತೊಡಗಿಕೊಂಡ ಬಹಳಷ್ಟು ಜನರು, ಆಳವಾದ ಆಧ್ಯಾತ್ಮಿಕ ಜೀವನವಿಲ್ಲದೆ ಇರುವವರು ಆ ಸತ್ತೆಗಳಿಂದ ಕೂಡಲೆ ಭ್ರಮೆಗೊಳಗಾಗುತ್ತಾರೆ– ಆ ಸತ್ತೆಗಳನ್ನು ಪರಮೋಚ್ಚ ದೇವರುಗಳೆಂದು ಭಾವಿಸಿ ಪೂಜಿಸುತ್ತಾರೆ. ಸಾಧಾರಣವಾಗಿ ಧರ್ಮಗಳ ಸೃಷ್ಟಿ ಆ ಬಗೆಯಲ್ಲಿಯೇ ಆಗಿರುತ್ತದೆ. ಅವು ಶ್ರೇಷ್ಠ ಯಶಸ್ಸನ್ನು ಕಂಡಿವೆ. ಬಹಳಷ್ಟು ಧರ್ಮಗಳಿಗೆ ಅವರೇ ಪರಮೋಚ್ಚ ದೇವರುಗಳಾಗಿದ್ದಾರೆ– ಅವರು ಪ್ರಾಣಿಕ ಲೋಕದ ಸತ್ತೆಗಳು ಮತ್ತು ಅವು ಸಹಿಸಲಸಾಧ್ಯವಾದ ಸೌಂದರ್ಯದ ತೋರಿಕೆಯನ್ನು ಧಾರಣ ಮಾಡಬಲ್ಲವು. ಅವುಗಳಿಂದ ಮೋಸ ಹೋಗದೆ ಇರುವುದಕ್ಕಾಗಿ ಆಧ್ಯಾತ್ಮಿಕ ಸಹಜ ಪ್ರವೃತ್ತಿ, ನಿಜವಾದ ಆಧ್ಯಾತ್ಮಿಕ ಪರಿಶುದ್ಧತೆಯಿರುವ ಸಹಜ ಸ್ವಭಾವ ಬೇಕಾಗುತ್ತದೆ.

ಬಹಳಷ್ಟು ಧರ್ಮಗಳು ಹಾಗೂ ಪಂಥಗಳು ಜ್ಞಾನಪ್ರಕಾಶನ ಹಾಗೂ

ಪವಾಡಗಳು ಇವುಗಳ ಆಧಾರದ ಮೇಲೆ ಸ್ಥಾಪಿತಗೊಂಡಿದ್ದವು, ಅವುಗಳ ಪ್ರತಿಯೊಂದು ಚಿಕ್ಕ ಭಾಗವೂ ಕೂಡ ಪ್ರಾಣಿಕ ಸತ್ತೆಗಳಿಂದ ಬರುತ್ತದೆ. ಮಾನವ ಜೀವನದಲ್ಲಿರುವ ಅತಿ ದೊಡ್ಡ ಸಮಸ್ಯೆಗಳಲ್ಲಿ ಅದೂ ಒಂದು, ನಾನು ಆಧ್ಯಾತ್ಮಿಕ ಜೀವನ ಕುರಿತು ಹೇಳುತ್ತಿಲ್ಲ, ಆಚೆಗಿರುವುದರ ಜೊತೆಗೆ ವ್ಯವಹರಿಸುತ್ತಿರುವ ಜನರ ಜೀವನ ಕುರಿತು ಹೇಳುತ್ತಿರುವೆ.

ಪ್ರಾಣಿಕ ಜಗತ್ತಿನಲ್ಲಿ ಆಕಾಶ (ದೈವೀ ಸ್ವರ್ಗಗಳಲ್ಲ) ಗಳಿವೆ, ಅವು ನಿಜವಾಗಿ ಸ್ವರ್ಗಗಳ ಹಾಗಿವೆ. ಸ್ವಾಭಾವಿಕವಾಗಿ ನಿಜವಾಗಿ ದೈವಿಕವಾಗಿರುವ ಅಂಶದ ಕೊರತೆ ಇರುತ್ತದೆ, ಆದರೆ ಕೇವಲ ಆಧ್ಯಾತ್ಮಿಕ ಪರಿಶುದ್ಧತೆ ಮತ್ತು ನಿಜವಾದ ಆಧ್ಯಾತ್ಮಿಕ ಭಾವನೆ ವ್ಯತ್ಯಾಸವನ್ನು ನಿಮಗೆ ತೋರಿಸಿಕೊಡಬಹುದು. ಪ್ರಾಣಿಕ ಇಲ್ಲವೆ ಮಾನಸಿಕ ಜಗತ್ತುಗಳಲ್ಲಿ ಇರುವವರೆಲ್ಲ ಸಂಪೂರ್ಣವಾಗಿ ಭ್ರಮೆಗೊಳಗಾಗಿ–ರುತ್ತಾರೆ. ಅವರು ಅದ್ಭುತ ವಿಷಯಗಳನ್ನು, ಹೆಚ್ಚಿನ ರೀತಿಯಲ್ಲಿ ಪವಾಡಗಳನ್ನು ನೋಡುತ್ತಾರೆ, (ಅಲ್ಲಿಯೇ ನೀವು ಬಹಳಷ್ಟು ಪವಾಡಗಳನ್ನು ನೀವು ಕಂಡುಕೊಳ್ಳ–ಬಹುದು.)

ಆಧ್ಯಾತ್ಮಿಕ ಭಾವನೆ ಇರುವವರಿಗೆ ಅತ್ಯಂತ ಕಣ್ಣು ಕೋರೈಸುವ ಪ್ರಾಣಿಕ ಪ್ರಕಾಶಗಳು ಯಾವಾಗಲೂ ಕೃತ್ರಿಮವಾಗಿರುವಂತಹದನ್ನು ಹೊಂದಿರುವ ಏನೋ ಒಂದೆಂದು ತೋರಿಬರುತ್ತವೆ.– ಅದೆಲ್ಲ ಕೃತ್ರಿಮ, ಅನಾದರದ, ಬಿರುಸಾದ, ಆಕ್ರಮಣಶೀಲ, ಮೋಸಮಾಡುವಂತಹ ವಿಷಯ ಎಂಬ ಭಾವನೆ ಅವರಿಗೆ ಬರುತ್ತದೆ. ಇರುವ ವಿಷಯ ಅದೇ ಆಗಿದೆ: ನೀವು ಇದೆಲ್ಲದರ ಆಚೆಗೆ ಇರಬೇಕು, ಮೂರ್ಖರಾಗಿರದಂತೆ ಇರಬೇಕು.

**ಅನುಯಾಯಿಯೊಂದಿಗೆ ಮಾತುಕತೆ, ಜುಲೈ 11, 1956 – ಶ್ರೀಮಾತೆ**

*

**ಪ್ರಕೃತಿಯ ಚೇತನ ಸ್ವರೂಪಿಗಳು**

ತಾಂತ್ರಿಕರು ವ್ಯವಹರಿಸುವ ಎಲ್ಲ ಸತ್ತೆಗಳ ಬಗೆಗೂ ವಿಷಯ ಅದೇ ಆಗಿದೆ– ಅವುಗಳ ಮೂಲ ಪ್ರಾಣಿಕವಲ್ಲ, ಅವು ಪ್ರಕೃತಿಗೆ ಸೇರಿದವುಗಳಾಗಿರುತ್ತವೆ, ಅವು ವ್ಯಕ್ತಿರೂಪ ತಾಳಿದ ಪ್ರಕೃತಿಯ ಶಕ್ತಿಗಳು, ಪ್ರಕೃತಿಯ ನಿಯಮಕ್ಕೆ ವಿಧೇಯ–

ವಾಗಿರುವಂತಹವು, ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವುಗಳ ಮೂಲ ಕೆಳಸ್ತರದಲ್ಲಿರುತ್ತದೆ, ಪ್ರಾಣಿಕ ಲೋಕದಲ್ಲಿರುವುದಿಲ್ಲ, ಆದರೆ ಭೌತಿಕ ಸ್ತರದಲ್ಲಿರುತ್ತದೆ. ಅವು ಭೌತಿಕದಲ್ಲಿ ಪ್ರಾಣಿಕ ಶಕ್ತಿಗಳಾಗಿರುತ್ತವೆ, ಆದರೆ ಪ್ರಾಣಿಕ ಮೂಲದವುಗಳಲ್ಲ.

ವಾಸ್ತವದಲ್ಲಿ ಪ್ರಕೃತಿಯ ಚೇತನ ಸ್ವರೂಪಿ (spirit) ಗಳಂತ ಅಸ್ತಿತ್ವಗಳನ್ನು ನಾನು ಸೂಕ್ಷ್ಮಭೌತಿಕದಲ್ಲಿ ಪ್ರವೇಶಿಸಿದಾಗ ನೋಡುತ್ತೇನೆ, ನಾನು ಸೂಕ್ಷ್ಮ ಭೌತಿಕದಲ್ಲಿ ಸಾಮಾನ್ಯವಾಗಿ, ಇಲ್ಲಿ ಆಶ್ರಮದಲ್ಲಿಯ ಜನರಿಗಾಗಿ, ಸ್ಥೂಲರೂಪದಲ್ಲಿ ಜಗತ್ತಿನ ಜನರಿಗಾಗಿ ಕಾರ್ಯಕೈಕೊಳ್ಳುತ್ತಿರುತ್ತೇನೆ. ಬಹಳಷ್ಟು ಸಲ ಅವು ನನ್ನ ಜೊತೆಗಿರುತ್ತವೆ, ಇಲ್ಲವೆ ನನ್ನ ಕಾರ್ಯ ನಡೆಯುತ್ತಿರುವಾಗ ಅವುಗಳನ್ನು ಭೇಟಿ ಮಾಡುತ್ತೇನೆ. ಅವು, ಸಾಧಾರಣವಾಗಿ, ಸ್ತ್ರೀ ರೂಪದಲ್ಲಿ ತೋರಿಬರುತ್ತವೆ, ಅವು ಸ್ವಲ್ಪ ಕಾರ್ಯ ಮಾಡುತ್ತವೆ ಮತ್ತು ಅವುಗಳಲ್ಲಿ ಶ್ರೇಷ್ಠಮಟ್ಟದ ಸಾಮರ್ಥ್ಯವಿರುತ್ತದೆ. ಅವು ತಾಂತ್ರಿಕರ ಆಹ್ವಾನಕ್ಕೆ ಸಾಮಾನ್ಯವಾಗಿ ಉತ್ತರ ನೀಡುತ್ತವೆ. (ಕಾಳಿ ಅಥವಾ ದುರ್ಗಾ ಇವರನ್ನು ಆಹ್ವಾನಿಸುವ ತಾಂತ್ರಿಕರು ಎಂಬ ಅರ್ಥದಲ್ಲಿ ನಾನು ಹೇಳಿಲ್ಲ, ಅದು ಒಟ್ಟಿನಲ್ಲಿ ಬೇರೆ ವಿಷಯ, ಅವರು ಇಡಿಯಾಗಿ ಭಿನ್ನವಾಗಿರುವ ಲೋಕಕ್ಕೆ ಸೇರಿರುತ್ತಾರೆ.) ಬಹಳಷ್ಟು ಸಲ ಈ ಪ್ರಕೃತಿಯ ಚೇತನ ಸ್ವರೂಪಿಗಳು ಸಹಾಯ ಮಾಡಲು ಬಹಳ ಇಷ್ಟಪಡುತ್ತವೆ– ಏನೇ ಇರಲಿ ಅವು ಅದ್ಭುತ ರೀತಿಯಲ್ಲಿ ನನಗೆ ಉಪಕಾರ ಮಾಡುತ್ತವೆ! ಆದರೆ ಅವು ಸೀಮಿತ ಸತ್ತೆಗಳು, ಅವುಗಳದೇ ವಿಚಾರಗಳಿರುತ್ತವೆ ಹಾಗೂ ನಿಯಮಗಳಿರುತ್ತವೆ, ಅವುಗಳವೇ ಇಚ್ಛೆಗಳಿರುತ್ತವೆ, ಅವುಗಳಿಗೆ ಕೋಪ ಉಂಟಾಗುವಂತೆ ಮಾಡಿದಾಗ ಅವು ಅಸಂತೋಷಕರ ಕಾರ್ಯಗಳನ್ನು ಮಾಡಬಲ್ಲವು. ಆದಾಗ್ಯೂ ಅವು ವಿರೋಧೀ ಸತ್ತೆಗಳಲ್ಲ, ಪ್ರಾಣಿಕ ಸತ್ತೆಗಳಲ್ಲ, ಅವು ಭೌತಿಕ ಪ್ರಕೃತಿಯ ವ್ಯಕ್ತಿರೂಪ ಪಡೆದ, ಸೂಕ್ಷ್ಮಭೌತಿಕದಲ್ಲಿರುವ ಶಕ್ತಿಗಳು.

**ಅನುಯಾಯಿಯೊಂದಿಗೆ ಮಾತುಕತೆ, ಮಾರ್ಚ 11, 1956 – ಶ್ರೀಮಾತೆ**

*

**ಅಗ್ನಿಯ ಚೇತನ**

ಅಗ್ನಿಯೊಡನೆ ಕೂಡ ವಿಷಯ ಅದೇ ಆಗಿದೆ. ನಾನು ಅಗ್ನಿಯ ಚೇತನವನ್ನು

ವಿಶೇಷವಾಗಿ ಜಪಾನಿನಲ್ಲಿ ನೋಡಿದೆ, ಏಕೆಂದರೆ ಆ ದೇಶದಲ್ಲಿ ಅಗ್ನಿ ಒಂದು ಅಸಾಧಾರಣವಾದ ವಿಷಯ. ಅಗ್ನಿ ಉರಿಯತೊಡಗಿದ ಕೂಡಲೆ ಸುಮಾರು ಎಂಬತ್ತು ಮನೆಗಳು ಉರಿಯತೊಡಗುತ್ತವೆ, ಆ ದಿಸೆಯಲ್ಲಿರುವ ಎಲ್ಲ ಭಾಗ ಉರಿಯತೊಡಗುತ್ತದೆ. ಅದು ವಿಲಕ್ಷಣವಾದ ಏನೋ ಒಂದು. ಮನೆಗಳು ಕಟ್ಟಿಗೆಯಿಂದ ಮಾಡಿದವುಗಳಾಗಿರುತ್ತವೆ, ಅವು ಕಡ್ಡಿಪೆಟ್ಟಿಗೆಯ ಹಾಗೆ ಉರಿಯುತ್ತವೆ. ಅಗ್ನಿ ಹೊತ್ತಿಕೊಳ್ಳುವುದನ್ನು ನೀವು ನೋಡುತ್ತೀರಿ ಮತ್ತು ಹಠಾತ್ತನೆ ಪಫ್! ಕಡ್ಡಿಪೆಟ್ಟಿಗೆ ಉರಿಯುವುದನ್ನು ನೀವು ಎಂದಿಗೂ ನೋಡಿರಲಿಕ್ಕಿಲ್ಲ, ಒಂದು ಕ್ಷಣಿಕ ಪ್ರಕಾಶ, ಒಂದು, ಎರಡು– ಹೀಗೆ ಇಪ್ಪತ್ತು ಮನೆಗಳು ನನ್ನ ಕಣ್ಣೆದುರಿಗೆ ಉರಿದು ಬಿದ್ದು ಹೋದವು! ಹಾಗಾಗಿ ಅಲ್ಲಿ ಅಗ್ನಿಯ ಚೇತನ (spirit) ಗಳಿವೆ. ಒಂದು ದಿನ ನಾನು ನನ್ನ ಹಾಸಿಗೆಯ ಮೇಲಿದ್ದೆ, ಏಕಾಗ್ರತೆಯಲ್ಲಿದ್ದುಕೊಂಡು ಜನರತ್ತ ನೋಡುತ್ತಿದ್ದೆ. ಹಠಾತ್ತನೆ ಜ್ವಾಲೆಗಳ ಮೋಡ ಆ ಮನೆಯನ್ನು ಸಮೀಪಿಸುತ್ತಿತ್ತು. ಅದರತ್ತ ನಾನು ನೋಡಿದೆ, ಅದು ಪ್ರಜ್ಞೆಯುಳ್ಳ ಸತ್ತೆಯಾಗಿತ್ತು.

– ಹೆ ಇಲ್ಲಿ ಯಾವುದಕ್ಕಾಗಿ ಇರುವೆ?

– ಆ ಮನೆಯನ್ನು ಸುಟ್ಟು ಹಾಕುವ, ಅಗ್ನಿಯನ್ನು ಹೊತ್ತಿಸುವ ಹಕ್ಕು ನನಗಿದೆ.

– ಅದು ಸಾಧ್ಯವಿರಬಹುದು, ಆದರೆ ಇಲ್ಲಿ ಅಲ್ಲ, ಎಂದು ನಾನು ಅದಕ್ಕೆ ಹೇಳಿದೆ.

ಮತ್ತು ಅದು ವಿರೋಧಿಸದಂತಾಯಿತು
ಯಾರು ಹೆಚ್ಚು ಬಲವಂತರಾಗಿರುತ್ತಾರೆ ಎಂಬ ಪ್ರಶ್ನೆ: ನಾನು ಹೇಳಿದೆ:
"ಇಲ್ಲ ಇಲ್ಲಿ ನೀನು ಸುಟ್ಟು ಹಾಕಲಾರೆ, ಅಷ್ಟೇ."

**CWM, 5/136-37** **– ಶ್ರೀಮಾತೆ**

*

**ಮೃತ್ಯುವಿನ ಚೇತನ**

**ಪ್ರಶ್ನೆ :** *ಮೃತ್ಯುವಿನ ದೇವನೊಬ್ಬನಿದ್ದಾನೆ ಎಂದು ಹೇಳಲಾಗುತ್ತದೆ. ಅದು ಸತ್ಯ–ವಾದದ್ದೆ?*

**ಶ್ರೀಮಾತೆ :** ಹೌದು, ನಾನದನ್ನು ಮೃತ್ಯುವಿನ ಚೇತನ (spirit) ಎಂದು ಕರೆಯು–ತ್ತೇನೆ. ಅದು ನನಗೆ ಸುಪರಿಚಿತವಾಗಿದೆ. ಮತ್ತು ಅದರದು ಅಸಾಧಾರಣ ಸಂಘಟನೆ. ಅದು ಎಷ್ಟರ ಮಟ್ಟಿಗೆ ಸಂಘಟಿತವಾಗಿದೆ ಎಂಬುದು ನಿನಗೆ ತಿಳಿದಿಲ್ಲ.

ಮೃತ್ಯುವಿನ ಚೇತನಗಳು ಅನೇಕವಾಗಿವೆ, ಅವು ನೂರಾರು ಇವೆ ಎಂಬುದು ನನ್ನ ನಂಬಿಕೆ. ಅವುಗಳಲ್ಲಿ ಕನಿಷ್ಟ ಎರಡನ್ನಾದರೂ ನಾನು ಭೇಟಿ ಮಾಡಿದ್ದೇನೆ. ಒಂದನ್ನು ನಾನು ಫ್ರಾನ್ಸ ದೇಶದಲ್ಲಿ, ಇನ್ನೊಂದನ್ನು ಜಪಾನ ದೇಶದಲ್ಲಿ ಭೇಟಿ ಮಾಡಿದೆ ಮತ್ತು ಅವು ಬಹಳ ಭಿನ್ನವಾಗಿದ್ದವು. ಬಹುಶಃ ಮೃತ್ಯುವಿಗೀಡಾಗುವ ವ್ಯಕ್ತಿಯ ಮಾನಸಿಕ ಸಂಸ್ಕಾರ, ವಿದ್ಯಾಭ್ಯಾಸ, ಆ ವ್ಯಕ್ತಿಯಿದ್ದ ದೇಶ, ಅಲ್ಲಿಯ ನಂಬಿಕೆಗಳು ಇವುಗಳಿಗನುಗುಣವಾಗಿ ಅಲ್ಲಿ ಭಿನ್ನ ಚೇತನಗಳಿರಬಹುದೆಂಬ ತೀರ್ಮಾನಕ್ಕೆ ಮನುಷ್ಯ ಬರುತ್ತಾನೆ. ಆದರೆ ಪ್ರಕೃತಿಯ ಎಲ್ಲ ಪ್ರಕಟಣೆಗಳ ಚೇತನಗಳಿವೆ, ಅಗ್ನಿಯ, ಜಲದ, ಮಳೆಯ, ಗಾಳಿಯ ಹಾಗೂ ಮೃತ್ಯುವಿನ ಚೇತನಗಳಿವೆ.

ಮೃತ್ಯುವಿನ ಪ್ರತಿಯೊಂದು ಚೇತನ, ಅದೇನೇ ಆಗಿರಲಿ, ಪ್ರತಿದಿನ ಒಂದು ವಿಶಿಷ್ಟ ಸಂಖ್ಯೆಯಲ್ಲಿ ಮೃತ್ಯು ಉಂಟಾಗುವಂತೆ ಮಾಡುವ ಹಕ್ಕು ಆ ಚೇತನಕ್ಕಿರುತ್ತದೆ. ನಿಜವಾಗಿ ಅದು ವಿಲಕ್ಷಣವಾದ ಸಂಘಟನೆ, ಅದು ಪ್ರಾಣಿಕ ಶಕ್ತಿಗಳು ಹಾಗೂ ಪ್ರಕೃತಿಯ ಶಕ್ತಿಗಳು ಇವುಗಳ ಜತೆಗೂಡುವಿಕೆ, ಉದಾಹರಣೆಗೆ ಮೃತ್ಯುವಿನ ಚೇತನ: "ವ್ಯಕ್ತಿಗಳಿಗೆ ಮೃತ್ಯು ಉಂಟಾಗುವಂತೆ ಮಾಡಬೇಕಾದ ಸಂಖ್ಯೆ ಇದಾಗಿದೆ" ಹಾಗೆ ಮಾಡುವುದರ ಹಕ್ಕು ನನಗಿದೆ ಎಂದು ನಿರ್ಧರಿಸಿದಾಗ, ಆ ಸಂಖ್ಯೆ ನಾಲ್ಕು, ಐದು ಹೀಗೆ ಒಂದು ಸಂಖ್ಯೆಯಾಗಿರುತ್ತದೆ, ಅದು ಆ ದಿನದ ಮೇಲೆ ಅವಲಂಬಿಸಿರುತ್ತದೆ, ಅದು ಕೆಲವು ವಿಶಿಷ್ಟ ಜನರು ಮೃತ್ಯುವಿಗೀಡಾಗ–ಬೇಕೆಂದು ನಿರ್ಧರಿಸಿದಾಗ ನೇರವಾಗಿ ಅವರ ಬಳಿ ನೆಲೆಸುತ್ತದೆ. ಆದರೆ ನೀವು ಪ್ರಜ್ಞಾಪೂರ್ಣರಾಗಿರುವ ಸಂಭವವಿದ್ದಾಗ (ಮೃತ್ಯುವಿಗೀಡಾಗುತ್ತಿರುವ ವ್ಯಕ್ತಿಯಲ್ಲ) ಮೃತ್ಯುವಿನ ಚೇತನ ಆ ವ್ಯಕ್ತಿಯ ಬಳಿ ಸಾಗುತ್ತಿದ್ದುದನ್ನು ನೋಡಿದಾಗ ಹಾಗೂ ಆ ವ್ಯಕ್ತಿ ಮರಣ ಹೊಂದಬಾರದೆಂದು ಬಯಸಿದಾಗ ನಿಮ್ಮಲ್ಲಿ ಒಂದು ವಿಶಿಷ್ಟ ರಹಸ್ಯ ಶಕ್ತಿಯಿದ್ದರೆ ನೀವು "ಇಲ್ಲ, ಆ ವ್ಯಕ್ತಿಯ ಜೀವ ತೆಗೆಯುವುದು ಬೇಡ" ಎಂದು ಹೇಳುವ ಸಾಮರ್ಥ್ಯ ನಿಮ್ಮಲ್ಲಿರುತ್ತದೆ. ಇಂತಹದು ಹಲವಾರು ಸಲ ಸಂಭವಿಸಿದೆ,

ಅದು ಜಪಾನಿನಲ್ಲಿ ಹಾಗೂ ಇಲ್ಲಿ ಆಗಿತ್ತು. ಅದು ಒಂದೇ ಚೇತನವಾಗಿರಲಿಲ್ಲ. ಅದರಿಂದಾಗಿ ಹಲವಾರು ಮೃತ್ಯುವಿನ ಚೇತನಗಳಿರಬೇಕೆಂದು ನಾನು ಹೇಳುವಂ–ತಾಗಿದೆ.

– ಅವನು ಮೃತ್ಯು ಹೊಂದುವುದು ಬೇಡ.
– ಆದರೆ ಒಂದು ಮೃತ್ಯು ಉಂಟಾಗುವಂತೆ ಮಾಡುವ ಹಕ್ಕು ನನಗಿದೆ.
– ಮೃತ್ಯು ಹೊಂದಲು ತಯಾರಾಗಿರುವ ಇನ್ನೊಬ್ಬನನ್ನು ಹುಡುಕು.

"ಈ ಒಬ್ಬನ ಮೃತ್ಯುವಿಗೆ ನೀನು ಕಾರಣನಾಗುವುದು ಬೇಡ" ಎಂದು ಆ ಚೇತನಕ್ಕೆ ಹೇಳಬಲ್ಲಿರಿ ಮತ್ತು ಅದನ್ನು ಕಳಿಸಿಕೊಟ್ಟುಬಿಡುವ ಸಾಮರ್ಥ್ಯ ನಿಮ್ಮಲ್ಲಿರುತ್ತದೆ ಮತ್ತು ಆ ಚೇತನ ಏನನ್ನೂ ಮಾಡಲಾರದು, ಕೇವಲ ಹೊರಟು ಹೋಗಬೇಕಾಗುವುದು, ಆದರೆ ಅದು ಬಿಟ್ಟುಕೊಡುವುದಿಲ್ಲ, ಬೇರೆ ಮತ್ತೆಲ್ಲಿಯೋ ಹೊರಟು ಹೋಗುತ್ತದೆ. ಅಲ್ಲಿ ಮತ್ತೊಂದು ಮೃತ್ಯು ಇರುತ್ತದೆ.

**CWM, 5/135-36** **– ಶ್ರೀಮಾತೆ**

*

**ಪ್ರಶ್ನೆ :** *ನಾವು ಮೃತ್ಯುವನ್ನು ದೇವನೆಂದು ಏಕೆ ಕರೆಯುತ್ತೇವೆ. ಮಿಥ್ಯೆಯ ಪ್ರಭುವಿರುವ ಹಾಗೆ ಅವನೂ ಕೂಡ ಅಸುರನಲ್ಲವೆ ?*

**ಶ್ರೀಮಾತೆ :** ಮನುಷ್ಯನ ಪ್ರಜ್ಞೆಯಲ್ಲಿ ಅವನು ದೇವನಾದ ಮತ್ತು ಆ ಕಾರಣದಿಂದಾಗಿ ಅವನನ್ನು ಪರಿವರ್ತಿಸುವುದು ಅಷ್ಟೊಂದು ಕಠಿಣವಾಗಿರುತ್ತದೆ.

**CWM, 15/123** **– ಶ್ರೀಮಾತೆ**

*

**ಸರ್ಪಗಳ ರಾಜ**

ಎಲ್ಲ ಪಶು ಜೀವಿಗಳಲ್ಲಿ ಸರ್ಪ, ಸಂಮೋಹನ (hypnotic) ಇಲ್ಲವೆ ಕಾಂತೀಯ ಸಾಮರ್ಥ್ಯಕ್ಕೆ ಬಹಳ ಸಂವೇದನಾಶೀಲವಾಗಿರುತ್ತದೆ ಎಂದು ಮನುಷ್ಯ ಹೇಳಬಲ್ಲ. ನಿಮ್ಮಲ್ಲಿ ಕಾಂತೀಯ ವಸ್ತುವಿದ್ದರೆ (ಕಾಂತೀಯ ಸಾಮರ್ಥ್ಯ ಬಹಳ

ಭೌತಿಕ ಪ್ರಾಣಿಕದಿಂದ ಬರುತ್ತದೆ) ನೀವು ಸುಲಭವಾಗಿ ಹಾವುಗಳ ಮೇಲೆ ಪ್ರಭುತ್ವ ಪಡೆಯಬಹುದು. ತ್ಲೆಮ್ಸೆನ್ (Tlemcen) ದಲ್ಲಿ ನಾಗರಹಾವೊಂದನ್ನು ಸಂಧಿಸಿ–ದಾಗ ಅದರಿಂದ ನಾನು ಸುರಕ್ಷಿತವಾಗಿ ಹೊರಗೆ ಬಂದದ್ದು ಆ ರೀತಿಯದಾಗಿತ್ತು. ಆ ಕತೆ ನಿಮಗೆ ತಿಳಿದಿದೆಯೆ? ಈ ಸಾಮರ್ಥ್ಯ ಕುರಿತು ಥಿಯೋನ್ ನನಗೆ ಹೇಳಿದ್ದ ಮತ್ತು ಅದು ನನ್ನಲ್ಲಿದ್ದ ಬಗ್ಗೆ ನನಗೆ ಅರಿವಿತ್ತು. ಹಾಗಾಗಿ ನಾಗರಹಾವನ್ನು ವಿಧೇಯವಾಗಿರುವಂತೆ ಮಾಡಲು ಶಕ್ತಳಾದೆ, ಅದು ನಾನಿದ್ದಲ್ಲಿಂದ ದೂರ ಹೊರಟು ಹೋಯಿತು. ನಂತರ (ನಾನು ಈ ಕತೆಯನ್ನೂ ಹೇಳಿದ್ದೇನೆ) ನನ್ನನ್ನು ಸರ್ಪಗಳ ರಾಜ ಭೇಟಿ ಮಾಡಿದ. – ರಾಜನೆಂದರೆ ಆ ಜೀವಜಾತಿಯ ಆತ್ಮ. ಅವನು ತ್ಲೆಮ್ಸೆನ್ ನಲ್ಲಿ ಇನ್ನೊಂದು ಘಟನೆಯಾದ ನಂತರ ಬಂದಿದ್ದ, ಆಗ ನಾನು ದೊಡ್ಡ ರಸ್ಸೆಟ್ ಅಂಗೋರಾ ಬೆಕ್ಕೊಂದು ವಿಷ ಸರ್ಪದ [(casp) ಆಫ್ರಿಕಾ ಹಾಗೂ ಅರೇಬಿಯ ದೇಶಗಳಲ್ಲಿ ಕಂಡುಬರುವಂತಹದು] ಹಿಡಿತದಿಂದ ಪಾರಾಗುವಂತೆ ಮಾಡಿದೆ. (ಕ್ಲಿಯೋಪಾತ್ರಾಳ ಹತ್ತಿರವಿದ್ದ ವಿಷಸರ್ಪದಂತಹವು ಅಲ್ಲಿವೆ.) ಈ ಎರಡು ಘಟನೆಗಳ ನಂತರ ಸರ್ಪಗಳ ರಾಜನನ್ನು ಒಂದು ರಾತ್ರಿ ಭೇಟಿ ಮಾಡಿದೆ. ಅವನು ತಲೆಯ ಮೇಲೆ ಸಾಂಕೇತಿಕ ಮಹಾವೈಭವದ ಕಿರೀಟವನ್ನು ಧರಿಸಿದ್ದ, ಏನೇ ಇರಲಿ, ಅವನು ಆ ಜೀವಜಾತಿಯ ಆತ್ಮವಾಗಿದ್ದ. ಅವನು ತೋರಿಕೆಯಲ್ಲಿ ನಾಗರ ಹಾವಿನಂತಿದ್ದ, ಅದ್ಭುತನಾಗಿದ್ದ! ಭೀಕರ ಪ್ರಾಣಿ ಮತ್ತು ಅದ್ಭುತವಾದದ್ದು! ನನ್ನೊಡನೆ ಒಪ್ಪಂದ ಮಾಡಿಕೊಳ್ಳಲು ಬಂದಿರುವೆನೆಂದು ಹೇಳಿದ. ನಾನು ಅವನ ಜೀವಜಾತಿಯ ಮೇಲೆ ನನ್ನ ಪ್ರಭಾವವನ್ನು ಉಪಯೋಗಿಸಿ ತೋರಿಸಿಕೊಟ್ಟಿದ್ದೆ. ಹಾಗಾಗಿ ನನ್ನೊಡನೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಲು ಅವನು ಬಯಸಿದ್ದ: "ಸರಿ ನೀನು ಪ್ರಸ್ತಾಪಿಸುವುದು ಏನು?" ಎಂದು ನಾನು ಹೇಳಿದೆ. "ಹಾವುಗಳು ನಿನಗೆ ಹಾನಿಯನ್ನುಂಟು ಮಾಡುವುದಿಲ್ಲ, ಆದರೆ ಅವು ನಿನಗೆ ವಿಧೇಯವಾಗಿರುತ್ತವೆ. ಆದರೆ ನೀನು ನನಗೆ ಪ್ರತಿಯಾಗಿ ನನಗೆ ಒಂದು ವಚನ ನೀಡಬೇಕು: ನೀನು ಹಾವುಗಳಲ್ಲಿ ಒಂದನ್ನೂ ಕೊಲ್ಲಬಾರದು." ನಾನು ಅದನ್ನು ಕುರಿತು ಯೋಚಿಸಿದೆ ಮತ್ತು "ಇಲ್ಲ, ಈ ವಚನ ನಾನು ನೀಡಲಾರೆ, ಏಕೆಂದರೆ ನಿಮ್ಮಲ್ಲಿಯ ಒಂದು ನನ್ನ ಮೇಲೆ ಅವಲಂಬಿಸಿದವರ ಮೇಲೆ ಆಕ್ರಮಣ ಮಾಡಿದರೆ, ನಿನ್ನೊಡನೆ ಮಾಡಿಕೊಂಡ ಒಪ್ಪಂದ ಅವನನ್ನು ರಕ್ಷಿಸುವುದರಿಂದ ನನ್ನನ್ನು ತಡೆಯಲಾರದು. ನನ್ನಲ್ಲಿ ಕೆಟ್ಟ ಭಾವನೆಗಳಿಲ್ಲ ಮತ್ತು ಕೊಂದು ಹಾಕುವ

ಉದ್ದೇಶವಿಲ್ಲ.– ಕೊಂದು ಹಾಕುವುದು ನನ್ನ ಕಾರ್ಯಕ್ರಮವಲ್ಲ. ಆದರೆ ಆ ವಚನಕ್ಕೆ ಬದ್ಧನಾಗಲಾರೆ, ಏಕೆಂದರೆ ಅದು ನಿರ್ಧಾರ ಕೈಕೊಳ್ಳುವ ನನ್ನ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವುದು. ಅವನು ಉತ್ತರ ನೀಡದೆ ಹೊರಟು ಹೋದ, ಹಾಗಾಗಿ ಅದು ಮೊದಲಿದ್ದ ಹಾಗೆಯೇ ಇದೆ.

**ಅನುಯಾಯಿಯೊಂದಿಗೆ ಮಾತುಕತೆ, ಫೆ. 4, 1981 – ಶ್ರೀಮಾತೆ**

*

**ಶ್ರೀಮಾತೆ ಹಾಗೂ ಬೆಕ್ಕುಗಳ ಜಗತ್ತು**

ಒಮ್ಮೆ ನನ್ನ ಬಳಿ ಬಂದು ಬೆಕ್ಕಿತ್ತು, ಅದರ ಪ್ರಜ್ಞೆ ಚಿಕ್ಕ ಮಗುವಿನದಾಗಿತ್ತು. ಯಾರೋ ಒಬ್ಬರು ಅದಕ್ಕೆ ವಿಷಪ್ರಾಶನ ಮಾಡಿಸಿದ್ದರು, ಅದು ವಿಷಪ್ರಾಶನ ಮಾಡಿ ನನ್ನ ಬಳಿ ತಿರುಗಿ ಬಂದಿತ್ತು. ಬೆಕ್ಕುಗಳಿಗೆ ವಿಷಪ್ರಾಶನ ಮಾಡಿಸುವ ಎಲ್ಲ ಜನರಿಗೂ ಶಾಪ ನೀಡಿದೆ. ಅದು ಗಂಭೀರವಾದ ವಿಷಯ.

ಆದರೆ ಒಂದು ಮಾರ್ಗವಿದೆ. . . .

ನಾನು ಬೆಕ್ಕುಗಳ ರಾಜನೊಂದಿಗೆ ಒಡಂಬಡಿಕೆ ಮಾಡಿಕೊಂಡೆ– ಅದು ಬಹಳ ಹಿಂದೆ ನಡೆದ ವಿಷಯ. ಅದು ಅಸಾಧಾರಣವಾದದ್ದು (ಅದು ತ್ಲೆಮ್ಸೆನ್‌ನಲ್ಲಿ ನಡೆಯಿತು, ಅದು ಇಡಿಯಾಗಿ ರಹಸ್ಯ ಸ್ತರದ ಮೇಲಿತ್ತು.), ಅಸಾಧಾರಣವಾದದ್ದು. ಕೆಲವೊಂದು ಕಾರಣಗಳಿಗಾಗಿ ಬೆಕ್ಕುಗಳ ರಾಜ ಮೂರು ಜೀವಿಗಳ ಮೇಲೆ ಸಾಮರ್ಥ್ಯ ನೀಡಿದ– ಮತ್ತು ಅದು ಸತ್ಯವಾದದ್ದು. ಕೇವಲ ನಾನು ಅದನ್ನು (ಪ್ರಯೋಗಿಸಿ) ನೋಡಬೇಕಾಗಿದೆ.

ಬೆಕ್ಕುಗಳು ಪ್ರಾಣಿಕಶಕ್ತಿಗಳು, ಪ್ರಾಣಿಕ ಶಕ್ತಿಗಳ ಅವತಾರಗಳು, ಬೆಕ್ಕುಗಳ ರಾಜ– ಎಂದರೆ ಆ ಜೀವಜಾತಿಯ ಆತ್ಮ– ಪ್ರಾಣಿಕ ಜಗತ್ತಿನ ಸತ್ತೆಯಾಗಿದೆ.

**ಅನುಯಾಯಿಯೊಂದಿಗೆ ಮಾತುಕತೆ, ಎಪ್ರಿಲ್ 12, 1956 – ಶ್ರೀಮಾತೆ**

*



**ಪ್ರಶ್ನೆ :** *ಮಧುರ ಮಾತೆಯವರೆ, ಇಲ್ಲಿ ನೀವು ಪರಮೋಚ್ಚ ಮಾತೆ ವಿಶ್ವದ ಸೃಷ್ಟಿಕರ್ತೆ ಎಂದು ಹೇಳಿದ್ದೀರಿ. ಆದರೆ ಭಾರತದಲ್ಲಿ, ಸಾಮಾನ್ಯವಾಗಿ, ಬ್ರಹ್ಮ ಸೃಷ್ಟಿಕರ್ತ ಎಂದು ಹೇಳಲಾಗಿದೆ.*

**ಶ್ರೀಮಾತೆ :** ಪರಮೋಚ್ಚ ಮಾತೆ ಬ್ರಹ್ಮನ್ ಮಾತೆಯೆಂದು ಶ್ರೀ ಅರವಿಂದರು ಹೇಳಿದ್ದಾರೆ. ಅವಳು ಎಲ್ಲ ದೇವರುಗಳ ಮಾತೆಯಾಗಿದ್ದಾಳೆ.

**CWM, 7/156** **– ಶ್ರೀಮಾತೆ**

*

## ದೇವರುಗಳು ಹಾಗೂ ಮನುಕುಲ

### ನಾನಾ ಬಗೆಯ ಧರ್ಮಗಳ ಪ್ರಾರ್ಥನೆಗಳು

ಅಧಿಮಾನಸ ದೇವರುಗಳ ಪ್ರಾಂತವಾಗಿದೆ, ಅವರು ದೈವೀ ಮೂಲದ ಸತ್ತೆಗಳಾಗಿರುತ್ತಾರೆ. ವಿಶ್ವದ ಉತ್ಕ್ರಾಂತಿ ಕುರಿತು ಅವರಿಗೆ ಮೇಲ್ವಿಚಾರಣೆ ಮಾಡುವ, ನಿರ್ದೇಶನ ಮಾಡುವ, ಸಂಘಟನೆ ಮಾಡುವ ಕಾರ್ಯಗಳನ್ನು ವಿಧಿಸಲಾಗಿರುತ್ತದೆ ಮತ್ತು ಹೆಚ್ಚು ನಿರ್ದಿಷ್ಟ ರೀತಿಯಲ್ಲಿ, ಪೃಥ್ವಿ ರೂಪಗೊಂಡಂದಿನಿಂದ ಅದಕ್ಕೆ ಉಚ್ಚ ಪ್ರಾಂತಗಳ ಸಹಾಯ ತರಲು ಮತ್ತು ಮನಸ್ಸು ರೂಪುಗೊಳ್ಳುವುದರ ಮೇಲೆ ಅಧ್ಯಕ್ಷತೆ ವಹಿಸಲು ಅವರು ಸಂದೇಶ ವಾಹಕರೆಂದು, ಮಧ್ಯವರ್ತಿಗಳೆಂದು ಹಾಗೂ ಅದರ ಪ್ರಗತಿಪರ ಆರೋಹಣಕ್ಕಾಗಿ ಎಂದು ಸೇವೆ ಸಲ್ಲಿಸಿದ್ದಾರೆ. ಬೇರೆ

ಬೇರೆ ಧರ್ಮಗಳು ಸಲ್ಲಿಸುವ ಪ್ರಾರ್ಥನೆ, ಸಾಮಾನ್ಯವಾಗಿ, ಅಧಿಮಾನಸ ದೇವರುಗಳನ್ನು ಕುರಿತಾಗಿರುತ್ತದೆ. ಈ ಧರ್ಮಗಳು ಬಹಳಷ್ಟು ಸಲ ನಾನಾ ಕಾರಣಗಳಿಂದಾಗಿ ಈ ದೇವರುಗಳಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಮತ್ತು ಅವನನ್ನು ವೈಯಕ್ತಿಕ ಉಪಯೋಗಕ್ಕಾಗಿ ಪರಮೋಚ್ಚ ದೇವನೆಂದು ಪರಿವರ್ತನೆಗೆ ಒಳಪಡಿಸುತ್ತಾರೆ. ವ್ಯಕ್ತಿಗತ ಉತ್ಕ್ರಾಂತಿಯಲ್ಲಿ ಮನುಷ್ಯ ಅಧಿಮಾನಸಕ್ಕೆ ಹಾಗೂ ಅಧಿಮಾನಸ ಪ್ರಜ್ಞೆಗೆ ಅನುಗುಣವಾದ ಒಂದು ವಲಯವನ್ನು ತನ್ನಲ್ಲಿ ಅಭಿವೃದ್ಧಿಪಡಿಸಬೇಕು, ಅದಕ್ಕಿಂತ ಮೊದಲು ಅತಿಮಾನಸದತ್ತ ಮೇಲಕ್ಕೇರಿ ಹೋಗಲಾಗುವುದಿಲ್ಲ, ಅದಕ್ಕೆ ತೆರೆದು–ಕೊಳ್ಳಲಾಗುವುದಿಲ್ಲ.

ಬಹುಮಟ್ಟಿಗೆ ಎಲ್ಲ ರಹಸ್ಯ ಪದ್ಧತಿಗಳು ಹಾಗೂ ಶಿಸ್ತು–ಪಾಲನೆಗಳು ಅಧಿಮಾನಸದ ಅಭಿವೃದ್ಧಿ ಹಾಗೂ ಅದರ ಮೇಲಿನ ಪ್ರಭುತ್ವ ಇವುಗಳನ್ನು ಗುರಿಯಾಗಿರಿಸಿಕೊಂಡಿದ್ದವು.

**CWM, 16/233-34** **– ಶ್ರೀಮಾತೆ**

*

**ಅಧಿಮಾನಸ ದೇವರುಗಳೊಡನೆ ಮನುಷ್ಯನ ಸಂಬಂಧ**

"ಮನುಷ್ಯರು ದೇವತೆಗಳಿಗೆ ದನಕರುಗಳಾಗಿರುತ್ತಾರೆ" ಎಂದು ಹೇಳಲಾಗಿದೆ, ಆದರೆ ಅದು ಹಾಗಿರುವುದು ಮನುಷ್ಯ ಒಪ್ಪಿಕೊಂಡರೆ ಮಾತ್ರ. ಮಾನವ ಸ್ವಭಾವದ ಸಾರದಲ್ಲಿ ಎಲ್ಲ ವಸ್ತು–ವಿಷಯಗಳ ಮೇಲೆ ಒಂದು ಬಗೆಯ ಸಾರ್ವಭೌಮತ್ವವಿದೆ, ಅದು ಸ್ವಯಂಪ್ರೇರಿತವಾದದ್ದು ಹಾಗೂ ಸ್ವಾಭಾವಿಕವಾದದ್ದು, ಆದರೆ ಅದನ್ನು ಕೆಲ ವಿಶಿಷ್ಟ ಸಂಖ್ಯೆಯಲ್ಲಿರುವ ವಿಚಾರಗಳಿಂದ ಹಾಗೂ ಜ್ಞಾನ ಎಂದು ಕರೆಯಲಾದು–ದರಿಂದ ಮಿಥ್ಯೆಗೊಳಪಡಿಸಬಾರದು.

ಮನುಷ್ಯ ತನ್ನ ಸ್ವಭಾವದಲ್ಲಿ ಸತ್ತೆಯ ಎಲ್ಲ ಸ್ಥಿತಿಗಳ ಮೇಲೆ ಸಾಮರ್ಥ್ಯ–ಪೂರ್ಣ ಪ್ರಭುವಾಗಿರುತ್ತಾನೆ, ಆದರೆ ಅದಾಗಲು ಅವನು ಮರೆತಿರುತ್ತಾನೆ.

ಅವನ ಸ್ವಾಭಾವಿಕ ಸ್ಥಿತಿ ಸರ್ವಸಾಮರ್ಥ್ಯವುಳ್ಳದ್ದಾಗುವುದಾಗಿದೆ– ಇದಾಗು–ವುದನ್ನು ಅವನು ಮರೆತಿದ್ದಾನೆ.

ಸ್ವಾಭಾವಿಕವಾಗಿ ಉತ್ಕ್ರಾಂತಿಪರ ವಕ್ರರೇಖೆಯಲ್ಲಿ ಮನುಷ್ಯ ತನ್ನ ಸರ್ವಸಾಮರ್ಥ್ಯವನ್ನು ಮರೆಯುವುದು ಅವಶ್ಯವಾಗಿತ್ತು, ಏಕೆಂದರೆ ಅದು ಅವನನ್ನು ಗರ್ವದಿಂದ ಹಾಗೂ ಜಂಬದಿಂದ ಉಬ್ಬಿಕೊಳ್ಳುವಂತೆ ಮಾಡುತ್ತಿತ್ತು ಮತ್ತು ಹಾಗಾಗಿ ಪೂರ್ತಿಯಾಗಿ ವಿರೂಪಗೊಳ್ಳುವಂತಾಗುತ್ತಿತ್ತು ಮತ್ತು ಅವನಿಗೆ ಹಲವಾರು ವಿಷಯಗಳು ಅವನಿಗಿಂತ ಹೆಚ್ಚು ಬಲವುಳ್ಳವಾಗಿವೆ ಹಾಗೂ ಸಾಮರ್ಥ್ಯಪೂರ್ಣವಾಗಿವೆ ಎಂಬ ಭಾವನೆಯನ್ನು ತಂದುಕೊಡಬೇಕಾಗಿತ್ತು, ಆದರೆ ಸಾರಭೂತವಾಗಿ ಇದು ಸತ್ಯವಲ್ಲ, ಆ ವಕ್ರರೇಖೆ ಪ್ರಗತಿಪರವಾಗ–ಬೇಕಾದುದರ ಆವಶ್ಯಕತೆ ಇದೆ.

ಮನುಷ್ಯ ಕಾರ್ಯರೂಪದಲ್ಲಿ ಬರುವ ಸಾಧ್ಯತೆ ಹೊಂದಿದ ದೇವನಾಗಿದ್ದಾನೆ. ಅವನು ವಾಸ್ತವದಲ್ಲಿ ತಾನು ದೇವನೆಂದೇ ನಂಬಿದ, ಅವನು ಪೃಥ್ವಿಯ ಮೇಲೆ ಬಡ, ಚಿಕ್ಕ ಕಾಲೆಳೆದುಕೊಂಡು ಹೋಗುವ ಹುಳಕ್ಕಿಂತ ಶ್ರೇಷ್ಠನಲ್ಲ ಎಂಬುದನ್ನು ಕಲಿತುಕೊಳ್ಳುವ ಆವಶ್ಯಕತೆ ಇತ್ತು, ಹಾಗಾಗಿ ಜೀವನ ಪ್ರತಿಯೊಂದು ರೀತಿಯಲ್ಲಿ ನಿರುಪಯುಕ್ತವೆಂದು ತಿರಸ್ಕಾರಕ್ಕೆ ಒಳಗಾಗಿತ್ತು, ಅದು ಅವನು ಅರ್ಥ–ಮಾಡಿಕೊಳ್ಳಲು ಆಗದವರೆಗೆ ಹಾಗಿತ್ತು, ಆದರೆ ಸ್ವಲ್ಪ ಮಾತ್ರಕ್ಕಾದರೂ ಅವನ ಭಾವನೆಗೆ ಬಂದಿತು. ಆದರೆ ಅವನು ಸರಿಯಾದ ನಿಲುವು ತೆಗೆದುಕೊಂಡ ಕೂಡಲೆ ತಾನು ಕಾರ್ಯರೂಪದಲ್ಲಿ ಬರುವ ಸಾಧ್ಯತೆ ಹೊಂದಿದ (potentially) ದೇವನೆಂದು ತಿಳಿದುಕೊಳ್ಳುತ್ತಾನೆ. ಕೇವಲ ಅವನು ಇದಾಗಬೇಕಾಗಿದೆ, ಎಂದರೆ ಇದಲ್ಲದರ ಮೇಲೆ ಜಯ ಸಾಧಿಸಬೇಕಾಗಿದೆ.

ದೇವರುಗಳೊಡನಿರುವ (ಮನುಷ್ಯನ) ಈ ಸಂಬಂಧ ಬಹಳ ಸ್ವಾರಸ್ಯಕರ–ವಾಗಿರುತ್ತದೆ. ಎಲ್ಲಿಯವರೆಗೆ ಮನುಷ್ಯ ಈ ದೈವೀ ಸತ್ತೆಗಳನ್ನು ಕುರಿತು ಅವರ ಸಾಮರ್ಥ್ಯದ ಮೆಚ್ಚುಗೆಯಲ್ಲಿ ತನ್ನನ್ನು ಕಳೆದುಕೊಂಡಿರುತ್ತಾನೋ, ಅವರ ಸೌಂದರ್ಯ, ಸಿದ್ಧಿಗಳು ಇವೆಲ್ಲವುಗಳಿಂದ ದಿಗ್ಭ್ರಮೆಗೊಳಗಾಗಿರುತ್ತಾನೋ ಅಲ್ಲಿಯವರೆಗೆ ಅವರ ಗುಲಾಮನಾಗಿರುತ್ತಾನೆ. ಪರಮೋಚ್ಚ ಭಿನ್ನ ರೀತಿಯಲ್ಲಿ ತನ್ನನ್ನು ತೋರಿಸಿಕೊಡುವುದೇ ಈ ದೇವರುಗಳೆಂದು ತಿಳಿದುಕೊಂಡಾಗ, ತಾನೂ ಕೂಡ ಪರಮೋಚ್ಚ ಇನ್ನೊಂದು ಬಗೆಯಲ್ಲಿ ತನ್ನನ್ನು ತೋರಿಸಿಕೊಡುವು–ದಾಗಿರುತ್ತದೆ ಎಂದೂ ತಿಳಿದುಕೊಂಡಾಗ ಆ ಸಂಬಂಧ ಬದಲಾಗುತ್ತದೆ. ಇನ್ನು

ಮುಂದೆ ಅವನು ಅವರ ಗುಲಾಮನಾಗಿರುವುದಿಲ್ಲ– ಅವನು ಅವರ ಗುಲಾಮನಲ್ಲ.

**CWM, 11/37-39** **– ಶ್ರೀಮಾತೆ**

*

**ದೇವರುಗಳಿಗೆ ಅರ್ಪಿಸಿದ ಪೂಜೆಯ ಮೌಲ್ಯ**

**ಪ್ರಶ್ನೆ :** *ಮಧುರ ಮಾತೆಯವರೆ, ದುರ್ಗಾ ಹಾಗೂ ಕಾಳೀ ದೇವಿಯರಿಗೆ ಅರ್ಪಿಸಿದ ಪೂಜೆಗೆ ಆಧ್ಯಾತ್ಮಿಕ ಮೌಲ್ಯವೇನಾದರೂ ಇದೆಯೆ?*

**ಶ್ರೀಮಾತೆ :** ಯಾರು ಆ ಪೂಜೆಯನ್ನು ಅರ್ಪಿಸುತ್ತಾರೆ ಎಂಬುದರ ಮೇಲೆ ಅದು ಅವಲಂಬಿಸಿದೆ.

ಆಧ್ಯಾತ್ಮಿಕ ಮೌಲ್ಯಕ್ಕೆ ಮಹತ್ವದ್ದಾದ ವಿಷಯ ಅದಲ್ಲ. ಯೋಗದ ಸಮಗ್ರತೆಗೆ ಹಾಗೂ ಸಂಪೂರ್ಣ ಸತ್ಯಕ್ಕೆ ಒಂದು ಅಥವಾ ಇನ್ನೊಂದು ರೂಪಕ್ಕೆ ಸೀಮಿತ–ಗೊಳ್ಳದೆ ಇರುವುದು ಮಹತ್ವದ್ದಾಗಿರುತ್ತದೆ. ಆದರೆ ಆಧ್ಯಾತ್ಮಿಕ ದೃಷ್ಟಿಕೋನದಿಂದ ಪೂಜೆಗೊಳಗಾಗುವವರು ಯಾರೇ ಆಗಿರಲಿ ಆ ಚಲನೆ ಪರಿಪೂರ್ಣವಾಗಿ ನಿಷ್ಕಾಪಟ್ಯದ್ದಾಗಿದ್ದರೆ, ಸ್ವ–ಅರ್ಪಣೆ ಸಮಗ್ರ ಹಾಗೂ ಪರಿಪೂರ್ಣವಾಗಿದ್ದರೆ ಆಧ್ಯಾತ್ಮಿಕ ಪರಿಣಾಮ ಒಂದೇ ಆಗಬಲ್ಲದು. ನೀವು ಯಾರನ್ನೇ ಕೈಗೆತ್ತಿ–ಕೊಂಡಿದ್ದರೂ ಅದರ ಮೂಲಕ ಕೆಲವೊಮ್ಮೆ ಇಷ್ಟವಿಲ್ಲದಿದ್ದಾಗ್ಯೂ, ಇಷ್ಟವಿದ್ದಾಗ್ಯೂ ನೀವು ಅದೇ ದೈವೀ ನೈಜತೆಯನ್ನು ತಲುಪುತ್ತೀರಿ, ಅದು ನಿಮ್ಮ ಮುಡಿಪಾಗಿರಿಸುವಿಕೆಯಲ್ಲಿಯ ನಿಷ್ಕಾಪಟ್ಯದ ಪರಿಣಾಮ ಹಾಗೂ ಪ್ರಮಾಣಕ್ಕನು–ಸಾರವಾಗಿ ಇರುತ್ತದೆ. ಆ ಕಾರಣದಿಂದಾಗಿಯೆ ಭಗವಂತನ ಯಾವ ಮುಖವನ್ನು ಆರಾಧಿಸುತ್ತೀರಿ, ಯಾವ ಗುರುವನ್ನು ಆಯ್ದುಕೊಳ್ಳುತ್ತೀರಿ ಎಂಬುದು ಮಹತ್ವದ್ದಲ್ಲ, ನಿಮ್ಮ ಸ್ವ–ಅರ್ಪಣೆಯಲ್ಲಿ ಪರಿಪೂರ್ಣವಾಗಿದ್ದಾಗ, ಪರಿಪೂರ್ಣವಾಗಿ ನಿಷ್ಕಪಟ–ರಾಗಿದ್ದಾಗ ಆಧ್ಯಾತ್ಮಿಕ ಗುರಿಯನ್ನು ಸಿದ್ಧಿಸಿಕೊಳ್ಳುವುದು ನಿಶ್ಚಿತ.

ನೀವು ಸಮಗ್ರ ಯೋಗವನ್ನು ಸಿದ್ಧಿಸಿಕೊಳ್ಳಬೇಕಾದರೆ ಇನ್ನು ಮುಂದೆ ಪರಿಣಾಮ ಅದೇ ಆಗಿರುವುದಿಲ್ಲ, ಆಗ ನೀವು ನಿಮ್ಮನ್ನು ಯಾವುದೇ ರೀತಿಯಲ್ಲಿ,

ಮುಡಿಪಾಗಿರಿಸಿಕೊಳ್ಳುವಿಕೆಯಲ್ಲಿಯೂ ಕೂಡ ಸೀಮಿತತೆಗೆ ಒಳಪಡಿಸಿಕೊಳ್ಳ–ಬಾರದು, ಕೇವಲ ಇವೆರಡು ಭಿನ್ನ ಸಂಗತಿಗಳು.

**CWM, 8/243-45** **– ಶ್ರೀಮಾತೆ**

*

**ದೈವೀ ಸತ್ತೆಗಳು ಪೂಜೆಗೊಳ್ಳುವುದನ್ನು ಇಷ್ಟಪಡುವುದಿಲ್ಲ**

ನಿಜವಾದ ದೈವೀಸತ್ತೆಗಳನ್ನು ಕುರಿತು ಹೇಳುವುದಾದರೆ ಇದು ಅವರು ಮೌಲ್ಯ ನೀಡುವ ಯಾವುದೋ ವಿಷಯವಾಗಿರುವುದಿಲ್ಲ. ಅವರು ಪೂಜೆಗೊಳ್ಳುವುದನ್ನು ಇಷ್ಟಪಡುವುದಿಲ್ಲ. ಇಲ್ಲ, ಅದು ಅವರಿಗೆ ವಿಶಿಷ್ಟವಾದ ಸಂತೋಷವನ್ನು ಕೊಡುವುದಿಲ್ಲ! ಅವರು ಸಂತುಷ್ಟರಾಗುತ್ತಾರೆಂದು ಯೋಚಿಸುವುದು ಬೇಡ, ಏಕೆಂದರೆ ಅವರಲ್ಲಿ ಗರ್ವವಿರುವುದಿಲ್ಲ. ಗರ್ವ ಹೊಂದಿರುವ ಕಾರಣದಿಂದಾಗಿ ಮನುಷ್ಯ ಪೂಜೆಗೊಳ್ಳುವುದನ್ನು ಇಷ್ಟಪಡುತ್ತಾನೆ. ಮನುಷ್ಯನೊಬ್ಬನಲ್ಲಿ ಗರ್ವ–ವಿರದಿದ್ದರೆ ಅವನು ಪೂಜೆಗೊಳ್ಳುವುದನ್ನು ಇಷ್ಟಪಡುವುದಿಲ್ಲ. ಉದಾಹರಣೆಗೆ ಅವರು ಮನುಷ್ಯನಲ್ಲಿ ಒಳ್ಳೆಯ ಉದ್ದೇಶ ಇಲ್ಲವೆ ಅಂದವಾದ ಭಾವನೆ, ಇಲ್ಲವೆ ಸ್ವಾರ್ಥರಹಿತ ಚಲನೆ, ಹುರುಪಿನಿಂದಿರುವುದು, ಆಧ್ಯಾತ್ಮಿಕ ಸಂತೋಷದಿಂದಿ–ರುವುದು ಇಂತಹ ವಿಷಯಗಳಿರುವುದು ಅವರಿಗೆ ಅನಂತಪಟ್ಟು ಮೌಲ್ಯವಿರು–ವಂತಾಗುತ್ತದೆ, ಪ್ರಾರ್ಥನೆಗಳು, ಪೂಜಾವಿಧಿಗಳಿಗೆ ಈ ಮೌಲ್ಯವಿರುವುದಿಲ್ಲ. . . .

ನಾನು ನಿಮಗೆ ಹೇಳುತ್ತಿರುವುದು ಬಹಳ ಗಂಭೀರ ವಿಷಯ. ನೀವು ಒಬ್ಬ ನಿಜವಾದ ದೇವನನ್ನು ಕುರ್ಚಿಯಲ್ಲಿ ಕುಳ್ಳಿರಿಸಿ, ನೀವು ಪೂಜೆ ಕೈಕೊಂಡು ಮುಗಿಸುವವರೆಗೆ ಅವನು ಅಲ್ಲಿ ಕುಳಿತಿರಲೆಂಬ ನಿರ್ಬಂಧಕ್ಕೊಳಪಡಿಸಿದರೆ, ಅವನಿಗೆ ನೀವು ಮಾಡುತ್ತಿರುವುದನ್ನು ನೋಡಿ ಸ್ವಲ್ಪ ಮೋಜೆನಿಸಬಹುದು, ಆದರೆ ನಿಶ್ಚಿತವಾಗಿ ಅವನಿಗೆ ಯಾವುದೇ ಬಗೆಯ ತೃಪ್ತಿಯನ್ನು ಕೊಡುವುದಿಲ್ಲ. ಎಳ್ಳಷ್ಟೂ ಇಲ್ಲ. ನಿಮ್ಮ ಪೂಜಾವಿಧಾನದಿಂದ ಅವನು ಹೊಗಳಿಸಿಕೊಂಡ ಭಾವನೆ ತಂದುಕೊಳ್ಳುವುದಿಲ್ಲ, ಸಂತೋಷಪಡುವುದಿಲ್ಲ, ದಿವ್ಯತೆ ಪಡೆದವನಾಗುವುದಿಲ್ಲ. ಆ ವಿಚಾರವನ್ನು ನೀವು ತೊಡೆದು ಹಾಕಬೇಕು. ಆಧ್ಯಾತ್ಮಿಕ ಜಗತ್ತು ಹಾಗೂ ಭೌತಿಕ ಜಗತ್ತು ಇವುಗಳ ನಡುವೆ ಒಂದು ಇಡಿಯಾದ ಪ್ರಾಂತವಿದೆ, ಅದು ಪ್ರಾಣಿಕ

ಸತ್ತೆಗಳಿಗೆ ಸೇರಿದೆ. ಈ ಪ್ರಾಂತ ಪೂಜೆಗೊಳ್ಳುವ ವಿಷಯ ಇತ್ಯಾದಿಗಳಿಂದ ತುಂಬಿಕೊಂಡಿದೆ ಏಕೆಂದರೆ ಈ ಸತ್ತೆಗಳು ಅದರ ಮೇಲೆ ಜೀವಿಸುತ್ತವೆ, ಅದರಿಂದ ಸಂತೋಷ ಪಡುತ್ತವೆ ಮತ್ತು ಅದು ಅವುಗಳಿಗೆ ಕೂಡಲೆ ಮಹತ್ವ ತಂದುಕೊಡುತ್ತದೆ ಮತ್ತು ಯಾವ ಪ್ರಾಣಿಕ ಸತ್ತೆಯನ್ನು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ನಂಬುವವರಿರುತ್ತಾರೋ, ಪೂಜೆ ಮಾಡುವವರಿರುತ್ತಾರೋ ಅದು ಅತ್ಯಂತ ಸಂತೋಷದಿಂದಿರುತ್ತದೆ, ಉಬ್ಬಿಕೊಂಡಿರುತ್ತದೆ. ಆದರೆ ಯಾರಾದರೂ ದೇವರುಗಳು ಮೌಲ್ಯ ನೀಡಬಹುದಾದುದನ್ನು ಕಲ್ಪನೆ ಮಾಡಿಕೊಳ್ಳುವುದು ಹೇಗೆ? ನಾನು ನಿಜವಾದ ದೇವರುಗಳನ್ನು ಕುರಿತು ಮಾತನಾಡುತ್ತಿದ್ದೇನೆ. ಅಧಿಮಾನಸದ ದೇವರುಗಳು ಕೂಡ, ಅವರು ಸ್ವಲ್ಪ ಹಾಗೆ, ಹೀಗೆ ಇರುವವರಾದರೂ, ಮಾನವರ ದೋಷಗಳಲ್ಲಿ ಹಲವಾರನ್ನು ತೆಗೆದುಕೊಂಡಿರುವುರಾದರೂ, ಅದೆಲ್ಲ ಇದ್ದಾಗ್ಯೂ ಅವರಲ್ಲಿ ಶ್ರೇಷ್ಠ ಪ್ರಜ್ಞೆಯಿದೆ– ಪೂಜೆ ಅವರನ್ನು ಪ್ರಸನ್ನಗೊಳಿಸುವುದಿಲ್ಲ. ಒಳ್ಳೆಯತನವಿರುವ ನಿಜವಾದ ಕಾರ್ಯ, ಬುದ್ಧಿಮತ್ತೆ, ನಿಸ್ವಾರ್ಥ ಇಲ್ಲವೆ ಸೂಕ್ಷ್ಮರೀತಿಯಲ್ಲಿ ಅರ್ಥಮಾಡಿಕೊಳ್ಳುವಿಕೆ ಇಲ್ಲವೆ ನಿಷ್ಕಾಪಟ್ಯವಿರುವ ಅಭೀಪ್ಸೆ. ಇವೆಲ್ಲ ಅವರಿಗೆ ಅನಂತಪಟ್ಟು ಉಚ್ಚವಾದವುಗಳು, ಚಿಕ್ಕ ಧಾರ್ಮಿಕ ಸಮಾರಂಭಕ್ಕಿಂತ ಅನಂತಪಟ್ಟು ಉಚ್ಚತರವಾದವುಗಳು!

**CWM, 6/194-96** **– ಶ್ರೀಮಾತೆ**

*

**ದೇವರುಗಳು ಹಾಗೂ ಅವರ ಪ್ರತಿಮೆಗಳು**

ಬಹಳ ಚಿಕ್ಕ ಮಗು ಯಾರೋ ಒಬ್ಬರ ಭಾವಚಿತ್ರವನ್ನು ಬರೆಯಲು ಪ್ರಯತ್ನಿಸಿದಾಗ ಅದು ಅವರನ್ನು ಹೋಲುವುದೇ? ಇದು ಹೆಚ್ಚಿನಮಟ್ಟಿಗೆ ಹಾಗಿದೆ. ಕೆಲವೊಮ್ಮೆ ಇನ್ನೂ ಹೆಚ್ಚು ಕೆಟ್ಟದ್ದಾಗಿರುತ್ತದೆ. ಏಕೆಂದರೆ ಮಗು ಬಿಚ್ಚು ಮನಸ್ಸಿನದು ಹಾಗೂ ನಿಷ್ಕಾಪಟ್ಯದ್ದು ಆಗಿರುತ್ತದೆ, ಅದು ಹಾಗಿರುವಾಗ ದೇವರ ಪ್ರತಿಮೆಗಳನ್ನು ಮಾಡುವವನಲ್ಲಿ ಸ್ಥಾಪಿತಗೊಂಡ ವಿಚಾರಗಳು, ಮೊದಲೇ ಕಲ್ಪಿಸಿಕೊಂಡ ಯೋಚನೆಗಳು ಇಲ್ಲವೆ ಅದನ್ನು ಕುರಿತು ಇತರರು ಹೇಳಿದ್ದೆಲ್ಲವೂ, ಶಾಸ್ತ್ರಗಳಲ್ಲಿ

ಬರೆದದ್ದು ಹಾಗೂ ಜನರಿಂದ ನೋಡಿದ್ದು ಇದೆಲ್ಲವೂ ಇರುತ್ತದೆ. ಹಾಗಾಗಿ ಅದೆಲ್ಲ ಅವನನ್ನು ಕಟ್ಟಿಹಾಕಿರುತ್ತದೆ. ಕೆಲವೊಮ್ಮೆ, ಕಾಲಕಾಲಕ್ಕೆ ಕಲಾಕಾರರಲ್ಲಿ ಕೆಲವರಿರುತ್ತಾರೆ, ಅವರಲ್ಲಿ ಆಂತರಿಕ ದರ್ಶನವಿರುತ್ತದೆ, ಶ್ರೇಷ್ಠ ಅಭೀಪ್ಸೆ ಇರುತ್ತದೆ, ಆತ್ಮದ ಹಾಗೂ ದೃಷ್ಟಿಯ ಪರಿಶುದ್ಧತೆ ಇರುತ್ತದೆ, ಅವರು ನಿರ್ಮಿಸಿದ ವಸ್ತುಗಳು ನ್ಯಾಯಸಮರ್ಥವಾಗಿ ಒಳ್ಳೆಯವಾಗಿರುತ್ತವೆ. ಆದರೆ ಇದು ಅಪರೂಪಕ್ಕೆ ಕಂಡುಬರುವಂತಹದು, ಸಾಧಾರಣವಾಗಿ ಬಹುಮಟ್ಟಿಗೆ ಇದಕ್ಕೆ ವಿರುದ್ಧವಾದದ್ದೇ ಇರುತ್ತದೆ ಎಂದು ನನ್ನ ನಂಬಿಕೆ.

ಈ ರೂಪಗಳಲ್ಲಿ ಕೆಲವನ್ನು ನಾನು ಪ್ರಾಣಿಕ ಹಾಗೂ ಮಾನಸಿಕ ಲೋಕಗಳಲ್ಲಿ ನೋಡಿದ್ದೇನೆ, ಅವು ನಿಜವಾಗಿ ಮಾನವರ ಸೃಷ್ಟಿಗಳಾಗಿದ್ದವು. ಆಚೆಗಿರುವ ಶಕ್ತಿಯೊಂದಿದೆ, ಅದು ಪ್ರಕಟವಾಗುತ್ತದೆ. ಮನುಷ್ಯನ ರೂಪ ನೀಡುವ ಯೋಚನೆಯ ಪರಿಣಾಮದಿಂದ ಪ್ರಕಟಗೊಂಡ ಸತ್ತೆಗಳಿರುತ್ತವೆ ಮತ್ತು ಇಲ್ಲಿ, ಅದು ನಿಜವಾಗಿ ಭಯಾನಕವಾಗಿರುತ್ತದೆ! ನಾನು ಇಂತಹ ರೂಪತಾಳುವಿಕೆಗಳನ್ನು ನೋಡಿದ್ದೇನೆ. (ಮೌನ) ಇದೆಲ್ಲವೂ ಎಷ್ಟೊಂದು ಮಬ್ಬಾದದ್ದು, ಗ್ರಹಿಸಲಾಗ–ದಂತಹದು, ಅನಭಿವ್ಯಕ್ತವಾದದ್ದು. ಉದಾಹರಣೆಗೆ ಮಹಾಕಾಳಿಯ ರೂಪ, ಅವಳ ರೂಪಕ್ಕೆ ಏನೆಲ್ಲವನ್ನು ಮಾಡಲಾಗಿದೆ ಎಂಬುದು ನಿಮಗೆ ತಿಳಿದಿದೆ. ಅದು ಎಷ್ಟೊಂದು ಭಯಾನಕವಾದದ್ದು, ಅದು ಕಲ್ಪನೆ ಮಾಡಿಕೊಳ್ಳಲೂ ಆಗದಷ್ಟು ಭಯಾನಕವಾಗಿದೆ., ಆದರೆ ಈ ರೂಪ ನಿಮ್ನ ಲೋಕದಲ್ಲಿ ಮಾತ್ರ ಜೀವಿಸುತ್ತದೆ, ಹೌದು ಹೆಚ್ಚು ನಿಮ್ನತರ ಪ್ರಾಣಿಕದಲ್ಲಿ; ಅದು ಮೂಲ ಸತ್ತೆಯಿಂದ ಹೊಂದಿರುವುದು ಏನೋ ಒಂದಿಷ್ಟನ್ನು– ಮೂಲದಿಂದ ಬಹಳ ದೂರದಲ್ಲಿರು–ವುದರ ಪ್ರತಿಫಲನ, ಗುರುತಿಸಲಾಗದಂತಹದಿದೆ.

**CWM, 6/205** **– ಶ್ರೀಮಾತೆ**

*

**ಪ್ರಾಣ ಪ್ರತಿಷ್ಠೆ**

ದೇವತಾ ವಿಗ್ರಹವನ್ನು ತಯಾರು ಮಾಡಿದಾಗ, ಪುರೋಹಿತ ಒಂದು ರೂಪವನ್ನು ಅದರಲ್ಲಿ ಕೆಳಗಿಳಿಸಿರುತ್ತಾನೆ– ಕ್ರಮಬದ್ಧ ರೀತಿಯಲ್ಲಿ ಸಮಾರಂಭ

ಮುಕ್ತಾಯಗೊಂಡಾಗ, ಅವನು ತನ್ನನ್ನು ಆಹ್ವಾನ ನೀಡುವ ಆಂತರಿಕ ಸ್ಥಿತಿಯಲ್ಲಿ ಇರಿಸಿಕೊಳ್ಳುತ್ತಾನೆ ಮತ್ತು ಒಂದು ರೂಪವನ್ನು ಇಲ್ಲವೆ ದೇವಪ್ರಮುಖನಿಂದ ಉದ್ಭವವಾದದ್ದನ್ನು ಆ ವಿಗ್ರಹದಲ್ಲಿ ಕೆಳಗಿಳಿಸಿ ತರಲು ಪ್ರಯತ್ನಿಸುತ್ತಾನೆ, ಅದು ಆ ವಿಗ್ರಹಕ್ಕೆ ಸಾಮರ್ಥ್ಯ ನೀಡುವುದಕ್ಕಾಗಿರುತ್ತದೆ, ಪುರೋಹಿತ ನಿಜವಾಗಿ ಆಹ್ವಾನ ನೀಡುವ ಸಾಮರ್ಥ್ಯವುಳ್ಳವನಾಗಿದ್ದರೆ ಅವನು ಯಶಸ್ವಿಯಾಗಬಲ್ಲ. ಆದರೆ ಸಾಮಾನ್ಯವಾಗಿ– ಪ್ರತಿಯೊಂದಕ್ಕೂ ಅಪವಾದಗಳಿರುತ್ತವೆ– ಈ ಜನರು ಸಂಪ್ರದಾಯದ ಪ್ರಕಾರ ಸಾಮಾನ್ಯ ವಿಚಾರಗಳನ್ನು ಹೊಂದುವ ರೀತಿಯಲ್ಲಿ ಶಿಕ್ಷಣ ಪಡೆದಿರುತ್ತಾರೆ ಮತ್ತು ಹಾಗಾಗಿ ಅವರು ಆಹ್ವಾನಿಸುತ್ತಿರುವ ದೇವಪ್ರಮುಖನನ್ನು ಕುರಿತು ಯೋಚಿಸಿದಾಗ ಅವನಿಗೆ ಕೊಡಲಾದ ಎಲ್ಲ ಗುಣಲಕ್ಷಣಗಳನ್ನು, ತೋರಿಕೆಯನ್ನು ಕುರಿತು ಯೋಚಿಸುತ್ತಾರೆ ಮತ್ತು ಆವಾಹನೆಯನ್ನು ಪ್ರಾಣಿಕಲೋಕದ ಅಸ್ತಿತ್ವಗಳಿಗೆ, ಅತಿ ಹೆಚ್ಚು ಒಳ್ಳೆಯದೆಂದರೆ ಮಾನಸಿಕ ಲೋಕದ ಅಸ್ತಿತ್ವಗಳಿಗೆ ಮಾಡಲಾಗಿರುತ್ತದೆ, ಆದರೆ ಆ ದೈವೀ ಸತ್ತೆಗೇ ಅಲ್ಲ. ಈ ಚಿಕ್ಕ ಅಸ್ತಿತ್ವಗಳು ಒಂದು ವಿಗ್ರಹದಲ್ಲಿ ಇಲ್ಲವೆ ಮತ್ತೊಂದರಲ್ಲಿ ಪ್ರಕಟವಾಗುತ್ತವೆ. ದೇವಾಲಯಗಳಲ್ಲಿ, ಕುಟುಂಬಗಳಲ್ಲಿಯೂ ಕೂಡ ಈ ಎಲ್ಲ ವಿಗ್ರಹಗಳಿರುತ್ತವೆ– ಕೆಲವರು ತಮ್ಮ ಮನೆಯಲ್ಲಿ ಚಿಕ್ಕದೇಗುಲವನ್ನು (shrine) ಹೊಂದಿರುತ್ತಾರೆ ಹಾಗೂ ಅವರು ಪೂಜಿಸುವ ದೇವಪ್ರಮುಖನ ವಿಗ್ರಹವನ್ನು ಅಲ್ಲಿರಿಸಿರುತ್ತಾರೆ– ಈ ಅಸ್ತಿತ್ವಗಳು ಅಲ್ಲಿ ಪ್ರಕಟವಾಗುತ್ತವೆ, ಕೆಲವೊಮ್ಮೆ ಪರಿಣಾಮಗಳು ದುರ್ದೈವದ್ದಾಗಿರುತ್ತವೆ, ಏಕೆಂದರೆ ಈ ರೂಪಗಳು ಮೂಲ ದೇವಪ್ರಮುಖನಿಂದ ಎಷ್ಟೊಂದು ದೂರವಿರುತ್ತವೆ ಎಂದರೆ ಅವು ಅಪಾಯಕಾರಿ (awkward) ರೂಪತಾಳುವಿಕೆಗಳಾಗಿರುತ್ತವೆ.

**ಮಾನವ ರೂಪದಲ್ಲಿ ಅವತಾರ ತಾಳುವ ದೇವರುಗಳು**

ಚೈತ್ಯ ಜೀವನದ ಪ್ರಾರಂಭ, ಭೌತದ್ರವ್ಯದಲ್ಲಿ ದೈವೀಸಾನ್ನಿಧ್ಯ ಇವೆರಡೂ ಒಂದೇ ಆಗಿವೆ, ಅದನ್ನು ಅರ್ಥಮಾಡಿಕೊಳ್ಳಲಾಗಿದೆ. ಅದರೆ ಉಚ್ಚತರ ಜಗತ್ತಿನಲ್ಲಿ ಕೆಲವು ಸತ್ತೆಗಳಿವೆ. ಅವರು ಪೃಥ್ವಿಯ ಮೇಲೆ ಎಂದಿಗೂ ದೇಹವೊಂದರ ಧಾರಣ ಮಾಡಿಲ್ಲ. ಅಲ್ಲಿಯೇ ಇದ್ದುಕೊಂಡು ಪೃಥ್ವಿಯ ಮೇಲೆ ಕಾರ್ಯಕೈಕೊಳ್ಳುತ್ತಾರೆ. ಪೃಥ್ವಿಯ ಮೇಲೆ ಅವರ ಕ್ರಿಯೆ ಇರುತ್ತದೆ. ಹಾಗಾಗಿ ಕೆಲವು ಚೈತ್ಯಸತ್ತೆಗಳು ಪೂರ್ತಿ

ಅಭಿವೃದ್ಧಿ ಹೊಂದಲಿ ಎಂದು ಅವರು ಕಾದುಕೊಂಡಿರುತ್ತಾರೆ, ಅವು ಅಭಿವೃದ್ಧಿ ಪಡೆದ ನಂತರ ಅವುಗಳೊಡನೆ ಕೂಡಿಕೊಳ್ಳುತ್ತಾರೆ ಮತ್ತು ಅವರ ಸ್ವಭಾವಕ್ಕನು– ಗುಣವಾಗಿ ಕಾರ್ಯಕೈಕೊಳ್ಳುತ್ತಾರೆ. ಅವರ ಪ್ರಜ್ಞೆ ಪೃಥ್ವಿಯ ಮೇಲಿನ ಚೈತ್ಯಾತ್ಮಿಕ ಪ್ರಜ್ಞೆಯೊಂದಿಗೆ ಅಧಿಕವಾಗಿ ಸೇರಿಕೊಂಡಿರುತ್ತದೆ. ಈ ಸತ್ತೆಗಳು ಪೃಥ್ವಿಯ ಮೇಲೆ ಎಂದಿಗೂ ಜನ್ಮ ತಾಳಿದವುಗಳಲ್ಲ, ಸೃಷ್ಟಿ ಮುಂದುವರಿದುಕೊಂಡು ಹೋದ ಹಾಗೆ ಈ ಸತ್ತೆಗಳು ಹೆಚ್ಚು ಹೆಚ್ಚಾಗಿ ಮೂರ್ತರೂಪ ಪಡೆಯತೊಡಗಿದವು. ಅವು ಬಹುಶಃ ಮೊದಲ ಉದ್ಭವ ಸತ್ತೆಗಳು (emanations), ಅವುಗಳನ್ನು ವಿಶ್ವದಲ್ಲಿ ವಿಶೇಷ ಕಾರಣಕ್ಕಾಗಿ ಕಳಿಸಿಕೊಡಲಾಗಿತ್ತು.– ಜನರು ಅವುಗಳಿಗೆ ದೇವರುಗಳೆಂದು ಇಲ್ಲವೆ ಅರ್ಧ ದೇವತೆಗಳೆಂದು ಕರೆಯುತ್ತಾರೆ. ಹಾಗಾಗಿ ಈ ಸತ್ತೆಗಳಲ್ಲಿ ಒಂದು, ವಿಶೇಷ ಕಾರಣಕ್ಕಾಗಿ ಒಂದು ಚೈತ್ಯಸತ್ತೆಯನ್ನು ಆಯ್ದುಕೊಂಡಿರಬೇಕು, ಅದು ರೂಪತಾಳುತ್ತಿರುವ ಚೈತ್ಯಸತ್ತೆಯಾಗಿರುತ್ತದೆ– ಅದಕ್ಕೆ ಆ ದೈವೀಸತ್ತೆ ಸಹಾಯ ಮಾಡುತ್ತಾನೆ, ಅದರ ಅಭಿವೃದ್ಧಿಯನ್ನು ಅನುಸರಿಸಿಕೊಂಡು ಹೋಗುತ್ತಾನೆ ಮತ್ತು ಗುರುತಿಸಿಕೊಳ್ಳುವುದಕ್ಕೆ ಚೈತ್ಯಸತ್ತೆ ಸಾಕಷ್ಟು ತಯಾರಾದಾಗ, ಬಲಿಷ್ಠವಾದಾಗ ಪೃಥ್ವಿಯ ಮೇಲೆ ಒಂದಿಷ್ಟು ಕಾರ್ಯಮಾಡುವುದಕ್ಕೆ ಅದರೊಡನೆ ಏಕವಾಗುತ್ತಾನೆ, ಇದು ಬಹಳ ಸಲ ಆಗುವಂತಹದಲ್ಲ, ಆದರೆ ಅದು ಸಂಭವಿಸಿದೆ, ಇನ್ನೂ ಸಂಭವಿಸುತ್ತಲೇ ಇದೆ. ಪ್ರಾಚೀನ ಸಂಪ್ರದಾಯದಲ್ಲಿ ದೇವರುಗಳು ಪೃಥ್ವಿಯ ಮೇಲೆ ಅವತರಣ ಮಾಡಿದ್ದ ಕತೆಗಳು ನಿಮಗೆ ಕಂಡುಬರುತ್ತವೆ. ಕೆಲವು ಪುರಾಣಗಳೂ ಅವುಗಳ ಬಗ್ಗೆ ಹೇಳುತ್ತವೆ. ಆದರೆ ಎಲ್ಲ ಚೈತ್ಯಸತ್ತೆಗಳು ಉಚ್ಚಸ್ತರದಲ್ಲಿರುವ ಸತ್ತೆಗಳೊಂದಿಗೆ ಅವಶ್ಯವಾಗಿ ಏಕವಾಗಿರುವುದಿಲ್ಲ.

**CWM, 4/184** – ಶ್ರೀಮಾತೆ

*

**ದೇವರುಗಳಿಂದ ಉದ್ಭವವಾದವುಗಳು**

ಚೈತ್ಯಸತ್ತೆ ಉತ್ಕ್ರಾಂತಿಯ ಪರಿಣಾಮದಿಂದ ಹೊರಬಂದಿದೆ, ಎಂದರೆ ಭೌತದ್ರವ್ಯದಲ್ಲಿ ದೈವೀಪ್ರಜ್ಞೆಯ ಉತ್ಕ್ರಾಂತಿ ಹರಡಿಕೊಂಡು, ಭೌತದ್ರವ್ಯವನ್ನು ನಿಧಾನಗತಿಯಲ್ಲಿ ಮೇಲಕ್ಕೆತ್ತಿ ಹಿಡಿಯಿತು, ಭಗವಂತನೆಡೆಗೆ ಮರಳಿ ಹೋಗಲೆಂದು ಅಭಿವೃದ್ಧಿಪಡಿಸಿತು. ಈ ದೈವೀ ಕೇಂದ್ರದಿಂದ ಎಲ್ಲ ಜನ್ಮಗಳಾದ್ಯಂತ ಪ್ರಗತಿಪರ

ರೀತಿಯಲ್ಲಿ ಈ ಚೈತ್ಯಸತ್ತೆ ರೂಪತಾಳಿತು. ಒಂದು ಸಮಯ ಬರುತ್ತದೆ, ಆಗ ಅದು ಒಂದು ಬಗೆಯ ಪರಿಪೂರ್ಣತೆಯನ್ನು ಪಡೆಯುತ್ತದೆ, ಆ ಪರಿಪೂರ್ಣತೆ ಬೆಳವಣಿಗೆಯಲ್ಲಿ ಹಾಗೂ ರೂಪತಾಳುವಿಕೆಯಲ್ಲಿರುತ್ತದೆ. ನಂತರ ಬಹಳಷ್ಟು ಸಲ ಅದರಲ್ಲಿ ಸಿದ್ಧಿಗಾಗಿ ಅಭೀಪ್ಸೆ ಇರುತ್ತದೆ, ಭಗವಂತನನ್ನು ಇನ್ನೂ ಹೆಚ್ಚು ರೀತಿಯಲ್ಲಿ ಪ್ರಕಟಗೊಳಿಸಲು ಅದು ತೊಡಗಿಕೊಂಡಿರುವಿಕೆಯಲ್ಲಿರುವ ಸತ್ತೆಯೊಂದನ್ನು ತನ್ನೆಡೆಗೆ ಎಳೆದುಕೊಳ್ಳುತ್ತದೆ ಎಂದರೆ ಶ್ರೀ ಅರವಿಂದರು ಅಧಿಮಾನಸ ಎಂದು ಕರೆದ ಸ್ತರಕ್ಕೆ ಆ ಸತ್ತೆ ಸೇರಿರುತ್ತದೆ, ಅದು ಬಂದು ಈ ಚೈತ್ಯಸತ್ತೆಯಲ್ಲಿ ಅವತಾರ ತಾಳುತ್ತದೆ. ಜನರು ಸಾಮಾನ್ಯವಾಗಿ ದೇವರುಗಳು ಎಂದು ಕರೆಯುವ ಅಸ್ತಿತ್ವಗಳಲ್ಲಿ ಅದು ಒಂದಾಗಿರಬಹುದು, ಒಂದು ಬಗೆಯ ದೇವತೆಯಾಗಿರಬಹುದು ಮತ್ತು ಈ ಬೆಸುಗೆಯಾದಾಗ ಚೈತ್ಯಸತ್ತೆ ಸ್ವಾಭಾವಿಕವಾಗಿ ಹಿಗ್ಗಿಕೊಳ್ಳುತ್ತದೆ ಮತ್ತು ಅದರಲ್ಲಿ ಅವತಾರ ತಾಳಿದುದರ ಸ್ವಭಾವದಲ್ಲಿ ಪಾಲುಗಾರನಾಗುತ್ತದೆ ಮತ್ತು ಆಗ ಅದಕ್ಕೆ ಉದ್ಭವ ಸತ್ತೆಗಳನ್ನು ಉತ್ಪಾದಿಸುವ ಸಾಮರ್ಥ್ಯವಿರುತ್ತದೆ. ಈ ಸತ್ತೆಗಳಿಗೆ ಉದ್ಭವ ಸತ್ತೆಗಳನ್ನು (emanations) ಉತ್ಪಾದಿಸುವ ಸಾಮರ್ಥ್ಯವಿರುತ್ತದೆ, ಎಂದರೆ ಅವು ತಮ್ಮೊಳಗಿಂದ ತಮ್ಮದೇ ಒಂದು ಭಾಗವನ್ನು ಪ್ರಕ್ಷೇಪಿಸುತ್ತವೆ, ಅದು ಸ್ವತಂತ್ರ–ವಾಗುತ್ತದೆ ಮತ್ತು ಬೇರೆಯವುಗಳಲ್ಲಿ ಹೋಗಿ ತಾನು ಅವತಾರ ತಾಳುತ್ತದೆ. ಹಾಗಾಗಿ ಅಲ್ಲಿ ಕೇವಲ ಎರಡಷ್ಟೇ ಅಲ್ಲ, ಆದರೆ ಮೂರು, ನಾಲ್ಕು ಇಲ್ಲವೆ ಐದು ಉದ್ಭವ ಸತ್ತೆಗಳಿರಬಹುದು, ಅದು ಸಂದರ್ಭಗಳ ಮೇಲೆ ಅವಲಂಬಿಸಿರುತ್ತದೆ, ಅದು ಈ ರೀತಿಯಲ್ಲಾಗುವುದು. ಎಂದರೆ ಒಂದಕ್ಕೆ ಅದೇ ಮೂಲವಿರಬಹುದು, ದೈವೀ ಚೈತ್ಯವಿರಬಹುದು ಎಂದು ನಾವು ಹೇಳಬಹುದು ಮತ್ತು ಸಾಧಾರಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಭವ ಸತ್ತೆಗಳಿದ್ದಾಗ, ಭಿನ್ನ ವ್ಯಕ್ತಿಗಳು ಆ ಸತ್ತೆ ತಾವೇ ಎಂಬ ಭಾವನೆ ತಂದುಕೊಳ್ಳಬಹುದು ಮತ್ತು ಅದು ಸರಿಯಾದದ್ದೇ ಆಗಿರುತ್ತದೆ, ಏಕೆಂದರೆ ಅವು ತಮ್ಮಲ್ಲಿ ಆ ದೇವ ಪ್ರಮುಖನ ಒಂದಿಷ್ಟನ್ನು ಕೊಂಡೊಯ್ಯುತ್ತವೆ: ಅದು ದೇವ ಪ್ರಮುಖನ ಒಂದು ಭಾಗ ತನ್ನನ್ನು ಎಸೆದುಬಿಟ್ಟಿರುವ ಹಾಗಿರುತ್ತದೆ, ಎಸೆದ ಭಾಗ ಮತ್ತೊಂದು ಸತ್ತೆಯಲ್ಲಿ ಸ್ವತಂತ್ರವಾಗಿರುತ್ತದೆ, ಅದು ದ್ವಿಗುಣಗೊಳಿಸಿದ್ದಲ್ಲ, ಆದರೆ ಒಂದು ಬಗೆಯ ಸ್ವ–ಪ್ರಕ್ಷೇಪಣೆ.

**CWM, 5/263-64** **– ಶ್ರೀಮಾತೆ**

*

## ಮನುಷ್ಯನಲ್ಲಿರುವ ಚೈತ್ಯ ಅವನನ್ನು ಅಸಾಧಾರಣವಾದವನನ್ನಾಗಿ ಮಾಡುತ್ತದೆ

ಚೈತ್ಯದ ಸಾನ್ನಿಧ್ಯ ಮನುಷ್ಯನನ್ನು ಅಸಾಧಾರಣವಾದವನನ್ನಾಗಿ ಮಾಡುತ್ತದೆ– ನಾನಿದನ್ನು ಅವನಿಗೆ ಹೆಚ್ಚಿನ ರೀತಿಯಲ್ಲಿ ಹೇಳಲು ಇಷ್ಟಪಡುವುದಿಲ್ಲ, ಏಕೆಂದರೆ ಅದಾಗಲೇ ಅವನು ತನ್ನ ಬಗ್ಗೆ ಬಹಳ ಹೆಚ್ಚಿನ ರೀತಿಯಲ್ಲಿ ಯೋಚಿಸುತ್ತಾನೆ, ಅವನಲ್ಲಿ ತನ್ನ ಬಗ್ಗೆ ಎಷ್ಟೊಂದು ಹೆಚ್ಚುಗಾಗಿಕೆ ಇರುವ ಅಭಿಪ್ರಾಯ ಇದೆ ಎಂದರೆ ಅವನನ್ನು ಉತ್ತೇಜಿತಗೊಳಿಸುವ ಆವಶ್ಯಕತೆ ಇಲ್ಲ! ಆದಾಗ್ಯೂ ವಾಸ್ತವ ಸಂಗತಿ ಇದು– ಅದೆಷ್ಟರ ಮಟ್ಟಿಗೆ ಎಂದರೆ ವಿಶ್ವದಲ್ಲಿ ಉಳಿದ ಪ್ರಾಂತಗಳ ಸತ್ತೆಗಳಿದ್ದಾರೆ, ಅವರನ್ನು ಜನರು ಅರ್ಧದೇವತೆಗಳೆಂದು, ದೇವರುಗಳೆಂದು ಕರೆಯುತ್ತಾರೆ, ಉದಾಹರಣೆಗೆ ಶ್ರೀ ಅರವಿಂದರು ಅಧಿಮಾನಸ ಎಂದು ಕರೆದದ್ದಕ್ಕೆ ಸೇರಿದವ–ರಿದ್ದಾರೆ, ಅವರಲ್ಲಿ ಚೈತ್ಯಸತ್ತೆ ಇಲ್ಲದೆ ಇರುವುದರಿಂದ ಅವರು ಪೃಥ್ವಿಯ ಮೇಲೆ ಜನ್ಮತಾಳುವುದಕ್ಕೆ ಆತುರದಿಂದಿದ್ದಾರೆ, ಅವರಿಗೆ ಚೈತ್ಯಸತ್ತೆಯನ್ನು ಹೊಂದಿರುವುದರ ಅನುಭವ ಬೇಕಾಗಿರುತ್ತದೆ. ಈ ಸತ್ತೆಗಳಲ್ಲಿ ನಿಶ್ಚಿತವಾಗಿ ಮನುಷ್ಯರಲ್ಲಿರದ ಹಲವಾರು ಗುಣಲಕ್ಷಣಗಳಿರುತ್ತವೆ, ಆದರೆ ಅವರಲ್ಲಿ ಈ ದೈವೀ ಸಾನ್ನಿಧ್ಯದ ಆವಶ್ಯಕತೆ ಇದೆ, ಅದು ಒಟ್ಟಿನಲ್ಲಿ ಅಪವಾದಾತ್ಮಕವಾದದ್ದು, ಅದು ಪೃಥ್ವಿಯ ಮೇಲಷ್ಟೇ ಇದೆ, ಬೇರಾವ ಪ್ರಾಂತಗಳಲ್ಲಿರುವುದಿಲ್ಲ. ಉಚ್ಚತರ ಮನಸ್ಸಿನ ಲೋಕ, ಅಧಿಮಾನಸ, ಇನ್ನಿತರ ಉಚ್ಚಲೋಕಗಳು ಇವುಗಳಲ್ಲಿ ವಾಸಿಸುವವರಿಗೆ ಚೈತ್ಯಸತ್ತೆ ಇರುವುದಿಲ್ಲ. ಸಹಜವಾಗಿ ಪ್ರಾಣಿಕ ಲೋಕದಲ್ಲಿ ವಾಸ ಮಾಡುವವರಿಗೆ ಚೈತ್ಯಸತ್ತೆ ಬೇಕಾಗಿರುವುದಿಲ್ಲ. ಅದಿಲ್ಲದೆ ಇರುವುದಕ್ಕಾಗಿ ಅವರು ದುಃಖಪಡುವುದಿಲ್ಲ, ಅದು ಅವರಿಗೆ ಬೇಕಾಗಿರುವುದಿಲ್ಲ, ಅಪರೂಪಕ್ಕೆ ಕಂಡುಬರುವ ಸತ್ತೆಗಳಿವೆ, ಅವರು ಇದಕ್ಕಾಗಿ ತಡಮಾಡದೆ, ಕೂಡಲೆ ಭೌತಿಕ ದೇಹಧಾರಣ ಮಾಡುತ್ತವೆ. ಉಳಿದವು–ಗಳಿಗೆ ಅದು ಬೇಕಾಗಿರುವುದಿಲ್ಲ, ಕಟ್ಟಿ ಹಾಕುವ ನಿಯಮಕ್ಕೆ, ಬಂಧನಕ್ಕೆ ಒಳಗಾಗದೆ ಇರಲು ಬಯಸುವ ಸತ್ತೆಗಳು ಅವಾಗಿರುತ್ತವೆ.

ಆದರೆ ಅದು ವಾಸ್ತವ ಸಂಗತಿ, ಹಾಗಾಗಿ ನಾನು ಇದಿರುವುದು ಹೀಗೆ ಎಂಬ ಹೇಳಿಕೆ ನೀಡುವ ನಿರ್ಬಂಧಕ್ಕೊಳಗಾಗಿದ್ದೇನೆ, ಮಾನವ ಸತ್ತೆ ತನ್ನೊಳಗೆ ಚೈತ್ಯವನ್ನು ಕೊಂಡೊಯ್ಯುತ್ತಿರುವುದು ಅಪವಾದಾತ್ಮಕ ಗುಣಲಕ್ಷಣ ಮತ್ತು ನಿಜ ಹೇಳುವು–ದಾದರೆ ಅವನು ಅದರಿಂದ ಪೂರ್ತಿ ಅನುಕೂಲತೆಯನ್ನು ಪಡೆದುಕೊಳ್ಳುವುದಿಲ್ಲ.

ಅವನು ನಡೆಸಿಕೊಳ್ಳುತ್ತಿರುವ ರೀತಿಯಲ್ಲಿ ಈ ಸಾನ್ನಿಧ್ಯವನ್ನು ಅತ್ಯಂತ ಹೆಚ್ಚಿನ ರೀತಿಯಲ್ಲಿ ಬಯಸಬೇಕಾದುದು ಎಂದು ಅವನು ಪರಿಗಣಿಸುವುದಿಲ್ಲ– ನಿಖರವಾಗಿ ಅದು! ಅವನು ತನ್ನ ಮನಸ್ಸಿನ ವಿಚಾರಗಳಿಗೆ, ಪ್ರಾಣಿಕದ ಆಸೆಗಳಿಗೆ ಹಾಗೂ ಭೌತಿಕದ ರೂಢಿಗಳಿಗೆ ಆದ್ಯತೆ ನೀಡುತ್ತಾನೆ.

**CWM, 6/161** **– ಶ್ರೀಮಾತೆ**

*

**ದೇವತೆಗಳನ್ನು ನಿರ್ಲಕ್ಷಿಸುವುದು**

ಥಿಯೋನ್ ನನಗೆ ಪರಿಚಯ ಮಾಡಿಕೊಟ್ಟಿದ್ದ, ಹಿಂದೂ ಸಂಪ್ರದಾಯದಲ್ಲಿ ವರ್ಣಿಸಲಾಗಿದ್ದ ಎಲ್ಲ ಸತ್ತೆಗಳೊಡನೆ ಪ್ರಜ್ಞಾಪೂರ್ವಕ ಸಂಪರ್ಕ ನನಗಾಗಿತ್ತು. ವಾಸ್ತವದಲ್ಲಿ, ನನಗೆ ತಿಳಿದ ಮಟ್ಟಿಗೆ, ಎಲ್ಲ ಧರ್ಮಗಳ ಎಲ್ಲ ದೇವತೆಗಳೊಂದಿಗೆ ಸಂಪರ್ಕ ಪಡೆದಿದ್ದೆ. ಶ್ರೇಣಿ ವ್ಯವಸ್ಥೆಯೊಂದಿದೆ. (ಸ್ತರಗಳನ್ನು ಸೂಚಿಸುವ ಸಂಜ್ಞೆ). ಎಲ್ಲ ಸ್ತರಗಳಲ್ಲಿ ಈ ಸತ್ತೆಗಳಿವೆ, ಪ್ರಾಣಿಕ ಸ್ತರದಲ್ಲಿ ಕೆಲವಿವೆ, ಮಾನಸಿಕ ಪ್ರಾಂತದಲ್ಲಿ ಮನುಷ್ಯ ಹಲವಾರು ವಸ್ತು–ವಿಷಯಗಳನ್ನು ದೈವೀಕರಿಸಿದ್ದಾನೆ: ತನ್ನ ಹಾಗೆ ಕಂಡುಬರದಿದ್ದನ್ನೆಲ್ಲ ಮನಃಪೂರ್ವಕವಾಗಿ ದೇವತೆಗಳನ್ನಾಗಿ ಮಾಡಿದ್ದಾನೆ. ನೀವು ಸಾರಸಂಗ್ರಹಿ (eclectic) ಗಳಾಗಿದ್ದರೆ ಅವೆಲ್ಲವುಗಳೊಡನೆ ಸಂಪರ್ಕ ಪಡೆಯ–ಬಹುದು ಮತ್ತು ಅವೆಲ್ಲವುಗಳಿಗೆ ಅವುಗಳದೇ ನೈಜತೆ ಹಾಗೂ ಅಸ್ತಿತ್ವಗಳಿವೆ.

ಈ ಪ್ರಾಂತ ಪೃಥ್ವಿಯನ್ನು ಹಾಗೂ ಮನಸ್ಸನ್ನು (ಅತ್ಯುಚ್ಚ ಮನಸ್ಸನ್ನೂ ಕೂಡ) ಮೇಲಿನಿಂದ ನೋಡುತ್ತದೆ. ಆದರೆ ಪೃಥ್ವಿಯ ಉತ್ಕ್ರಾಂತಿಗೆ ಅದರದೇ ಲಯಬದ್ಧತೆ ಇದೆ, ವಿಶ್ವದ ಉತ್ಕ್ರಾಂತಿಯನ್ನು ಗಮನಿಸಿದಾಗ ಅದು ಅದರದೇ ಹೆಚ್ಚಿನ ಸಾಂದ್ರತೆ, ಏಕಾಗ್ರಗೊಂಡಿರುವಿಕೆ ಹಾಗೂ ಕೇಂದ್ರೀಕರಿಸಿಕೊಂಡಿರುವಿಕೆ ಇವುಗಳನ್ನೆಲ್ಲ ಹೊಂದಿರುವಂತೆ ತೋರಿಬರುತ್ತದೆ.– ಪೃಥ್ವಿಯ ಈ ಉತ್ಕ್ರಾಂತಿ ಮನುಷ್ಯ ಜೀವಿಯೊಂದಿಗೆ ಹೆಚ್ಚಿನ ಮಟ್ಟದ ಬೌದ್ಧಿಕತೆಯನ್ನು ಸೃಷ್ಟಿಸಿ ಅದರ ಮೂಲಕ ಉಚ್ಚತರ ಮಾನಸಿಕ ಪ್ರಾಂತವನ್ನು, ದೇವರುಗಳ ಪ್ರಾಂತವನ್ನು ದಾಟಿ ಹೋಗಿ ಉಚ್ಚತರ ದೈವೀ ತತ್ವವನ್ನು ನೇರವಾಗಿ ತಲುಪುವ ಕ್ಷಮತೆ ಹೊಂದಿದೆ.

ಆದರೆ ದೇವರುಗಳ ಅಧಿಮಾನಸ ಪ್ರಾಂತಕ್ಕೆ ಜಗತ್ತನ್ನು, ಭಾಗಶಃ ಪೃಥ್ವಿಯನ್ನು

ಆಳುವ ಸಾಮರ್ಥ್ಯವಿದೆ, ಇದಕ್ಕೆ ಅದರ ನೈಜತೆಯಿದೆ. ನೀವು ಅದರ ಸಂಪರ್ಕಕ್ಕೆ ಬರಬಹುದು, ಅದನ್ನು ಉಪಯೋಗಿಸಬಹುದು, ವೈದಿಕ ಪೂರ್ವಜರು ಅದನ್ನು ಉಪಯೋಗಿಸಿದ್ದರು, ರಹಸ್ಯವಾದಿಗಳು, ಹಾಗೆಯೇ ತಾಂತ್ರಿಕರು ಕೂಡ ಅದನ್ನು ಉಪಯೋಗಿಸುತ್ತಾರೆ. ಆದರೆ ಇನ್ನೊಂದು ಮಾರ್ಗವಿದೆ, ಅದರ ಪ್ರಕಾರ ದೇವತೆಗಳಲ್ಲಿ ವಿಶ್ವಾಸವಿರಿಸದೆ, ಒಂದು ಬಗೆಯ ವೈರಾಗ್ಯದಿಂದ ಕೂಡಿದ ಬೌದ್ಧಿಕತೆಯಿಂದ ಅವರನ್ನು ನಿರ್ಲಕ್ಷಿಸಿ, ರೂಪಗಳಿಂದ, ಪ್ರತೀಕಗಳಿಂದ, ಭಿನ್ನ ಅಭಿವ್ಯಕ್ತಿಗಳಿಂದ ಎಚ್ಚರದಿಂದಿದ್ದಷ್ಟು ಆ ಮಾರ್ಗ ಬಾಣದ ಹಾಗೆ ಮೇಲಕ್ಕೇರುತ್ತದೆ, ತನ್ನ ಅಭಿಮಾನದಿಂದ, ಪರಿಶುದ್ಧತೆಯಿಂದ ನೇರವಾಗಿ ಅತಿಮಾನಸ ಪ್ರಕಾಶದತ್ತ ಮೇಲಕ್ಕೇರಿ ಸಾಗುತ್ತದೆ. ಅದು ಜೀವಿಸಿರುವ ಅನುಭವ.

ಶ್ರೀ ಅರವಿಂದರು ಸಮಗ್ರ ಯೋಗವನ್ನು ಬೋಧಿಸಿದ್ದರು, ಅದು ಎಲ್ಲವನ್ನೂ ಒಳಗೊಳ್ಳುತ್ತದೆ, ಹಾಗಾಗಿ ಮನುಷ್ಯ ಎಲ್ಲ ಬಗೆಯ ಅನುಭವಗಳನ್ನು ಪಡೆಯ–ಬಲ್ಲನು. ನಿಜವಾಗಿ ವಿಶ್ವವನ್ನು ಸ್ಪಷ್ಟವಾಗಿ ಅನುಭವದ ಒಂದು ಕ್ಷೇತ್ರವೆಂದು ಸೃಷ್ಟಿಸಲಾಗಿತ್ತು. ಕೆಲವರು ಚಿಕ್ಕ, ನೇರವಾದ ಸಂಕುಚಿತ ಮಾರ್ಗಗಳಿಗೆ ಆದ್ಯತೆ ನೀಡುತ್ತಾರೆ, ಅದು ಅವರ ವ್ಯವಹಾರ, ಇನ್ನು ಕೆಲವರು ಮಾರ್ಗದ ಜೊತೆಗೆ ಕಾಲಹರಣ ಮಾಡಲು ಬಯಸುತ್ತಾರೆ, ಅದು ಅವರ ವ್ಯವಹಾರ.

ಮತ್ತು ಕೆಲವರು ಎಲ್ಲ ಅನುಭವಗಳನ್ನು ಪಡೆಯುವತ್ತ ಎಳೆತಕ್ಕೊಳಗಾಗಿ–ರುತ್ತಾರೆ ಮತ್ತು ಹೀಗೆ ಅವರು ಬಹಳಷ್ಟು ಸಲ ಅಧಿಮಾನಸ ಜಗತ್ತಿನಲ್ಲಿ ದೀರ್ಘಕಾಲದವರೆಗೆ ಅತ್ತಿಂದಿತ್ತ ಅಲೆದಾಡುತ್ತಾರೆ ಮತ್ತು ಸಹಜವಾಗಿ ಧಾರ್ಮಿಕ ಅಭೀಪ್ಸೆಯುಳ್ಳ ಜನರು ಹೀಗೆ ಅನೇಕ ದೇವತೆಗಳ ಸ್ಪರ್ಶಕ್ಕೆ ಬರುತ್ತಾರೆ. ಅವರು ನಿಂತುಕೊಂಡಲ್ಲಿ– ಅದು ಅವರಿಗೆ ಸಾಕಷ್ಟಾಗಿರುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 26, 1962 – ಶ್ರೀಮಾತಾ**

*

**ದೇವತೆಗಳ ಸಹಾಯವಿಲ್ಲದೆ ನಿರ್ವಹಿಸಬಲ್ಲೆವು**

ದೇವರುಗಳೊಡನೆ ನನ್ನ ಅನುಭವ ಎಂದಿಗೂ ನನಗೆ ತಮಾಷೆಗಿಂತ ಹೆಚ್ಚಿನ–ದಾಗಿರಲಿಲ್ಲ, ಅದೊಂದು ಮೋಜಿನ, ಹರ್ಷದಾಯಕ ಕಾಲಕ್ಷೇಪವಾಗಿತ್ತು.

ಅವುಗಳಲ್ಲಿ ಯಾವುದೂ ಅವಶ್ಯವಾಗಿರುವಂತೆ, ಅತ್ಯಗತ್ಯದ್ದಾಗಿರುವಂತೆ ತೋರಿ–ಬರುವುದಿಲ್ಲ. ಈ ಎಲ್ಲ ಸುಖಸಾಧನೆಗಳಿಗೆ ನೀವು ನಿಮ್ಮನ್ನು ಒಳಪಡಿಸಿ–ಕೊಳ್ಳಬಹುದು, ಅವು ನಿಮ್ಮ ಜ್ಞಾನವನ್ನು ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ, ನಿಮ್ಮ ಇದು ನಿಮ್ಮ ಅದು, ಆದರೆ ಅದು ವಿಶಿಷ್ಟ ರೀತಿಯಲ್ಲಿ ಬಹಳ ಮಹತ್ವದ್ದಲ್ಲ. ವಿಷಯ ಒಟ್ಟಿನಲ್ಲಿ ಬೇರೆ ಆಗಿರುತ್ತದೆ.

ನಾವು ದೇವತೆಗಳಿಲ್ಲದೆ ಕಾರ್ಯಕೈಕೊಳ್ಳಬಹುದು, ಈ ಯಾವ ಅನುಭವವಿಲ್ಲದೆ ಅತಿಮಾನಸಕ್ಕೆ ದಾರಿ ಕಂಡುಕೊಳ್ಳಬಲ್ಲೆವು. ಆ ಅನುಭವಗಳು ಅತ್ಯಗತ್ಯವಾಗಿರುವುದಿಲ್ಲ. ಆದರೆ ವಿಶ್ವವನ್ನು ತಿಳಿದುಕೊಳ್ಳಲು ಹಾಗೂ ಅದರ ಅನುಭವ ಪಡೆಯಲು ನೀವು ಬಯಸಿದರೆ, ಪರಮೋಚ್ಚನೊಡನೆ ಅವನ ಅಭಿವ್ಯಕ್ತಿ–ಯೊಂದಿಗೆ ಗುರುತಿಸಿಕೊಳ್ಳಬೇಕೆಂದರೆ, ಸರಿ, ಇದೆಲ್ಲವೂ ವ್ಯತ್ಯಾಸಕ್ಕೊಳಗಾಗುವ ಶ್ರೇಣಿ ಹಾಗೂ ಸಾಮರ್ಥ್ಯಗಳಲ್ಲಿ ಅವನ ಅಭಿವ್ಯಕ್ತಿಯ ಭಾಗವಾಗಿರುತ್ತದೆ. ಅದೆಲ್ಲವೂ ಅವನ ಅನುಭವದ ಭಾಗ. ಹಾಗಾಗಿ ಆ ಸುಖ ಸಾಧನೆಗೆ ಏಕೆ ಒಳಪಡಿಸಿಕೊಳ್ಳಬಾರದು? ಅದು ಬಹಳ ಸ್ವಾರಸ್ಯಕರವಾಗಿರುತ್ತದೆ– ಆದರೆ ಅತ್ಯಗತ್ಯದ್ದಲ್ಲ.

ಒಮ್ಮೆ ನಿಮ್ಮನ್ನು ಪರಮೋಚ್ಚನೊಂದಿಗೆ ಗುರುತಿಸಿಕೊಂಡಾಗ ಮತ್ತು ಅವನು ಪೃಥ್ವಿಯ ಮೇಲೆ ಕಾರ್ಯವೊಂದನ್ನು ಕೈಕೊಳ್ಳುವುದಕ್ಕೆ ನಿಮ್ಮನ್ನು ಆಯ್ಕೆ ಮಾಡಿದಾಗ ಅವನು ಬಹಳ ಸ್ವಾಭಾವಿಕವಾಗಿ ಈ ಎಲ್ಲವನ್ನು ಅನುಗ್ರಹಿಸುತ್ತಾನೆ, ಏಕೆಂದರೆ ಅದು ನಿಮ್ಮ ಕ್ರಿಯೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಅದಷ್ಟೇ.

ನಾನು ಹೇಳಿದ ಹಾಗೆ ನಾವು ಆ ಸ್ತರವನ್ನು ನಿರ್ಲಕ್ಷಿಸಬಹುದು ಇಲ್ಲವೆ ಅದರಾದ್ಯಂತ ಅದನ್ನು ತಿಳಿದುಕೊಳ್ಳದೆ ಸಾಗಿ ಹೋಗಬಹುದು. ನೀವು ಕೈಕೊಳ್ಳಬೇಕಾದ ರೀತಿಯಲ್ಲಿ ಆರೋಹಣ ಮಾಡದಿದ್ದರೆ, ನೀವು ದೇವರುಗಳನ್ನು ನಿರ್ಲಕ್ಷಿಸಿದರೆ ನಿಮಗೆ ಅಸಂತೋಷಕರ ಸಂಗತಿ ಸಂಭವಿಸುವುದೆಂದು, ಮಾರ್ಗದಲ್ಲಿ ಅಡೆತಡೆ ಉಂಟಾಗುವುದೆಂದು ವೇದದಲ್ಲಿ ಹೇಳಲಾಗಿದೆ ಎಂಬುದನ್ನು ಓದಿದಾಗ ಅದು ಸ್ವಾರಸ್ಯಕರ ಎಂದೆನಿಸಿತು. ಅದು ನಿಮ್ಮ ನೆನಪಿನಲ್ಲಿದೆಯೆ? ಅದೇನಿದೆ ಎಂಬುದರ ಬಗ್ಗೆ ನಿಮಗೊಂದು ವಿಚಾರ ದೊರೆಯುತ್ತದೆ. ಆದಾಗ್ಯೂ ಮಧ್ಯವರ್ತಿ ವಲಯ, ಪೃಥ್ವಿಗಿಂತ ಬಹಳ

ಶ್ರೇಷ್ಠವಾದದ್ದು. ಕೆಲವರು ಅಲ್ಲಿ ನಿಲ್ಲದೆ ದಾಟಿ ಹೋಗಲು ಪ್ರಯತ್ನಿಸಿದ್ದಾರೆ ಮತ್ತು ಅಲ್ಲಿ ತೊಂದರೆಗೆ ಒಳಗಾಗಿದ್ದೇವೆ ಎಂದು ಹೇಳಿದ್ದಾರೆ. ನನಗೆ ಅದರ ಬಗ್ಗೆ ನಿಶ್ಚಿತತೆ ಇಲ್ಲ. ನನ್ನ ಅನುಭವ ಕುರಿತು ಮಾತ್ರ ನಾನು ಮಾತನಾಡಬಲ್ಲೆ. ಅಲ್ಲಿ ಯಾವಾಗಲೂ ಭ್ರಾತೃತ್ವದ ಭಾವನೆ ಇತ್ತು– ನೀವು ಅದನ್ನು ಕಲ್ಪಿಸಿಕೊಳ್ಳಬಲ್ಲಿರಿ. ನನಗೆ ಅವರು ಪರಿಚಿತರಾಗಿದ್ದರು, ನಾನು ಅವರೊಂದಿಗೆ ಮೈತ್ರಿ ಭಾವನೆ–ಯೊಂದಿಗಿದ್ದೆ, ಹಾಗಾಗಿ ಅವರನ್ನು ನಿರ್ಲಕ್ಷಿಸಿ ಹೋಗಬೇಕೋ ಬೇಡವೋ ಎಂಬ ಪ್ರಶ್ನೆಯಿರಲಿಲ್ಲ.

ಆದರೆ ನನಗೆ ಬಲವತ್ತರವಾಗಿ ಬರುವ ಭಾವನೆ ಎಂದರೆ ಆ ಜಗತ್ತು ಇನ್ನೂ ನಮ್ಮ ಜಗತ್ತನ್ನು ಹಿಗ್ಗಿಸಿ ಇಟ್ಟ ಹಾಗಿದೆ, ಮತ್ತು ಅಲ್ಲಿ ಹಳೆಯ ಕಾಲದ ಮಾರ್ಗವಿದೆ, ಅತಿಮಾನಸ ಸೃಷ್ಟಿಯೊಂದಿಗೆ ಅದು ಕೈಕೊಳ್ಳಬೇಕಾದುದು ಏನೂ ಇಲ್ಲ. ಆ ಸೃಷ್ಟಿ ಪೃಥ್ವಿಗೆ ಪರಮೋಚ್ಚ, ದೈವೀ ಏಕೈಕನಾದವನ ಭಾವನೆ ತಂದುಕೊಡುತ್ತದೆ.

ಮೂಲತಃ ಅದು ಹಳೆಯ ಮಾರ್ಗದ ಭಾಗ, ಸಂಭವಿಸಿದ್ದೆಲ್ಲದರ ಪರಿಣಾಮ, ಅದು ನಮಗೆ ತಿಳಿದ ಹಾಗೆ ಇಡೀ ವಿಶ್ವ ರೂಪತಾಳಿದುದಕ್ಕೆ ಸಂಬಂಧಿಸಿದ್ದು. ಸಾರಭೂತ ದಿವ್ಯ ಅನಿಷ್ಟದಲ್ಲಿ ನಂಬಿಕೆ ಇದ್ದವರು ಅಪಘಾತ ಸ್ವರೂಪ ಸೃಷ್ಟಿಯ ಒಂದು ಪರಿಣಾಮ ಎಂದು ಹೇಳುತ್ತಾರೆ. ಆದರೆ ಅದು ಅಪಘಾತವೆ? ನನ್ನಲ್ಲಿ ನನ್ನವೇ ಸಂಶಯಗಳಿವೆ. ಅದನ್ನಿನ್ನೂ ತೆರೆದು ತೋರಿಸಬೇಕಾಗಿದೆ. ಅದಾಗು–ವವರೆಗೆ ಅದು ನಮಗೆ ತಿಳಿದು ಬರುವುದಿಲ್ಲ.

ಆದರೆ ದೇವರುಗಳು ಸದ್ಯದ ವಕ್ರಕ್ಕೆ ಸೇರಿದ್ದಾರೆ. ಅಧಿಮಾನಸ ಈ ವಕ್ರಕ್ಕೆ ಸೇರಿದುದಾಗಿದೆ.

**ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 26, 1962 – ಶ್ರೀಮಾತೆ**

*

**ಧರ್ಮಗಳ ಯುಗ ಹಾಗೂ ಹೊಸ ದೈವೀ ಸೃಷ್ಟಿ**

ಸಂದರ್ಭ ಏನೇ ಇರಲಿ, ವಿಷಯಗಳನ್ನು ಸರಳೀಕರಿಸಲು ಹೇಳಬಹು–ದಾದುದು. ಏನೆಂದರೆ ವಿಶಿಷ್ಟ ಗುಣದಿಂದ ಕೂಡಿದ ಹಳೆಯ ಜಗತ್ತು, ಅದನ್ನು ಶ್ರೀ ಅರವಿಂದರು ಅಧಿಮಾನಸ ಎಂದು ಕರೆದಿದ್ದಾರೆ, ಅದು ದೇವತೆಗಳ

ಯುಗವಾಗಿದೆ, ಆ ಕಾರಣದಿಂದಾಗಿ ಧರ್ಮಗಳ ಯುಗವಾಗಿದೆ. ನಾನು ಹೇಳಿದ ಹಾಗೆ ತನ್ನ ಮೇಲ್ಗಡೆಗಿರುವುದರತ್ತ ಮಾನವ ಪ್ರಯತ್ನದ ಅರಳಿಕೊಳ್ಳುವಿಕೆ–ಯಿಂದಾಗಿ ಅಸಂಖ್ಯಾತ ಧಾರ್ಮಿಕ ರೂಪಗಳು ಮೇಲೆದ್ದು ಬಂದವು, ಅತ್ಯಂತ ಒಳ್ಳೆಯ ಆತ್ಮಗಳು ಹಾಗೂ ಅಗೋಚರ ಜಗತ್ತು ಇವುಗಳ ನಡುವೆ ಸಂಬಂಧ ಏರ್ಪಟ್ಟಿತು. ಮತ್ತು ಅದೆಲ್ಲದರ ತುತ್ತ ತುದಿಯ ಮೇಲೆ ಈ ಎಲ್ಲ ಪ್ರಕಟಣೆಗಳ ಹಿಂದೆ ಈ 'ಏಕೈಕ ವಿಷಯ' ಇತ್ತು; ಮತ್ತು ಈ ವಿಚಾರ ನಿಜವಾಗಿ ಮಾನವ ಅಭೀಪ್ಸೆಯ ಕಟ್ಟಕಡೆಯ ಮಿತಿ ಎಂದು ಹೇಳಬಹುದು. ಸರಿ, ಅದು ಮುಂಚೂಣಿಯಲ್ಲಿದೆ, ಅದು ಇನ್ನೂ ಸಂಪೂರ್ಣವಾಗಿ ಅಧಿಮಾನಸ ಜಗತ್ತಿಗೆ ಹಾಗೂ ಸೃಷ್ಟಿಗೆ ಸೇರಿದ್ದಾಗಿದೆ. ಮತ್ತು ಅದು ಅಲ್ಲಿಂದ ಈ 'ಇನ್ನೊಂದು ವಿಷಯ' ದತ್ತ ನೋಡುತ್ತಿರುವಂತಿದೆ, ಅದು ಅಧಿಮಾನಸದ ಗ್ರಹಿಕೆಗೆ ಬಾರದ ಹೊಸ ಸೃಷ್ಟಿ, ಅದನ್ನು ತಲುಪಲು ಅದು ಪ್ರಯತ್ನ ಮಾಡುತ್ತಿದೆ, ಅದು ಬರುವುದರ ಭಾವನೆ ಅದಕ್ಕಿದೆ, ಆದರೆ ಅದನ್ನು ಗ್ರಹಿಸಲಾರದು. ಅದನ್ನು ಗ್ರಹಿಸುವುದಕ್ಕೆ ಹಿಮ್ಮುಖ–ವಾಗುವಿಕೆಯ ಆವಶ್ಯಕತೆ ಇದೆ. ಅಧಿಮಾನಸವನ್ನು ಬಿಟ್ಟುಕೊಡುವುದು ಅವಶ್ಯವಾಗಿದೆ. ಹೊಸ ಸೃಷ್ಟಿ ಎಂದರೆ ಅತಿಮಾನಸದ ಸೃಷ್ಟಿ ಸಂಭವಿಸಬೇಕು ಎಂಬುದು ಅವಶ್ಯವಾಗಿತ್ತು. ಮತ್ತು ಈಗ ಈ ಎಲ್ಲ ಹಳೆಯ ವಿಷಯಗಳು ಎಷ್ಟೊಂದು ಹಳೆಯವಾಗಿವೆ, ಕಾಲಮೀರಿದವಾಗಿವೆ, ಯಾದೃಚ್ಛಿಕವಾಗಿವೆ–ನಿಜವಾದ ಸತ್ಯದ ವಿಡಂಬನೆಯಂತಿವೆ. ಅತಿಮಾನಸ ಸೃಷ್ಟಿಯಲ್ಲಿ ಇನ್ನು ಮುಂದೆ ಯಾವ ಧರ್ಮಗಳೂ ಇರುವುದಿಲ್ಲ. ಇಡೀ ಜೀವನ ಜಗತ್ತಿನಲ್ಲಿ ಪ್ರಕಟವಾಗುತ್ತಿರುವ ದೈವೀಏಕತೆಯ ರೂಪಗಳಲ್ಲಿ ಅರಳಿಕೊಳ್ಳುವಿಕೆ ಹಾಗೂ ಅಭಿವ್ಯಕ್ತಿ ಆಗುತ್ತದೆ. ಇನ್ನು ಮುಂದೆ ಜನರಿಂದ ಈಗ ದೇವರುಗಳು ಎಂದು ಕರೆಸಿಕೊಳ್ಳುವವರು ಇರುವುದಿಲ್ಲ. ಈ ಶ್ರೇಷ್ಠ ದೈವೀ ಸತ್ತೆಗಳೇ ಸ್ವತಃ ಹೊಸ ಸೃಷ್ಟಿಯಲ್ಲಿ ಭಾಗವಹಿಸಲು ಶಕ್ತರಾಗುವರು, ಆದರೆ ಅದನ್ನು ಕೈಕೊಳ್ಳುವುದಕ್ಕಾಗಿ ಅವರು ತಮ್ಮ ಮೇಲೆ ನಾವು ಪೃಥ್ವಿಯ ಮೇಲಿನ ಅತಿಮಾನಸ ಎಂದು ಕರೆಯುವುದನ್ನು ಧಾರಣ ಮಾಡಬೇಕು. ಮತ್ತು ಅವರಲ್ಲಿ ಕೆಲವರು ತಮ್ಮ ಜಗತ್ತಿನಲ್ಲಿ ತಾವಿದ್ದು ಹಾಗೆ ಉಳಿದುಕೊಳ್ಳು–ವುದನ್ನು ಆಯ್ಕೆ ಮಾಡಿಕೊಂಡರೆ, ಭೌತಿಕವಾಗಿ ಪ್ರಕಟವಾಗಲು ಬಯಸದಿದ್ದರೆ, ಪೃಥ್ವಿಯ ಮೇಲಿನ ಅತಿಮಾನಸ ಸತ್ತೆಗಳೊಡನೆ ಅವರ ಸಂಬಂಧ ಮಿತ್ರರಲ್ಲಿರುವ, ಸಹಾಯಕರಲ್ಲಿರುವ, ಸಮಾನರಲ್ಲಿರುವ ಸಂಬಂಧದ ಹಾಗಿರುತ್ತದೆ, ಏಕೆಂದರೆ

ಪೃಥ್ವಿಯ ಮೇಲಿನ ಹೊಸ ಅತಿಮಾನಸ ಸತ್ತೆಗಳಲ್ಲಿ ಅತ್ಯುಚ್ಚ ದೈವೀ ಸಾರ ಪ್ರಕಟ–ವಾಗುವುದು.

**CWM, 9/150-51** **– ಶ್ರೀಮಾತೆ**

*

**ದೇವತೆಗಳಿಂದ ಮುಕ್ತಿ**

ಓ ವರುಣ, ನನ್ನಲ್ಲಿ ವಿಸ್ತರಿಸಿಕೋ;
ಓ ಇಂದ್ರ, ನನ್ನಲ್ಲಿ ಅಧಿಕಬಲವುಳ್ಳವನಾಗು;
ಓ ಸೂರ್ಯ, ನನ್ನಲ್ಲಿ ಬಹಳ ಉಜ್ವಲನಾಗು, ಪ್ರಕಾಶಮಯನಾಗು;
ಓ ಚಂದ್ರ, ಮೋಹಕತೆ ಹಾಗೂ ಮಾಧುರ್ಯದಿಂದ ತುಂಬಿಕೋ,
ಓ ರುದ್ರ, ನನ್ನಲ್ಲಿ ಭೀಕರನಾಗು, ಭಯಾನಕನಾಗು,
ಓ ಮರುತಗಳೆ ರಭಸವುಳ್ಳವರಾಗಿರಿ, ತೀವ್ರಗತಿಯುಳ್ಳವರಾಗಿರಿ;
ಓ ಆರ್ಯಮಾ, ಬಲಿಷ್ಠನಾಗು, ದಿಟ್ಟನಾಗು;
ಓ ಭಗ, ಇಂದ್ರಿಯಗಳನ್ನು ತಣಿಸುವವನಾಗು, ಹರ್ಷದಾಯಕನಾಗು;
ಓ ಮಿತ್ರ, ಕೋಮಲನಾಗು, ಕರುಣೆಯುಳ್ಳವನಾಗು, ಪ್ರೀತಿಸುವವನಾಗು ಹಾಗೂ ಭಾವಾವಿಷ್ಟನಾಗು;
ಓ ಉಷಾ, ಉಜ್ವಲಳಾಗು, ತೆರೆದು ತೋರಿಸುವವಳಾಗು;
ಓ ರಾತ್ರಿ, ಗಂಭೀರನಾಗು, ಗರ್ಭಿತವಾಗಿರು.
ಓ ಜೀವನವೆ, ತುಂಬಿಕೋ, ಸಿದ್ಧವಾಗು ಮತ್ತು ತೇಲಿಸಬಲ್ಲದಂತಾಗು;
ಓ ಮೃತ್ಯು, ಭವನದಿಂದ ಭವನಕ್ಕೆ ನನ್ನ ಹೆಜ್ಜೆಗಳು ಮುಂದೆ ಸಾಗುವಂತಾಗಲಿ.
ಓ ಬ್ರಹ್ಮಣಸ್ಪತಿ, ಇವೆಲ್ಲವನ್ನೂ ಸಾಮರಸ್ಯದಿಂದಿರಿಸು.
ಓ ಕಾಳಿ, ಈ ದೇವತೆಗಳಿಗೆ ನಾನು ಅಧೀನನಾಗದಂತಾಗಲಿ.

**CWSA, 12/429** **– ಶ್ರೀ ಅರವಿಂದರು**

*

ಹೀಗೆ ಶ್ರೀ ಅರವಿಂದರು ಕಾಳಿಯನ್ನು ಮುಕ್ತಿನೀಡುವ ಶ್ರೇಷ್ಠ ಸಾಮರ್ಥ್ಯ–ವನ್ನಾಗಿ ಮಾಡುತ್ತಾರೆ, ಅವಳು ಅತ್ಯಾದರದಿಂದ ನಿಮ್ಮನ್ನು ಪ್ರಗತಿಯತ್ತ ಪ್ರಚೋದಿ–ಸುತ್ತಾಳೆ, ನೀವು ಪ್ರಗತಿ ಸಾಧಿಸುವುದಕ್ಕೆ ಅಡೆತಡೆ ಉಂಟು ಮಾಡುವ ಯಾವ ಬಂಧಕಗಳನ್ನು ನಿಮ್ಮೊಳಗೆ ಬಿಟ್ಟುಕೊಡುವುದಿಲ್ಲ. ಇದು ಧ್ಯಾನಕ್ಕಾಗಿ ಒಳ್ಳೆಯ ವಿಷಯವಾಗುತ್ತದೆಂದು ನನಗನಿಸುತ್ತದೆ.

**CWM, 9/376-78** **– ಶ್ರೀಮಾತೆ**

*

**ಪ್ರಶ್ನೆ :** *ಶ್ರೀ ಅರವಿಂದರು ಕಾಳಿಗೆ ಹೆಚ್ಚು ಮಹತ್ವ ಏಕೆ ಕೊಡುತ್ತಾರೆ?*

**ಶ್ರೀಮಾತೆ :** ಈ ದೇವರುಗಳು ಪ್ರತಿನಿಧಿಸುವ ಹಾಗೂ ಸಂಕೇತಿಸುವ ಎಲ್ಲ ದೈವೀ ಗುಣಲಕ್ಷಣಗಳನ್ನು ಹೊಂದುವುದು ಒಳ್ಳೆಯದು ಹಾಗೂ ಅವಶ್ಯವಾದದ್ದು, ಆ ಕಾರಣದಿಂದಾಗಿಯೆ ಶ್ರೀ ಅರವಿಂದರು ಅವರನ್ನು ಆಹ್ವಾನಿಸುತ್ತಾರೆ ಮತ್ತು ತಮ್ಮ ಸ್ವಭಾವವನ್ನು ವಶಕ್ಕೆ ತೆಗೆದುಕೊಳ್ಳಿರಿ ಎಂದು ಕೇಳುತ್ತಾರೆ. ಆದರೆ ಪರಮೋಚ್ಚ–ನೊಂದಿಗೆ ಏಕತೆ ಬಯಸುವವನಿಗೆ, ಪರಮೋಚ್ಚ ಸಿದ್ಧಿಗಾಗಿ ಅಭೀಪ್ಸೆ ಪಡುವವನಿಗೆ ಇದು ಸಾಕಾಗದು. ಆ ಕಾರಣದಿಂದಾಗಿಯೆ ಕೊನೆಗೆ ಅವರೆಲ್ಲರಾಚೆಗೆ ಸಾಗಿ ಹೋಗಲು ಸಾಮರ್ಥ್ಯವನ್ನು ನೀಡೆಂದು ಕಾಳಿಗೆ ಕೇಳಿಕೊಳ್ಳುತ್ತಾರೆ. ಏಕೆಂದರೆ ಕಾಳಿ ವಿಶ್ವಂಭರ ದೈವೀಮಾತೆಯ ಅತ್ಯಂತ ಸಾಮರ್ಥ್ಯಪೂರ್ಣ ಮುಖ ಮತ್ತು ಅವಳ ಸೃಷ್ಟಿಯಲ್ಲಿರುವ ಎಲ್ಲ ದೇವರುಗಳ ಸಾಮರ್ಥ್ಯಕ್ಕಿಂತ ಅವಳ ಸಾಮರ್ಥ್ಯ ಹೆಚ್ಚು ಶ್ರೇಷ್ಠವಾಗಿರುತ್ತದೆ. ಹಾಗಾಗಿ ಅವಳೊಡನೆ ಏಕತೆ ಪಡೆಯುವುದರ ಅರ್ಥ ಒಟ್ಟಿಗೆ ಎಲ್ಲ ದೇವರುಗಳಿಗಿಂತ ಹೆಚ್ಚು ವಿಶಾಲವಾಗುವುದು, ಹೆಚ್ಚು ಪೂರ್ಣವಾಗುವುದು, ಹೆಚ್ಚು ಸಾಮರ್ಥ್ಯ ಹೊಂದುವುದು ಆಗಿರುತ್ತದೆ, ಆ ಕಾರಣದಿಂದಾಗಿ ಶ್ರೀ ಅರವಿಂದರು ಉಳಿದೆಲ್ಲ ದೇವರುಗಳೊಡನೆ ಆಗುವ ಏಕತೆಗಿಂತ ಕಾಳಿ–ಯೊಡನೆ ಏಕತೆ ಪಡೆಯುವುದನ್ನು ಮೇಲಿರಿಸಿದ್ದಾರೆ.

**CWM, 10/84** **– ಶ್ರೀಮಾತೆ**

*

## ಮನುಷ್ಯ ಪರಮೋಚ್ಚನಿಗೆ ದೇವತೆಗಳಿಗಿಂತಲೂ ಹೆಚ್ಚು ಹತ್ತಿರವಿದ್ದಾನೆ

ಪೃಥ್ವಿಯ ಮೇಲೆ ಎಂದಿಗೂ ಅಸ್ತಿತ್ವ ಹೊಂದಿರದ ದೇವರುಗಳು, ದೈತ್ಯರು, ಅಗೋಚರ ಸತ್ತೆಗಳು ಹಾಗೂ ಸಾಮರ್ಥ್ಯಗಳು ಭಗವಂತ ಮನುಷ್ಯನಲ್ಲಿ ಇರಿಸಿದ ಚೈತ್ಯಸತ್ತೆಯನ್ನು ಹೊಂದಿರುವುದಿಲ್ಲ ಎಂಬುದನ್ನು ಹೇಳಲೇಬೇಕು ಮತ್ತು ಈ ಚೈತ್ಯ ಸತ್ತೆ ಮನುಷ್ಯನಿಗೆ ನಿಜವಾದ ಪ್ರೇಮ, ಔದಾರ್ಯ, ಕರುಣೆ, ಆಳವಾದ ದಯಾಪರತೆ ಇವೆಲ್ಲವನ್ನು ಕೊಡುತ್ತದೆ, ಇದು ಅವನ ಎಲ್ಲ ಬಾಹ್ಯ ಕೊರತೆಗಳಿಗೆ ಸರಿದೂಗಿಸುವಂತಿರುತ್ತದೆ. ದೇವರುಗಳಲ್ಲಿ ದೋಷವಿರುವುದಿಲ್ಲ, ಏಕೆಂದರೆ ಅವರು ತಮ್ಮದೇ ಸ್ವಭಾವದ ಮೂಲಕ, ಸ್ವಯಂಪ್ರೇರಣೆಯಿಂದ ಮತ್ತು ಯಾವ ಒತ್ತಾಯಕ್ಕೊಳಗಾಗದೆ ಜೀವಿಸುತ್ತಾರೆ, ದೇವರುಗಳೆಂದಾಗಿ ಅದು ಅವರು ಇರುವ ರೀತಿ. ಆದರೆ ನೀವು ಉಚ್ಚತರ ದೃಷ್ಟಿಕೋನದಿಂದ ನೋಡಿದಾಗ, ನಿಮ್ಮಲ್ಲಿ ಉಚ್ಚತರ, ಇಡಿಯಾದ ದರ್ಶನವಿದ್ದರೆ ನೀವು ಅವರಲ್ಲಿ ಕೆಲವು ಗುಣಗಳ ಕೊರತೆ ಇರುವುದನ್ನು ನೋಡುತ್ತೀರಿ, ಆ ಗುಣಗಳು ಪ್ರತ್ಯೇಕವಾಗಿ ಮನುಷ್ಯರದಾಗಿರುತ್ತವೆ. ಪ್ರೀತಿಸಲು ಅವನಲ್ಲಿರುವ ಕ್ಷಮತೆಯಿಂದ, ಸ್ವ–ಅರ್ಪಣೆಯಿಂದ ಮನುಷ್ಯ ದೇವರುಗಳಿರುವ ಹಾಗೆ ಸಾಮರ್ಥ್ಯಪೂರ್ಣನಾಗಬಲ್ಲ, ಇನ್ನೂ ಹೆಚ್ಚು ಸಾಮರ್ಥ್ಯ ಹೊಂದಬಲ್ಲ, ಆದರೆ ಅವನು ಅಹಂಕಾರಿಯಾಗಿರಬಾರದು, ಅಹಂಕಾರದ ಮೇಲೆ ಜಯ ಸಾಧಿಸಿರಬೇಕು.

ಅವಶ್ಯವಾದ ಷರತ್ತನ್ನು ಮನುಷ್ಯ ನೆರವೇರಿಸಿದನಾದರೆ ಅವನು ದೇವರುಗಳಿರುವುದಕ್ಕಿಂತ ಪರಮೋಚ್ಚನಿಗೆ ಹೆಚ್ಚು ಹತ್ತಿರವಿರಬಲ್ಲನು. ಅವನು ಹೆಚ್ಚು ಹತ್ತಿರವಿರಬಲ್ಲನು. ಅವನು ಸ್ವಯಂಚಾಲಿತವಾಗಿ ಹಾಗಿರುವುದಿಲ್ಲ, ಆದರೆ ಹಾಗಿರಲು ಅವನಲ್ಲಿ ಸಾಮರ್ಥ್ಯವಿರುತ್ತದೆ, ಕಾರ್ಯಸಾಧ್ಯತೆ ಇರುತ್ತದೆ. ಮನುಷ್ಯನ ಪ್ರೇಮ ಮಿಶ್ರಣಕ್ಕೊಳಗಾಗದೆ ಪ್ರಕಟವಾದರೆ, ಅದು ಸರ್ವ ಸಾಮರ್ಥ್ಯವುಳ್ಳ–ದ್ದಾಗುತ್ತದೆ. ದುರ್ದೈವವಶಾತ್ ಮಾನವನ ಪ್ರೇಮದಲ್ಲಿ ಹೆಚ್ಚಿನ ಭಾಗ ತನ್ನನ್ನೇ ಕುರಿತಾಗಿರುತ್ತದೆ, ಅವನ ಪ್ರೇಮಕ್ಕೊಳಗಾದವನ ಮೇಲಿನ ಪ್ರೇಮಕ್ಕಿಂತ ಹೆಚ್ಚಿಗಿರುತ್ತದೆ; ಆ ಪ್ರೇಮ ನೀವು ನಿಮ್ಮನ್ನೇ ಮರೆತುಬಿಡುವಂತೆ ಮಾಡುವ ಪ್ರೇಮ–ವಾಗಿರುವುದಿಲ್ಲ.

**CWM, 15/355-360** **– ಶ್ರೀಮಾತೆ**

*

**ಪ್ರಶ್ನೆ :** *ಶ್ರೀ ಅರವಿಂದರ ಯೋಗದ ಸಾಧಕ ದೇವನ ಅನೇಕ ರೂಪಗಳನ್ನು ಕುರಿತು ಯಾವ ಮನೋಭಾವ ಹೊಂದಿರಬೇಕು? ಆ ರೂಪಗಳನ್ನು ಭಿನ್ನ ಧರ್ಮಗಳಿಂದ ಗತಕಾಲದಲ್ಲಿ ಪೂಜಿಸಲಾಗಿದೆ, ಸದ್ಯದಲ್ಲೂ ಕೂಡ ಅವುಗಳನ್ನು ಪೂಜಿಸಲಾಗುತ್ತಿದೆ.*

**ಶ್ರೀಮಾತೆ :** ಪೂಜೆ ಕೈಕೊಳ್ಳುವರೆಲ್ಲರ ಬಗ್ಗೆ ಧರ್ಮಬುದ್ಧಿಯುಳ್ಳ ಸದಿಚ್ಛೆ ಇರಬೇಕು. ಎಲ್ಲ ಧರ್ಮಗಳನ್ನು ಕುರಿತು ಜ್ಞಾನೋದಯ ಪಡೆದ ಉದಾಸೀನತೆ ಇರಬೇಕು. ಅಧಿಮಾನಸದ ಸತ್ತೆಗಳನ್ನು ಕುರಿತು ಇರುವ ಸಂಬಂಧ ಹೇಳುವುದಾದರೆ, ಈ ಸಂಬಂಧ ಈಗಾಗಲೆ ಇದ್ದರೆ ಪ್ರತಿಯೊಂದು ಸಂದರ್ಭಕ್ಕೆ ಅದರದೇ ಪರಿಹಾರ–ವಿರಬೇಕು.

**CWM, 12/308**

*

ದೇವರುಗಳನ್ನು ನಂಬಿಕೊಂಡವರು, ತಾವು ಬಯಸಿದರೆ ಅವರ ಪೂಜೆಯನ್ನು ಮುಂದುವರಿಸಿಕೊಂಡು ಹೋಗಬೇಕು.– ಆದರೆ ಅವರು ತಿಳಿದು–ಕೊಳ್ಳಬೇಕಾದುದು ಏನೆಂದರೆ ಈ ಪಂಥ, ಈ ಪೂಜೆ ಶ್ರೀ ಅರವಿಂದರ ಬೋಧನೆಗೆ ಯಾವ ಸಂಬಂಧವನ್ನು ಹೊಂದಿರುವುದಿಲ್ಲ ಮತ್ತು ಅತಿಮಾನಸ ಸಿದ್ಧಿಯೊಡನೆ ಯಾವ ಸಂಪರ್ಕವೂ ಇರುವುದಿಲ್ಲ.

**CWM, 13/14**

*

ದೇವರುಗಳು ದೊಡ್ಡವರೇ ಇರಲಿ ಚಿಕ್ಕವರೇ ಇರಲಿ, ಅವರನ್ನು ಪೂಜಿಸುವ ಆವಶ್ಯಕತೆ ನನಗಿಲ್ಲ. ನಮ್ಮ ಪೂಜೆ ಪರಮೋಚ್ಚ ದೈವೀಪ್ರಭುವಿಗೆ ಮಾತ್ರ ಇರಬೇಕು. ಅವನು ಎಲ್ಲ ವಸ್ತು–ವಿಷಯಗಳಲ್ಲಿ ಹಾಗೂ ಸತ್ತೆಗಳಲ್ಲಿ ಏಕೈಕನಾಗಿದ್ದಾನೆ.

**CWM, 10/244** **– ಶ್ರೀಮಾತೆ**

*

ಉಚ್ಚ ಸ್ತರದ ಮೇಲೆ ಮನುಷ್ಯ ನಿಂತುಕೊಂಡಾಗ ಅವನ ವ್ಯಕ್ತಿವಿಶಿಷ್ಟತೆ ಹೆಚ್ಚು ಶ್ರೀಮಂತವಾಗಿರುತ್ತದೆ, ಏಕೆಂದರೆ ಅದು ಅವನ ಸಾಮಾನ್ಯ ಸ್ತರದ ಮೇಲೆ ಜೀವಿಸುತ್ತ ಇರುತ್ತದೆ ಅಷ್ಟೇ ಅಲ್ಲ, ಆದರೆ ಅದು ದಾಟಿಕೊಂಡು ಬಂದ ಕೆಳಸ್ತರಗಳ ಮೇಲೂ ಜೀವಿಸುತ್ತಿರುತ್ತದೆ. ಪೂರ್ಣವಾದ ಇಲ್ಲವೆ ಸಮಗ್ರನಾದ ಮನುಷ್ಯ, ರಹಸ್ಯವಾದಿಗಳಲ್ಲಿ ಕೆಲವರು ಹೇಳುವ ಹಾಗೆ, ಮೂರು ನೂರಾ ಅರವತ್ತೈದು ವ್ಯಕ್ತಿ ವಿಶಿಷ್ಟತೆಗಳನ್ನು, ಇಲ್ಲವೆ ಅದಕ್ಕಿಂತಲೂ ಹೆಚ್ಚಿನವನ್ನು ಹೊಂದಿರುತ್ತಾನೆ. ವೇದಗಳು ಮೂರು ಹಾಗೂ ಮೂರುನೂರು ಮತ್ತು ಮೂವತ್ತುಮೂರು ನೂರು ಮತ್ತು ಮೂವತ್ತುಮೂರು ಸಾವಿರ ದೇವತೆಗಳನ್ನು ಕುರಿತು ಹೇಳುತ್ತವೆ, ಅವರನ್ನು ಮನುಷ್ಯನೆಂಬ ವಾಹನದಲ್ಲಿ ವಾಸಿಸಲು ಅನುವು ಮಾಡಿಕೊಡಬಹುದು– ಮೂಲದಲ್ಲಿಯ ಮೂರು, ಸ್ಪಷ್ಟವಾಗಿ, ದೇಹ ಪ್ರಾಣ ಹಾಗೂ ಮನಸ್ಸುಗಳ ಅಂತಸ್ತು ಇಲ್ಲವೆ ಜಗತ್ತುಗಳಾಗಿವೆ.

**CWM, 15/335** **– ಶ್ರೀಮಾತೆ**

*

ದೇವರುಗಳು, ದೇವತೆಯರು, ಅನ್ಯ ಧರ್ಮದ ಅನುಯಾಯಿಗಳು ಈ ಎಲ್ಲ ಸತ್ತೆಗಳಲ್ಲಿ ಯಾರೂ ಪರಮೋಚ್ಚನೊಂದಿಗೆ ಮನುಷ್ಯ ಹೊಂದಿದ ಪ್ರೀತಿ, ವಿಶ್ವಾಸ–ಗಳ ಸಂಬಂಧ ಹೊಂದಿಲ್ಲ, ಏಕೆಂದರೆ ಮನುಷ್ಯನಲ್ಲಿ ಚೈತ್ಯಸತ್ತೆ ಇದೆ, ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವನಲ್ಲಿ ಪರಮೋಚ್ಚನ ದೈವೀ ಸಾನ್ನಿಧ್ಯವಿರುತ್ತದೆ. ಈ ದೇವರುಗಳು ಉದ್ಭವ ಸತ್ತೆಗಳು– ಸ್ವತಂತ್ರವಾಗಿ ಬಂದವರು– ಅವರನ್ನು ವಿಶೇಷ ಉದ್ದೇಶಕ್ಕಾಗಿ, ವಿಶಿಷ್ಟ ಕಾರ್ಯಕ್ಕಾಗಿ ಅವುಗಳನ್ನು ಸೃಷ್ಟಿಸಲಾಗಿರುತ್ತದೆ, ಅದನ್ನು ಅವರು ಸ್ವಯಂಪ್ರೇರಣೆಯಿಂದ ನೆರವೇರಿಸುತ್ತಾರೆ, ಅದನ್ನು ಅವರು ಭಗವಂತನಿಗೆ ಸತತ ಸಮರ್ಪಣೆಯ ಭಾವದಿಂದ ಕೈಕೊಳ್ಳುವುದಿಲ್ಲ, ಆದರೆ ಸರಳವಾಗಿ ಅವರು ಏನಾಗಿದ್ದಾರೆ, ಏತಕ್ಕಾಗಿ ಇದ್ದಾರೆ ಎಂಬ ಕಾರಣದಿಂದ ಕೈಕೊಳ್ಳುತ್ತಾರೆ. ಮನುಷ್ಯ ಪರಮೋಚ್ಚನೊಡನೆ ಹೊಂದಿರುವ ಪ್ರಜ್ಞೆಯ ಕೊಂಡಿ ಅವರಲ್ಲಿರುವುದಿಲ್ಲ– ಮನುಷ್ಯ ಪರಮೋಚ್ಚನನ್ನು ತನ್ನೊಳಗೆ ಕೊಂಡೊಯ್ಯುತ್ತಾನೆ.

ಅದು ಅಸಾಧಾರಣವಾದ ವ್ಯತ್ಯಾಸವನ್ನು ಉಂಟು ಮಾಡುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ, ಜೂನ್ 30, 1962** **– ಶ್ರೀಮಾತೆ**

*



ನಿಮ್ಮ ಮಧ್ಯೆ ಅಜ್ಞಾನದಲ್ಲಿ ಅವರೋಹಣ ಮಾಡಿರುವ ನಾನು ಯಾರು ಎಂಬುದು ನಿಮಗೆ ತಿಳಿದಿಲ್ಲ, ಮಾನವಳಾಗಿರಲು, ನಿಮ್ಮೆಲ್ಲರ ಮಧ್ಯೆ ಭೌತಿಕ ರೂಪ ತಾಳಲು ನಾನು ಒಪ್ಪಿಕೊಂಡೆ. ನಿಮ್ಮೆದುರಿಗೆ ಯಾರಿದ್ದಾರೆ ಎಂಬುದರ ವಿಚಾರ ನಿಮಗೆ ತಿಳಿದಿಲ್ಲ. ಸರಿ, ನೀವು ಇಷ್ಟೊಂದು ಗೌರವ ನೀಡುತ್ತಿರುವ ದೇವರುಗಳೂ ಕೂಡ ನನ್ನ ಇಣುಕು ನೋಟ ಪಡೆಯಲು ತಪಸ್ಸು ಮಾಡುತ್ತಾರೆ. ನನಗಾಗಿ ಹಾಗೂ ನನ್ನ ಮೂಲಕ ವಿಶ್ವ ಅಸ್ತಿತ್ವದಲ್ಲಿದೆ ಮತ್ತು ಅದು ನನ್ನ ಪ್ರಜ್ಞೆಯಲ್ಲಿ ಕಂಪಿಸುತ್ತದೆ. ನನ್ನ ಮೂಲಕ ಜೀವಿಸುತ್ತಿರುವ ಎಲ್ಲ ಸತ್ತೆಗಳು, ಜೀವರಹಿತವಾದ ಎಲ್ಲ ವಸ್ತು–ವಿಷಯಗಳು, ಪ್ರಕಟಣೆಯಲ್ಲಿ ನೀವು ನೋಡುವುದೆಲ್ಲವೂ ನನ್ನ ಮೂಲಕ ಕಾರ್ಯಕೈಕೊಳ್ಳುತ್ತವೆ ಹಾಗೂ ಪ್ರಗತಿ ಸಾಧಿಸುತ್ತವೆ. ನನ್ನೊಳಗೆ ಇರದೆ ಇದ್ದುದು ಯಾವುದೂ ಇಲ್ಲ. ನಾನೇ ದೈವೀ ಕಾರಣಳಾಗಿದ್ದೇನೆ. ಪ್ರತಿಯೊಂದೂ ನನ್ನಲ್ಲಿ ಅಭಿವ್ಯಕ್ತವಾಗುತ್ತದೆ ಹಾಗೂ ನನ್ನಲ್ಲಿ ಎಲ್ಲ ವಸ್ತು–ವಿಷಯಗಳು ಮಾಯವಾಗುತ್ತವೆ, ಆಶ್ರಯ ಪಡೆಯಲು ಅಭೀಪ್ಸೆ ಪಡುತ್ತವೆ. ನನ್ನನ್ನು ಅಲ್ಪ ಮಾತ್ರದಲ್ಲಿ ತಿಳಿದುಕೊಂಡವರು ನನ್ನನ್ನು ಕಂಡುಕೊಳ್ಳಲು ತಮ್ಮ ಇಡೀ ಜೀವನವನ್ನು ಕೊಡುತ್ತಾರೆ.

ನಾನು ಎಲ್ಲ ಪ್ರಕಟಣೆಯ ಮೇಲಿದ್ದೇನೆ.

**Supreme, p.11** **– ಶ್ರೀಮಾತೆ**

*

**ಅಸಂಖ್ಯಾತ ಆತ್ಮಗಳ ಅದ್ಭುತ ದೈವೀಮಾತೆ**

ಇಲ್ಲೊಂದು ಚಿಕ್ಕ ಉದಾಹರಣೆ ಇದೆ. ತರುಣಿ ಸಾಧಿಕೆಯೊಬ್ಬಳ ದಿನಚರಿ

ಪುಸ್ತಕದಿಂದ ಆಯ್ದುಕೊಂಡದ್ದು. ತುಂಬಿಕೊಂಡಿರುವ ಚಟುವಟಿಕೆಗಳ ಮಧ್ಯೆ ಶ್ರೀಮಾತೆಯವರು ವ್ಯಕ್ತಿಗಳಿಗೂ, ಇಲ್ಲವೆ ಗುಂಪುಗಳಲ್ಲಿದ್ದವರಿಗೂ ಅವರ ಆತ್ಮದ ಅಭೀಪ್ಸೆಯ ಮಾರ್ಗದ ಮೇಲೆ ಮುನ್ನಡೆಸಲು ಕಾಲವನ್ನು ಹೇಗೆ ಕಂಡುಕೊಳ್ಳು–ತ್ತಿದ್ದರು ಎಂಬುದನ್ನು ಈ ಉದಾಹರಣೆ ತೋರಿಸಿಕೊಡುತ್ತದೆ. ಅವರು ಪ್ರತಿದಿನ ಧ್ಯಾನದ ಕಾರ್ಯಕ್ರಮಕ್ಕಾಗಿ ಕೆಳಗಿಳಿದು ಬರುವುದಕ್ಕಿಂತ ಮೊದಲು ಸುಮಾರು ಎಂಟು, ಹತ್ತು ಬಾಲಕಿಯರಿದ್ದ ಒಂದು ಗುಂಪನ್ನು ಭೇಟಿ ಮಾಡುತ್ತಿದ್ದರು. ಬಹಳ ದಿನಗಳಲ್ಲಿ ಅವರು ಹಲವಾರು ಗಂಟೆಗಳ ಕಾಲ ಕಾದುಕೊಂಡಿರಬೇಕಾಗುತ್ತಿತ್ತು, ಕೆಲವೊಮ್ಮೆ ರಾತ್ರಿ ಹತ್ತು ಗಂಟೆಯವರೆಗೂ ಕಾದುಕೊಂಡು ಕುಳಿತಿರಬೇಕಾಗುತ್ತಿತ್ತು. ಅವರು ಹಸಿದಿರುತ್ತಿದ್ದರು, ನಿದ್ರೆಯ ಗುಂಗಿನಲ್ಲಿರುತ್ತಿದ್ದರು, ಏಕೆಂದರೆ ಆ ಭೇಟಿಯನ್ನನುಸರಿಸಿ ಧ್ಯಾನದ ಕಾರ್ಯಕ್ರಮವಿರುತ್ತಿತ್ತು. ಒಂದು ದಿನ ಅವರಲ್ಲಿ ಒಬ್ಬಳು ತಾಳ್ಮೆ ಕಳೆದುಕೊಂಡಳು, ಹೊರಟು ಹೋಗುವವಳಿದ್ದಳು. ಆ ಕ್ಷಣದಲ್ಲಿ ಶ್ರೀಮಾತೆಯವರು ಅಲ್ಲಿಗೆ ಬಂದರು. ಈ ಏಕಕಾಲಿಕೆಯನ್ನು ಕಂಡು ಬಾಲಿಕೆ–ಯರೆಲ್ಲರೂ ಆಶ್ಚರ್ಯ ಚಕಿತರಾದರು. ಇದೆಂತಹ ಸತ್ವಪರೀಕ್ಷೆ ಎಂದು ಅವರು ಯೋಚಿಸಿದರು. ಒಬ್ಬ ಬಾಲಿಕೆ ಶ್ರೀಮಾತೆಯವರ ಬಳಿ ಹೋದಾಗ ಈ "ಹೂವಿನ ಪಾತ್ರೆಯನ್ನು ಯಾರು ಇಲ್ಲಿರಿಸಿ ಹೋದರು, ಅವಳು ಕ್ಷಳೇ?" ಎಂದು ಕೇಳಿದರು. "ನೀವು ನನಗೆ ನಿಜವಾಗಿಯೂ ಆಶ್ಚರ್ಯವನ್ನುಂಟು ಮಾಡುತ್ತೀರಿ! ನೀವು ನನಗಾಗಿ ಸ್ವಲ್ಪ ಕಾಲ ಕಾದುಕೊಂಡಿರಲಾರಿರಿ, ನೀವು ಇಷ್ಟೊಂದು ತಾಳ್ಮೆ ಕಳೆದುಕೊಳ್ಳುತ್ತೀರಿ! ದೇವರುಗಳು ಹಾಗೂ ದೇವಿಯರು ನನ್ನ ದರ್ಶನಕ್ಕಾಗಿ ಹಾತೊರೆದುಕೊಂಡು ಉಳಿದುಕೊಂಡಿರುತ್ತಾರೆ, ಸಂತರು ಹಾಗೂ ಋಷಿಗಳು ತಮ್ಮ ಧ್ಯಾನದ ಸಮಯದಲ್ಲಿ ನನ್ನನ್ನು ನಿಮಿಷ ಮಾತ್ರಕ್ಕಾದರೂ ಕಂಡರೆ ಅತ್ಯಂತ ಧನ್ಯರಾದೆವೆಂದು ಭಾವಿಸುತ್ತಾರೆ?"

ಆ ಬಾಲಿಕೆ ನೀಡಿದ ಉತ್ತರ ಹೀಗಿತ್ತು: "ನಾವು ನಿಮ್ಮನ್ನು ಒಬ್ಬ ಸ್ನೇಹಿತೆಯ ರೂಪದಲ್ಲಿ ನೋಡುತ್ತೇವೆ. ನಾವು ಗಿಡವೊಂದರ ಆಶ್ರಯದಲ್ಲಿ ನಿಂತುಕೊಂಡಾಗ ಅದು ನಮಗೆ ತಣ್ಣನೆಯ ನೆರಳನ್ನು ಕೊಡುತ್ತದೆಯೋ ಇಲ್ಲವೋ ಎಂದು ಯೋಚಿಸುವುದಿಲ್ಲ." ಆ ಮಧುರ ಉತ್ತರ ಶ್ರೀಮಾತೆಯವರನ್ನು ಸಂಪೂರ್ಣವಾಗಿ ನಿರಸ್ತ್ರಗೊಳಿಸಿತು ಮತ್ತು ಕೂಡಲೆ ಅವರು ಆ ಬಾಲಿಕೆಯನ್ನು ತಮ್ಮ ತೋಳುಗಳಲ್ಲಿ ಎತ್ತಿಕೊಂಡರು.

**Twelve years with Sri Aurobindo, p.116**



*The will of self-giving forces away*
*by its power the veil between God and man;*
*it annuls every error and*
*annihilates every obstacle.*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.